ಸಂಪುಟ: 05 ಸಂಚಿಕೆ: 269 ಪುಟಗಳು: 08 ಶನಿವಾರ 13 ಡಿಸೆಂಬರ್ 2025
www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail. com
ಸಂಪಾದಕರು: ಟಿ. ಹೊಂಬೇಗೌಡ RNI No. KARKAN/2021/80833 9448225696 +91 8035841833 ₹5

**ಮುಂಜಾನೆ ಮಾತು**

ಇನ್ನೊಬ್ಬರ ಹುಚ್ಚುತನ ನಮಗೆ ಕಾಣಿಸುವಷ್ಟು ಸುಲಭವಾಗಿ ನಮ್ಮ ಹುಚ್ಚುತನ ನಮಗೆ ಕಾಣಿಸದು

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

## ನಾಯಕತ್ವ ಕಚ್ಚಾಟದ ವಿರುದ್ಧ ದೆಹಲಿಗೆ ಶಾಸಕನ ದೂರು

• ಉದಯವಾಹಿನಿ, ಬೆಂಗಳೂರು

ರಾಜ್ಯ ಕಾಂಗ್ರೆಸ್ ನಲ್ಲಿ ನಾಯಕತ್ವ ಕಿತ್ತಾಟ ತೀವ್ರಗೊಂಡಿದೆ. ಎರಡು ಬಣದ ಶಾಸಕರು ಬಹಿರಂಗವಾಗಿ ಹೇಳಿಕೆ, ಪ್ರತಿ ಹೇಳಿಕೆಗಳನ್ನು ನೀಡುವ ಮೂಲಕ ಹಗ್ಗ ಜಗ್ಗಾಟದಲ್ಲಿ ತೊಡಗಿಸಿಕೊಂಡಿದ್ದಾರೆ. ಈ ನಡುವೆ ಗೊಂದಲದಿಂದ ಪಕ್ಷಕ್ಕೆ, ಸರ್ಕಾರಕ್ಕೆ ಹಿನ್ನಡೆ ಆಗ್ತಿದೆ, ಈ ಬಗ್ಗೆ ಕ್ರಮ ಕೈಗೊಳ್ಳಿ ಎಂದು ಕಾಂಗ್ರೆಸ್ ಶಾಸಕ ಬೇಳೂರು ಗೋಪಾಲಕೃಷ್ಣ ಅವರು ಹೈಕಮಾಂಡ್‌ಗೆ ದೂರು ನೀಡಲು ಮುಂದಾಗಿದ್ದಾರೆ.

ನಾಯಕತ್ವ ಬದಲಾವಣೆಯ ಬಗ್ಗೆ ಎರಡು ಬಣದ ಶಾಸಕರ ಬಹಿರಂಗ ಹೇಳಿಕೆಗೆ ಕಡಿವಾಣ ಹಾಕಬೇಕು. ಇದು ತೀವ್ರಗೊಂಡರೆ ಸಮಸ್ಯೆ ಉಲ್ಬಣಗೊಳ್ಳಲಿದೆ. ಹೀಗಾಗಿ ಹೈಕಮಾಂಡ್ ಮಧ್ಯಪ್ರವೇಶ ಮಾಡಬೇಕು ಎಂಬುದು ಆಗ್ರಹವಾಗಿದೆ. ನಾಯಕತ್ವ ಬದಲಾವಣೆ ಬಗ್ಗೆ ಬಹಿರಂಗ ಚರ್ಚೆ ಕೊಂಚ ಕಡಿಮೆ ಆಗಿತ್ತು. ಆದರೆ ಇದೀಗ ಹೇಳಿಕೆಗಳ ಭರಾಟೆ ತೀವ್ರಗೊಂಡಿದೆ. ಶಾಸಕ ಮಾಗಡಿ ಬಾಲಕೃಷ್ಣ ಮಾತನಾಡಿ, ಯತೀಂದ್ರ ಸಿದ್ದರಾಮಯ್ಯ ಅವರಿಗೆ ಮಿನಿಮಮ್ ಕಾಮನ್ ಸೆನ್ಸ್ ಇಲ್ಲ ಎಂದು ಬಾಲಕೃಷ್ಣ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ದೊಡ್ಡವರಿಗೆ ಒಂದು ನ್ಯಾಯ ಚಿಕ್ಕವರಿಗೆ ಒಂದು ನ್ಯಾಯ ಆಗುತ್ತದೆ. ಅದಕ್ಕೆ ನಮ್ಮ ಇಕ್ಬಾಲ್ ಹುಸೇನ್ ಅದ್ಭುತವಾಗಿ ಹೇಳಿದ್ದಾರೆ. ನಾವು ಮಾತನಾಡಿದ್ರೆ ಬಲಾತ್ಕಾರ, ಅವರಿಗೆ ಮಾತನಾಡಿದ್ರೆ ಚಮತ್ಕಾರ ಅಂದಿದ್ದಾರೆ ಎಂದು ಟಾಂಗ್ ಕೊಟ್ಟರು. ಈ ನಡುವೆ ಶಾಸಕ ಇಕ್ಬಾಲ್ ಹುಸೇನ್ ಅವರು ಡಿಕೆ ಶಿವಕುಮಾರ್ ಪರವಾಗಿ ಭರ್ಜರಿ ಬ್ಯಾಟಿಂಗ್ ಮಾಡಿದ್ದಾರೆ. ಸಂಕ್ರಾಂತಿ ಅಲ್ಲ, ಅಧಿವೇಶನ ಮುಗಿದ ಕೂಡಲೇ ಡಿಕೆ ಶಿವಕುಮಾರ್ ಮುಖ್ಯಮಂತ್ರಿ ಆಗ್ತಾರೆ ಎಂದು ಸ್ಫೋಟಕ ಮಾತನ್ನು ಆಡಿದ್ದಾರೆ.

## ಮತ ಕಳವು ವಿರುದ್ಧ ಪ್ರತಿಭಟನೆ ಡಿ.ಕೆ. ಶಿವಕುಮಾರ್ ದೆಹಲಿಗೆ

• ಉದಯವಾಹಿನಿ, ನವದೆಹಲಿ

'ಮತ ಕಳ್ಳತನ ವಿರುದ್ಧದ ಹೋರಾಟದಲ್ಲಿ ಭಾಗವಹಿಸಲು ಶನಿವಾರ (ಡಿ.13) ದೆಹಲಿಗೆ ತೆರಳುತ್ತಿದ್ದೇನೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು. ಸುದ್ದಿಗಾರರ ಜತೆ ಮಾತನಾಡಿದ ಅವರು, 'ಲೋಕಸಭೆ ಚುನಾವಣೆ ಸಮಯದಲ್ಲಿ ಆಗಿರುವ ಮತ ಕಳ್ಳತನವನ್ನು ರಾಹುಲ್ ಗಾಂಧಿ ಅವರು ಸಾಕ್ಷ್ಯ ಸಹಿತ ಜನರ ಮುಂದಿಟ್ಟಿದ್ದಾರೆ. ಚುನಾವಣಾ ಆಯೋಗವು ನಿರ್ದಿಷ್ಟ ರಾಜಕೀಯ ಪಕ್ಷದ ಅಸ್ತ್ರವಾಗಿದ್ದು, ನಾವು ಅದರ ವಿರುದ್ಧ ಹೋರಾಟ ಮಾಡುತ್ತಿದ್ದೇವೆ' ಎಂದರು. ★2023ರಲ್ಲೇ ನಾವು ಚಿಲುಮೆ ಅಕ್ರಮದ ಮೂಲಕ ಮತ ಕಳ್ಳತನವನ್ನು ಪತ್ತೆ ಮಾಡಿದ್ದೆವು. ನಾನು, ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರೆಲ್ಲರೂ ಚುನಾವಣಾ ಆಯೋಗಕ್ಕೆ ದೂರು ನೀಡಿ ಹೋರಾಟ ಮಾಡಿದೆವು. ಮತಕಳವು ವಿಚಾರವಾಗಿ ರಾಜ್ಯದಲ್ಲಿ ನಡೆಸಿದ ಸಹಿ ಸಂಗ್ರಹ ಅಭಿಯಾನದಲ್ಲಿ 1.43 ಕೋಟಿ ಸಹಿ ಸಂಗ್ರಹವಾಗಿದೆ' ಎಂದರು.

**ಅನುಮತಿ:** 'ಮುಂದೆ ಯಾವುದೇ ರೀತಿಯ ಅನಾಹುತ ಸಂಭವಿಸದಂತೆ ಮುನ್ನೆಚ್ಚರಿಕೆ ಕ್ರಮ ಕೈಗೊಂಡು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಕ್ರಿಕೆಟ್ ಪಂದ್ಯಗಳ ಆಯೋಜನೆಗೆ ಅನುಮತಿ ನೀಡಿದ್ದೇವೆ' ಎಂದು ಡಿ.ಕೆ. ಶಿವಕುಮಾರ್ ತಿಳಿಸಿದರು.

## ಮಾಧ್ಯಮ ಅಕಾಡೆಮಿ ಸಿಬ್ಬಂದಿ ಪಿಂಚಣಿಗೆ ಅರ್ಹರಲ್ಲ

• ಉದಯವಾಹಿನಿ, ನವದೆಹಲಿ

'ಕರ್ನಾಟಕ ಮಾಧ್ಯಮ ಅಕಾಡೆಮಿ ಮತ್ತು ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿಯ ನೌಕರರು, ಸರ್ಕಾರಿ ನೌಕರರು ಆಗಿದ್ದರೂ ಪಿಂಚಣಿ ಪಡೆಯಲು ಅರ್ಹರಲ್ಲ ಎಂದು ಹೈಕೋರ್ಟ್ ತೀರ್ಪು ನೀಡಿದೆ. 'ಅರ್ಜಿದಾರರಿಗೆ ಪಿಂಚಣಿ ಮತ್ತು ಭತ್ಯೆ ಬಿಡುಗಡೆ ಮಾಡಬೇಕು ಎಂದು ಏಕಸದಸ್ಯ ನ್ಯಾಯಪೀಠ ನೀಡಿದ್ದ ಆದೇಶವನ್ನು ಪ್ರಶ್ನಿಸಿ ಕನ್ನಡ ಸಂಸ್ಕೃತಿ ಹಾಗೂ ಮಾಹಿತಿ ಇಲಾಖೆ ಸಲ್ಲಿಸಿದ್ದ ರಿಟ್ ಮೇಲ್ಮನವಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಅನು ಶಿವರಾಮನ್ ಹಾಗೂ ನ್ಯಾಯಮೂರ್ತಿ ವಿಜಯಕುಮಾರ್ ಎ.ಪಾಟೀಲ್ ಅವರಿದ್ದ ವಿಭಾಗೀಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

ಅಕಾಡೆಮಿಯ ಮತ್ತು ಮಂಡಳಿಯ ಸಿಬ್ಬಂದಿ ಸರ್ಕಾರಿ ಸಿಬ್ಬಂದಿ ಏನಿದ್ದರೂ ಸಂಬಂಧಿತ ನಿಯಮಗಳ ಅಡಿಯಲ್ಲಿ ಅವರ ಸೇವೆಯನ್ನು ಪಿಂಚಣಿಗೆ ಅರ್ಹಗೊಳಿಸುವ ಯಾವುದೇ ನಿಬಂಧನೆಗಳಿಲ್ಲ. ಆದಾಗ್ಯೂ, ಅರ್ಜಿದಾರರ ಉದ್ಯೋಗವನ್ನು ಪಿಂಚಣಿಗೆ ಅರ್ಹ ಎಂದು ಪರಿಗಣಿಸಬೇಕೊ ಅಥವಾ ಹೇಗೆ ಎಂಬ ನಿರ್ಧಾರ ಕೈಗೊಳ್ಳುವುದು ಸರ್ಕಾರದ ವಿವೇಚನೆಗೆ ಬಿಟ್ಟ ವಿಚಾರ' ಎಂದು ನ್ಯಾಯಪೀಠ ಸ್ಪಷ್ಟಪಡಿಸಿದೆ.


'ಈ ಸಂಬಂಧದಂತೆ ನಾಲ್ಕು ತಿಂಗಳ ಒಳಗಾಗಿ ಮಾಧ್ಯಮ ಅಕಾಡೆಮಿ ಮತ್ತು ಮದ್ಯಪಾನ ಸಂಯಮ ಮಂಡಳಿಯ ವಾದವನ್ನು ಆಲಿಸಿದ ನಂತರ ಮಾಹಿತಿಯುಕ್ತ ಆದೇಶವನ್ನು ಹೊರಡಿಸಬಹುದು' ಎಂದು ಸರ್ಕಾರಕ್ಕೆ ನಿರ್ದೇಶಿಸಿದೆ.

**ಸರ್ಕಾರದ ವಾದ:** 'ಮಾಧ್ಯಮ ಅಕಾಡೆಮಿ ಮತ್ತು ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿ ನೌಕರರು ಸರ್ಕಾರದ ಸೇವೆಯಲ್ಲಿ ಇಲ್ಲ ಹಾಗೂ ಇವರೆಲ್ಲಾ, ಕರ್ನಾಟಕ ನಾಗರಿಕ ಸೇವೆಗಳ ಅಧಿನಿಯಮ-1957ರ (ಕೆಸಿಎಸ್‌ಆರ್) ಅಡಿಯಲ್ಲಿನ ವ್ಯಾಖ್ಯಾನದ ಪ್ರಕಾರ ಸರ್ಕಾರಿ ನೌಕರರಲ್ಲ' ಎಂದು ಸರ್ಕಾರ ವಾದ ಮಂಡಿಸಿತ್ತು.

# ವಿಜಯೇಂದ್ರ, ಡಿಕೆಶಿ ಗೌಪ್ಯ ಮಾತು

## ಕಮಲಕ್ಕೆ ಕರೆತರಲು ಕಸರತ್ತು

## ಡಿಕೆಶಿಯನ್ನು ವಿಜಯೇಂದ್ರ ಅಮಿತ್ ಶಾ ಬಳಿ ಕರೆದುಕೊಂಡು ಹೋಗಿದ್ರು!





**ಜನವರಿ 19ರ ಬಳಿಕ ಎಲ್ಲಾ ಗೊತ್ತಾಗುತ್ತೆ**

ಡಿಕೆಶಿ ಡಿನ್ನರ್ ಮೀಟಿಂಗ್ ಬಹಳ ಜೋರಾಗಿ ನಡೆಸಿದ್ದಾರೆ. ಜನವರಿ 19ರ ಬಳಿಕ ಎಲ್ಲಾ ಗೊತ್ತಾಗುತ್ತೆ. ಡಿನ್ನರ್, ಇನ್ನರ್ ಎಲ್ಲಾ ನಡೆದಿದೆ. ಶಾಸಕರ ಬೆಂಬಲ ಯಾಚನೆ ಮಾಡ್ತಿದ್ದಾರೆ ಎಂದು ಆರೋಪಿಸಿದರು.ಹಿಂದೆ ಒಂದು ಬಾರಿ ಅಮಿತ್ ಶಾ ಅವರನ್ನು ಭೇಟಿ ಮಾಡಿದ್ದರು.



ಆದರೆ ಬಿಜೆಪಿ ಹೈಕಮಾಂಡ್ ಇವರ ಬೇಡಿಕೆಯನ್ನು ತಿರಸ್ಕರಿಸಿತ್ತು ಎಂದರು. ನನಗೆ ನಂಬರ್ ಒನ್ ಸ್ಥಾನ ಕೊಟ್ಟರೆ ನಾನು ಬಿಜೆಪಿಗೆ ಹೋಗುತ್ತೇನೆ. ರಾಜ್ಯಾಧ್ಯಕ್ಷ, ವಿಪಕ್ಷ ನಾಯಕ ಆಮೇಲೆ ಸಿಎಂ ಸ್ಥಾನ. ಸುಮ್ಮನೆ ನಾನ್ಯಾಕೆ ಹೋಗಲಿ ಎಂದರು. ಕೆಲವು ಬಿಜೆಪಿ ಕೆಲ ಶಾಸಕರು ನನ್ನನ್ನು ಭೇಟಿ ಮಾಡಿದ್ದರು. ನೀವು ಮತ್ತೆ ಪಕ್ಷಕ್ಕೆ ಬರುವಂತೆ ಆಹ್ವಾನ ಮಾಡಿದ್ದರು.ನಾನು ಅವರ ಬಳಿ ನಂಬರ್ ಒನ್ ಸ್ಥಾನ ಕೊಟ್ಟರೆ ಬಿಜೆಪಿಗೆ ಬರುತ್ತೇನೆ ಎಂದಿದ್ದೇನೆ. ಹಿಂದಿನ ಸಾಲಿನಲ್ಲಿ ಕುಳಿತುಕೊಳ್ಳಿರಿಸಿದರೆ ನಾನು ಬರಲು ಸಿದ್ದನಿಲ್ಲ ಎಂದಿದ್ದೇನೆ ಎಂದು ವಿವರಿಸಿದರು.





**ಡಿಕೆಶಿಯನ್ನ ಬಿಜೆಪಿಗೆ ಸೆಳೆಯುವ ಪ್ರಯತ್ನ ದೆಹಲಿಯಲ್ಲಿ ನಡೆದಿತ್ತು**

**ಬಿಜೆಪಿಗೆ ಯತ್ನಾಳರನ್ನು ಮರಳಿ ಕರೆತರಲು ಕಸರತ್ತು**

**ನನ್ನನ್ನ ಪಕ್ಷದಿಂದ ಉಚ್ಚಾಟನೆ ಮಾಡಿದಾಗ ಡಿಕೆ ಶಿವಕುಮಾರ್ ಅವರನ್ನ ಬಿಜೆಪಿಗೆ ಸೆಳೆಯುವ ಪ್ರಯತ್ನ ನಡೆದಿತ್ತು ಎಂದು ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಹೊಸ ಬಾಂಬ್ ಸಿಡಿಸಿದ್ದಾರೆ. ಬೆಳಗಾವಿಯಲ್ಲಿ ಮಾತನಾಡಿದ ಅವರು, ನನ್ನನ್ನ ಉಚ್ಚಾಟನೆ ಮಾಡಿದ ಸಂದರ್ಭದಲ್ಲಿ ದೆಹಲಿಯಲ್ಲಿ ಡಿಕೆ ಶಿವಕುಮಾರ್ ಅವರನ್ನ ಆಪರೇಷನ್ ಮಾಡುವ ಪ್ರಯತ್ನ ನಡೆದಿತ್ತು. ನಾನು ಪಕ್ಷದಲ್ಲಿದ್ರೆ ಇದು ಆಗಲ್ಲ ಅಂತ ಉಚ್ಚಾಟನೆ ಬಳಿಕ ಪ್ರಯತ್ನ ನಡೆದಿತ್ತು ಎಂದು ಸ್ಫೋಟಕ ಹೇಳಿಕೆ ನೀಡಿದರು.**

ಬಿಜೆಪಿಯಲ್ಲಿ ಆಂತರಿಕ ಗೊಂದಲ ಬಗೆಹರಿದಿಲ್ಲ. ಬಿಜೆಪಿ ಅಧ್ಯಕ್ಷ ವಿಜಯೇಂದ್ರ ವಿರುದ್ಧ ಒಂದು ಗುಂಪು ಮಸಲತ್ತು ನಡೆಸುತ್ತಿದೆ. ಮತ್ತೊಂದು ಕಡೆಯಲ್ಲಿ ವಿಪಕ್ಷ ನಾಯಕ ಆರ್ ಅಶೋಕ್ ಕಾರ್ಯವೈಖರಿಯ ಬಗ್ಗೆಯೂ ಕೆಲವು ಶಾಸಕರಿಗೆ ಅಸಮಾಧಾನ ಇದೆ. ಇದರ ನೇರ ಫಲಶ್ರುತಿ ವಿಧಾನಸಭೆಯಲ್ಲಿ ಕಾಣಿಸುತ್ತಿದೆ.

**ಬಗೆಹರಿದಿಲ್ಲ ಆಂತರಿಕ ಗೊಂದಲ**

ಅಧಿವೇಶನ ಶುರುವಾಗಿ ಐದು ದಿನ ಆದರೂ ಬಿಜೆಪಿ ನಿರೀಕ್ಷಿತ ಹೋರಾಟ ರೂಪಿಸುವಲ್ಲಿ ವಿಫಲವಾಗಿದೆ. ಆಡಳಿತ ಪಕ್ಷದಲ್ಲಿ ಸಾಕಷ್ಟು ನ್ಯೂನ್ಯತೆಗಳು ಇದ್ದರೂ ಅದನ್ನು ಸಮರ್ಥವಾಗಿ ವಿರೋಧಿಸಿ ಜನಾಭಿಪ್ರಾಯ ರೂಪಿಸುವಲ್ಲಿ ವಿಫಲವಾಗಿದೆ. ಹೀಗಾಗಿ ಬಿಜೆಪಿಯಲ್ಲೂ ನಾಯಕತ್ವ ಬದಲಾವಣೆಯ ಬಗ್ಗೆ ಆಂತರಿಕ ಅಭಿಪ್ರಾಯಗಳು ಕ್ರೋಢೀಕರಣ ಆಗುತ್ತಿದೆ. ಸದ್ಯ ಯತ್ನಾಳ್ ಹೊರತು ಪಡಿಸಿ ಯಾರೂ ಹೇಳಿಕೆಗಳನ್ನು ನೀಡುತ್ತಿಲ್ಲ. ಆದರೆ, ಬೂದಿ ಮುಚ್ಚಿದ ಕೆಂಡದಂತಿರುವ ವಾತಾವರಣ ಹೀಗೆ ಮುಂದುವರಿಯುವ ಸಾಧ್ಯತೆ ಕಡಿಮೆ. ಈ ನಿಟ್ಟಿನಲ್ಲಿ ವರಿಷ್ಠರ ನಡೆ ಏನು ಎಂಬುವುದು ಕುತೂಹಲಕ್ಕೆ ಕಾರಣವಾಗಿದೆ. ಈ ನಡುವೆ ಯತ್ನಾಳ್ ಅವರನ್ನು ಮರಳಿ ಕರೆತರುವ ಪ್ರಯತ್ನ ಜಾರಿಯಲ್ಲಿದೆ. ಯಾವ ರೀತಿಯಲ್ಲಿ ಜಾರಿಗೊಳಿಸಲಾಗುತ್ತದೆ ಎಂಬುವುದು ಸದ್ಯದ ಕುತೂಹಲ.

1. ನಂಬರ್ ಒನ್ ಸ್ಥಾನ ಕೊಟ್ಟರೆ ಬಿಜೆಪಿಗೆ ಮರಳುತ್ತೇನೆ ಎಂದ ಯತ್ನಾಳ್
2. ಬಿಜೆಪಿಯಲ್ಲಿ ತಣ್ಣಗಾಗದ ನಾಯಕತ್ವ ಬದಲಾವಣೆ ಬಗ್ಗೆ ಕಚ್ಚಾಟ
3. ಶಾಸಕ ಯತ್ನಾಳ್‌ರನ್ನು ಮತ್ತೆ ಬಿಜೆಪಿಗೆ ಕರೆತರಲು ಒಂದು ಬಣದಿಂದ ಗೌಪ್ಯ ಪ್ರಯತ್ನ
4. ಬೆಳಗಾವಿ ಅಧಿವೇಶನದಲ್ಲಿ ಬಿಜೆಪಿ ಶಾಸಕರಿಂದ ಯತ್ನಾಳ್ ಜೊತೆ ಅಶೋಕ್‌ರ ಕಚೇರಿಯಲ್ಲಿ ಗುಸುಗುಸು ಮಾತು

• ಉದಯವಾಹಿನಿ, ಬೆಳಗಾವಿ

ವಿಜಯೇಂದ್ರ ಅವರು ತಾವು ಡಿಸಿಎಂ ಆಗಲು ದೆಹಲಿಯಲ್ಲಿ ಡಿಕೆ ಶಿವಕುಮಾರ್ ಅವರನ್ನ ಭೇಟಿ ಮಾಡಿ ಮಾತುಕತೆ ನಡೆಸಿದ್ದರು. ಬಿಜೆಪಿಯವರೇ ಈ ಮಾತು ನನಗೆ ಹೇಳಿದ್ರು. ಆ ನಂತರ ಜೋಷಿಯವರು ಅಮಿತ್ ಶಾ ಅವರ ಸೂಚನೆ ಮೇರೆಗೆ ನಾವು ಯಾರನ್ನೂ ಸೇರಿಸಿಕೊಳ್ತಿಲ್ಲ ಅಂತ ಹೇಳಿದ್ರು. ಆದ್ರೆ ನಿಜವಾಗಿಯೂ ಡಿಕೆಶಿಯನ್ನ ಬಿಜೆಪಿಗೆ ಕರೆತರುವ ಪ್ರಯತ್ನ ನಡೆದಿತ್ತು ಎಂದು ಹೇಳಿದರು.ಇದೇ ಡಿಸೆಂಬರ್ 19ಕ್ಕೆ ಕಾಂಗ್ರೆಸ್‌ನವರು ದೆಹಲಿಗೆ ಹೋಗ್ತಿದ್ದಾರೆ. ಈಗ ಇಲ್ಲಿ ಗುಂಪು ಸಭೆಗಳು, ಡಿನ್ನರ್ ಸಭೆಗಳು ನಡೀತಿವೆ. ಬೆಂಬಲ ಯಾಚನೆ ಮಾಡಲು ಪ್ರತ್ಯೇಕ ಸಭೆಗಳು ನಡೀತಿವೆ. ಇನ್ನರ್ ಮತ್ತು ಡಿನ್ನರ್ ಸಭೆಗಳು ನಡೀತಿವೆ ಎಂದು ಕುಟುಕಿದರು.

**ದೊಡ್ಡ ಹುದ್ದೆ ಕೊಟ್ರೆ ಮತ್ತೆ ಬಿಜೆಪಿಗೆ ಹೋಗ್ತೀನಿ:** ಆರ್. ಅಶೋಕ್ ಕೊಠಡಿಯಲ್ಲಿ ಯತ್ನಾಳ್ ಜೊತೆ ಸುನೀಲ್ ಕುಮಾರ್ ಮತ್ತಿತರರು ಕ್ಲೋಸ್ ಡೋರ್ ಮೀಟಿಂಗ್ ವಿಚಾರಕ್ಕೆ ಪ್ರತಿಕ್ರಿಯಿಸಿ, ಮೊನ್ನೆ ಬಿಜೆಪಿಯ ಕೆಲವು ಶಾಸಕರು ನನ್ನ ಜೊತೆ ಮಾತಾಡಿದ್ರು. ಬಿಜೆಪಿಗೆ ನೀವು ಬನ್ನಿ ಅಂದ್ರು, ನಿಮ್ಮಂಥ ನಾಯಕರ ಅಗತ್ಯ ಇದೆ ಬನ್ನಿ ಅಂದ್ರು. ನಾನು ಹಾಗೇ ಬರಲ್ಲ ದೊಡ್ಡ ಸ್ಥಾನ ಕೊಡಿ ಅಂದಿದ್ದೇನೆ. ದೊಡ್ಡ ಸ್ಥಾನ ಅಂದ್ರೆ ರಾಜ್ಯಾಧ್ಯಕ್ಷ ಹುದ್ದೆ ಅಥವಾ ವಿಪಕ್ಷ ನಾಯಕನ ಹುದ್ದೆ ಕೇಳಿದ್ದೇನೆ. ನಾನು ಶಾಸಕನಾಗಿಯೇ ವಾಪಾಸ್ ಹೋಗಲ್ಲ, ಸ್ಥಾನ ಕೊಟ್ರೆ ಹೋಗ್ತೇನೆ ಅಂತ ಹೇಳಿರುವುದಾಗಿ ತಿಳಿಸಿದ್ರು.

**ಬಾಗಿಲು ಮುಚ್ಚಿ ಮಾತುಕತೆ:** ಶಾಸಕ ಯತ್ನಾಳ್ ಜೊತೆಗೆ ಕೊಠಡಿ ಬಾಗಿಲು ಮುಚ್ಚಿ ಮಾತುಕತೆ ನಡೆಸಲಾಗುತ್ತಿತ್ತು. ಇದೇ ಸಂದರ್ಭದಲ್ಲಿ ಶಾಸಕ ಮುನಿರತ್ನ ಬಂದರು. ಆದರೆ ಬಾಗಿಲು ಮುಚ್ಚಿಕೊಂಡಿತ್ತು. ಬಾಗಿಲು ತೆರೆಯಲು ಪ್ರಯತ್ನಿಸಿದಾಗ ಬಳಿಕ ಶಾಸಕರೊಬ್ಬರು ಬಾಗಿಲು ತೆರೆದರು. ನಂತರ ಮರಳಿ ಮುಚ್ಚಲಾಯಿತು. ಸುಮಾರು 15 ನಿಮಿಷಗಳ ಕಾಲ ಮಾತುಕತೆ ನಡೆದಿತ್ತು. ಯಾವಾಗ ವಿಧಾನಸಭೆಯಿಂದ ಮೊಗಸಾಲೆಯಲ್ಲಿರುವ ವಿಪಕ್ಷ ನಾಯಕರ ಕಚೇರಿಗೆ ಬಿವೈ ವಿಜಯೇಂದ್ರ ಎಂಟ್ರಿ ಕೊಡುತ್ತಾರೋ ಕೊಠಡಿಯಲ್ಲಿ ಮಾತುಕತೆ ನಡೆಸುತ್ತಿದ್ದ ಯತ್ನಾಳ್, ಸುನೀಲ್ ಕುಮಾರ್, ಭೈರತಿ ಬಸವರಾಜ ಹೊರನಡೆದರು. ಈ ಮಾತುಕತೆ ಸಾಕಷ್ಟು ಕುತೂಹಲಕ್ಕೆ ಕಾರಣವಾಗಿತ್ತು. ಗೌಪ್ಯ ಮಾತುಕತೆಯ ಬಗ್ಗೆ ಇದೀಗ ಸ್ವತಃ ಯತ್ನಾಳ್ ತೆರೆದಿಟ್ಟಿದ್ದಾರೆ. ''ಬಿಜೆಪಿ ಪಕ್ಷಕ್ಕೆ ನನ್ನನ್ನು ಆಹ್ವಾನಿಲಾಗಿತ್ತು. ಆದರೆ ನಾನು ನಂಬರ್ ಒನ್ ಸ್ಥಾನ ಕೊಟ್ಟರೆ ಪಕ್ಷಕ್ಕೆ ಬರುತ್ತೇನೆ ಎಂದಿದ್ದೆ'' ಎಂಬ ವಿವರಗಳನ್ನು ಅವರು ತೆರೆದಿಟ್ಟಿದ್ದಾರೆ.

ಬಿಜೆಪಿಗೆ ಮರಳಿ ಬರುವುದಾದರೆ ನನ್ನನ್ನು ಮುಖ್ಯಮಂತ್ರಿ ಮಾಡಬೇಕು ಎಂದು ವಿಜಯಪುರ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಹೊಸ ಬಾಂಬ್ ಸಿಡಿಸಿದ್ದಾರೆ. ಬೆಳಗಾವಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಿಜೆಪಿ ನಾಯಕರು ತಮ್ಮನ್ನು ಪಕ್ಷಕ್ಕೆ ಮರಳಿ ಆಹ್ವಾನಿಸಿದ್ದಾರೆ ಎಂದು ಬಹಿರಂಗಪಡಿಸಿದರು. ಆದರೆ, ಸರಳವಾಗಿ ಮರಳಿ ಬರುವುದಿಲ್ಲ, ಮುಖ್ಯಮಂತ್ರಿ ಹುದ್ದೆಯ ಭರವಸೆ ನೀಡಿದರೆ ಮಾತ್ರ ಬರುವುದಾಗಿ ತಿಳಿಸಿದರು.

**ನನ್ನನ್ನು ಸಿಎಂ ಮಾಡುವುದಾದರೆ ಬಿಜೆಪಿಗೆ ವಾಪಾಸ್ ಹೋಗ್ತೀನಿ**

ವಿಧಾನಸಭೆಯಲ್ಲಿ ಸರ್ಕಾರದ ವಿರುದ್ಧ ಧ್ವನಿ ಎತ್ತುತ್ತಾ, ವಿರೋಧ ಪಕ್ಷದ ನಾಯಕರಂತೆ ವರ್ತಿಸುತ್ತಿದ್ದರು. ಬೆಳಗಾವಿ ಅಧಿವೇಶನದಲ್ಲಿ ಅವರು ತಮ್ಮನ್ನು ವಿರೋಧ ಪಕ್ಷದ ನಾಯಕರ ಪಕ್ಕದಲ್ಲಿ ಕುಳ್ಳಿರಿಸಬೇಕು ಎಂದು ಬೇಡಿಕೆ ಇಟ್ಟಿದ್ದರು. ಬಿಜೆಪಿ ನಾಯಕರು ಅವರನ್ನು ಮರಳಿ ಪಕ್ಷಕ್ಕೆ ಸೇರಿಸಿಕೊಳ್ಳುವ ಪ್ರಯತ್ನ ಮಾಡಿದ್ದಾರೆ ಎಂದು ತಿಳಿದುಬಂದಿದೆ. ಸ್ವತಃ ವಿರೋಧ ಪಕ್ಷದ ನಾಯಕ ಆರ್. ಅಶೋಕ್ ಅವರು ಯತ್ನಾಳ್ ಅವರನ್ನು ಚೇಂಬರ್‌ಗೆ ಕರೆದು ಮಾತುಕತೆ ನಡೆಸಿದ್ದಾರೆ ಎಂದು ಅವರೇ ಬಹಿರಂಗ ಪಡಿಸಿದ್ದಾರೆ. ''ಬಿಜೆಪಿ ಪರಿಸ್ಥಿತಿ ಬಹಳ ಕೆಟ್ಟದಾಗಿದೆ. ನೀವು ಮರಳಿ ಬನ್ನಿ'' ಎಂದು ಅಶೋಕ್ ಹೇಳಿದ್ದರಂತೆ.



# ಡಿಕೆ ಶಿವಕುಮಾರ್ ಸಿಎಂ ಆಗ್ಬೇಕು ಅನ್ನೋದು ನನ್ನ ಆಸೆ, ಆದರೆ...

• ಉದಯವಾಹಿನಿ, ಬೆಳಗಾವಿ

ಸಿದ್ದರಾಮಯ್ಯ ಸಿಎಂ ಆಗಿ ಮುಗಿದ ನಂತರ. ಡಿಸಿಎಂ ಡಿಕೆ ಶಿವಕುಮಾರ್ ಅವರೇ ತಾನೆ ಸಿಎಂ ಆಗಬೇಕು. ಅವರು ಸಿಎಂ ಆಗಲಿ ಅನ್ನೋ ಆಸೆ ನನಗೂ ಇದೆ. ಆದರೆ ನೋಡಿ, ನಾವು ಏನೇ ಅಭಿಪ್ರಾಯ ಹೇಳಿದರು ಹೈ ಕಮಾಂಡ್ ನಿರ್ಧಾರವೇ ಅಂತಿಮ ಎಂದು ಸಚಿವ ಜಮೀರ್ ಅಹ್ಮದ್ ಖಾನ್ ಸ್ಫೋಟಕ ಹೇಳಿಕೆ ಕೊಟ್ಟಿದ್ದಾರೆ.

ಕರ್ನಾಟಕ ಕಾಂಗ್ರೆಸ್ ರಾಜಕೀಯದಲ್ಲಿ ನಾಯಕತ್ವ ಬದಲಾವಣೆ ಬಗೆಹರಿಯದ ಒಗಟಾಗಿದೆ. ಕಾಂಗ್ರೆಸ್ ಹೈಕಮಾಂಡ್‌ಗೆ ಇದೊಂದು ಕಬ್ಬಿಣದ ಕಡಲೆಯಾಗಿದೆ. ಬ್ರೇಕ್‌ಫಾಸ್ಟ್ ಮೀಟಿಂಗ್‌ಗಳ ನಂತರವೂ ಸಹ ಸಿಎಂ ಬದಲಾವಣೆಯ ಬಗ್ಗೆ ಚರ್ಚೆಗಳು ಕೇಳಿಬರುತ್ತಲೇ ಇದೆ. ಇನ್ನು ಬೆಳಗಾವಿ ಅಧಿವೇಶನದಲ್ಲಿ ಬಿಜೆಪಿ ನಾಯಕರು ಈ ಬಗ್ಗೆ ಚರ್ಚಿಸಿದ್ದಾರೆ.

**ಡಿನ್ನರ್ ಮೀಟಿಂಗ್‌ಗೆ ನನ್ನನ್ನೂ ಕರೆದಿದ್ರು:** ರಾಜಕೀಯ ವಲಯದಲ್ಲಿ ಚರ್ಚೆಗೆ ಗ್ರಾಸವಾಗಿದ್ದ ಡಿನ್ನರ್ ಮೀಟಿಂಗ್ ಮತ್ತು ಸಿಎಂ ಬದಲಾವಣೆ ಕುರಿತಾದ ಪ್ರಶ್ನೆಗಳಿಗೆ ಸಚಿವ ಜಮೀರ್ ಅವರು ಪ್ರತಿಕ್ರಿಯಿಸಿದ್ದಾರೆ.



ಬೆಳಗಾವಿಯ ಹೊರವಲಯದಲ್ಲಿರುವ ದೊಡ್ಡಣ್ಣವರ್ ಫಾರ್ಮ್‌ಹೌಸ್‌ನಲ್ಲಿ ನಡೆದಿದ್ದ ಔತಣ ಕೂಟದ ಬಗ್ಗೆಯೂ ಜಮೀರ್ ಸ್ಪಷ್ಟನೆ ನೀಡಿದ್ದಾರೆ. ಆ ಡಿನ್ನರ್ ಮೀಟಿಂಗ್‌ಗೆ ನನಗೂ ಆಹ್ವಾನವಿತ್ತು. ಆದರೆ, ನಾನು ಸ್ನೇಹಿತರ ಮನೆಗೆ ತೆರಳಿದ್ದರಿಂದ ಆ ಔತಣ ಕೂಟಕ್ಕೆ ಹೋಗಲು ಸಾಧ್ಯವಾಗಲಿಲ್ಲ ಎಂದು ತಿಳಿಸಿದರು.

ಬ್ರೇಕ್‌ಫಾಸ್ಟ್ ಮುಗಿದ್ರು ನಿಲ್ಲದ ಕುರ್ಚಿ ಫೈಟ್, ದಿಲ್ಲಿ ನಾಯಕರ ಎದುರೇ ಸಿದ್ದು-ಡಿಕೆಶಿ ಬೆಂಬಲಿಗರ ಹೈಡ್ರಾಮಾ, ಪಿಕ್ಚರ್ ಅಭಿ ಬಾಕಿ ಹೈ.

**ಡಿಕೆಶಿ ಸಿಎಂ ಆಗ್ಲಿ:** ಸಿದ್ದರಾಮಯ್ಯ ಆದ ನಂತರ ಡಿಕೆ ಶಿವಕುಮಾರ್ ಅವರು ಸಿಎಂ ಆಗಬೇಕು ಅಂತ ನಾನು ಸಹಿತ ಎಲ್ಲರೂ ಬಯಸುತ್ತಾರೆ. ನಾನು ಚಿಕ್ಕವನು ನಾನು ತೀರ್ಮಾನ ಮಾಡೋಕೆ ಆಗೋಲ್ಲ.

**ಡಿಸಿಎಂ ಆಪ್ತರ ಡಿನ್ನರ್ ಮೀಟಿಂಗ್**

**ಚಳಿಗಾಲದ ಅಧಿವೇಶನದ ನೇಪಥ್ಯದಲ್ಲಿ ಡಿಸಿಎಂ ಡಿ.ಕೆ.ಶಿವಕುಮಾರ್ ಆಪ್ತ ವರ್ಗದ ಶಾಸಕರು 'ಡಿನ್ನರ್ ಮೀಟಿಂಗ್' ನಡೆಸಿರುವುದು ರಾಜಕೀಯ ವಲಯದಲ್ಲಿ ಬಿಸಿಯೇರಿಸಿದೆ. ನಾಯಕತ್ವದ ಬಗ್ಗೆ ಮುಗಿಯದ ಚರ್ಚೆಯ ನಡುವೆಯೇ ಡಿಸಿಎಂ ಬೆಂಬಲಿಗರು ಭೋಜನ ಕೂಟದಲ್ಲಿ ಒಟ್ಟುಗೂಡಿರುವುದು ಮಹತ್ವ ಪಡೆದು ಕೊಂಡಿತ್ತು. ಸಂಪುಟ ಸಭೆ ಬಳಿಕ ಹೊರವಲಯದಲ್ಲಿ ಕೆಪಿಸಿಸಿ ಪದಾಧಿಕಾರಿಯೊಬ್ಬರ ಫಾರ್ಮ್‌ಹೌಸ್‌ನಲ್ಲಿ ನಡೆದ ಡಿನ್ನರ್ ಸಭೆಯಲ್ಲಿಸಚಿವರು ಸೇರಿದಂತೆ ಸುಮಾರು 30 ಶಾಸಕರು ಸೇರಿದ್ದರು ಎನ್ನಲಾಗಿದೆ.**

ಹೈಕಮಾಂಡ್ ನಿರ್ಧಾರ ಮಾಡುತ್ತೆ. ನಾನು ಸಿದ್ದರಾಮಯ್ಯ, ಡಿಕೆ ಶಿವಕುಮಾರ್ ಸತೀಶ್ ಜಾರಕಿಹೊಳಿ ಎಲ್ಲರಿಗೂ ನಾನು ಹತ್ರ ಇದಿನಿ. ನನ್ನ ಅಭಿಪ್ರಾಯನ ಹೇಳಬಹುದು ಅಷ್ಟೆ ಎಂದು ಹೇಳಿದರು. ನಮ್ಮ ಪಕ್ಷವು ಹೈಕಮಾಂಡ್ ನಿರ್ದೇಶನದಲ್ಲಿ ಕಾರ್ಯನಿರ್ವಹಿಸುತ್ತದೆ. ಅಂತಿಮ ತೀರ್ಮಾನ ಹೈಕಮಾಂಡ್‌ದ್ದೇ ಆಗಿರುತ್ತದೆ ಎಂದು ಸ್ಪಷ್ಟಪಡಿಸಿದರು.

**ಡಿಸಿಎಂ ಭಾಗಿ:** ಈ ಸಭೆಯಲ್ಲಿ ಡಿಸಿಎಂ ಡಿ.ಕೆ.ಶಿವಕುಮಾರ್ , ಸಚಿವರಾದ ಕೆ.ಎಚ್.ಮುನಿಯಪ್ಪ, ಡಾ.ಎಂ.ಸಿ.ಸುಧಾಕರ್ ಪಾಲ್ಗೊಂಡಿದ್ದರು ಎನ್ನಲಾಗಿದೆ. ಉಳಿದಂತೆ ಡಿಸಿಎಂ ಪರ ಆಗಾಗ ಹೇಳಿಕೆ ನೀಡುವ ಅವರ ಬೆಂಬಲಿಗ ಶಾಸಕರು ಮತ್ತು ಇನ್ನೂ ಕೆಲವರು ಸಭೆಯಲ್ಲಿದ್ದರು ಎಂದು ಮೂಲಗಳು ಹೇಳುತ್ತವೆ.

**ಸಿಎಂ ಆಪ್ತರಿಂದಲೂ ಡಿನ್ನರ್;** ಸಿಎಂ ಸಿದ್ದರಾಮಯ್ಯ ಸೇರಿದಂತೆ ಅವರ ಆಪ್ತ ಬಳಗದ ಸಚಿವರು, ಶಾಸಕರು ಬೆಳಗಾವಿಯ ಮಾಜಿ ಶಾಸಕ ಫಿರೋಜ್ ಶೇಟ್ ಮನೆಗೆ ಡಿನ್ನರ್‌ಗೆ ತೆರಳಿದ್ದರು. ಈ ಸಭೆ ಬಗ್ಗೆಯೂ ರಾಜಕೀಯ ವಲಯದಲ್ಲಿ ಚರ್ಚೆಯಾಗಿತ್ತು.

# ಡಿನ್ನರ್ ಮೀಟಿಂಗ್ ಸಾಕು, ಸದನದಲ್ಲಿ ಸತ್ಯ ಉತ್ತರ ಬೇಕು: ವಿಪಕ್ಷ ಗರಂ

**• ವಿಪಕ್ಷ ಅಬ್ಬರಕ್ಕೆ ಎಚ್‌ಕೆ ಪಾಟೀಲ್ ಸೈಲೆಂಟ್ • ಗೃಹಲಕ್ಷ್ಮಿ ಫಲಾನುಭವಿಗಳಿಗೆ ಹಣ ನೀಡುವ ಬಗ್ಗೆ ಸಚಿವೆ ಸುಳ್ಳು ಮಾಹಿತಿ**

• ಉದಯವಾಹಿನಿ, ಬೆಳಗಾವಿ

ವಿಧಾನಮಂಡಲ ಚಳಿಗಾಲದ ಅಧಿವೇಶನಕ್ಕೆ ಐದನೇ ದಿನ. ಶುಕ್ರವಾರ ಸದನದಲ್ಲಿ ಒಂದಿಷ್ಟು ಗದ್ದಲ, ಸ್ವಾರಸ್ಯದ ಜೊತೆಗೆ ಗಂಭೀರ ಚರ್ಚೆ ನಡೆಯಿತು. ಗೃಹಲಕ್ಷ್ಮೀ ಯೋಜನೆಯ ಹಣವನ್ನು ಫಲಾನುಭವಿಗಳಿಗೆ ನೀಡುವ ಬಗ್ಗೆ ಸದನಕ್ಕೆ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಅವರು ತಪ್ಪು ಮಾಹಿತಿ ನೀಡಿದ್ದಾರೆ ಎಂದು ವಿಪಕ್ಷ ನಾಯಕರು ಗದ್ದಲ ಉಂಟು ಮಾಡಿದರು.

ಡಿನ್ನರ್ ಮೀಟಿಂಗ್ ಬ್ರೇಕ್ ಕೊಟ್ಟು ಸದನದಲ್ಲಿ ಸ್ಪಷ್ಟ ಉತ್ತರ ನೀಡಬೇಕು ಎಂದು ವಿಪಕ್ಷ ನಾಯಕ ಆರ್ ಅಶೋಕ್ ಆಗ್ರಹಿಸಿದರು. ಉತ್ತರ ಕರ್ನಾಟಕದ ಚರ್ಚೆಯಲ್ಲಿ ಪಾಲ್ಗೊಳ್ಳಲು ಮುಂದಾಗಿದ್ದ ಸಚಿವ ಎಚ್‌ಕೆ ಪಾಟೀಲ್ ಅವರಿಗೆ ವಿಪಕ್ಷ ಅಡ್ಡಿ ಪಡಿಸಿತು. ನಿಯಮಾವಳಿ ಪ್ರಕಾರ ಇದಕ್ಕೆ ಅವಕಾಶ ಇಲ್ಲ ಎಂದು ಆಕ್ಷೇಪ ವ್ಯಕ್ತಪಡಿಸಿದರು. ಈ ಮೂಲಕ 5 ನೇ ದಿನದ ಅಧಿವೇಶನದಲ್ಲಿ ಒಂದಿಷ್ಟು ಗಮನ ಸೆಳೆಯುವ ಚರ್ಚೆಗಳು ನಡೆದವು.

**ಡಿನ್ನರ್ ಸಾಕು, ಬ್ರೇಕ್ ಹಾಕಿ:** ಗೃಹಲಕ್ಷ್ಮೀ ಯೋಜನೆಯ ಹಣ ಫಲಾನುಭವಿಗಳಿಗೆ ತಲುಪುವ ಬಗ್ಗೆ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಸದನಕ್ಕೆ ತಪ್ಪು ಮಾಹಿತಿ ನೀಡಿದ್ದಾರೆ ಎಂದು ವಿಪಕ್ಷ ನಾಯಕ ಆರ್ ಅಶೋಕ್ ಆಕ್ಷೇಪ ವ್ಯಕ್ತಪಡಿಸಿದರು. ಇದು ಆಡಳಿತ ಮತ್ತು ವಿಪಕ್ಷಗಳ ನಡುವಿನ ಚರ್ಚೆಗೆ ಎಡೆಮಾಡಿತು. ಶಾಸಕ ಮಹೇಶ್ ಟೆಂಗಿನಕಾಯಿ ಬೆಂಬಲವಾಗಿ ನಿಂತು ಪ್ರಶ್ನೆ ಕೇಳಿದ ಅಶೋಕ್, ''



ಸರ್ಕಾರದಲ್ಲಿ ಗೊಂದಲಗಳಿವೆ. ನೈಟ್ ಡಿನ್ನರ್ ಮೀಟಿಂಗ್ ಗಳು ಜೋರಾಗಿವೆ. ಸ್ವಲ್ಪ ಹೋಮ್ ಮಿನಿಸ್ಟರ್ ಡಿನ್ನರ್ ಮೀಟಿಂಗ್ ಗಳಿಗೆಲ್ಲ ಬಂದೋಬಸ್ತ್ ಮಾಡಿಸಿ, ಬೀಗ ಹಾಕಿಸಿಬಿಡಿ. ಹತ್ತು ದಿನಗಳ ಅಧಿವೇಶನ ನಡೆಯೊ ತನಕ ಬ್ರೇಕ್ ಹಾಕಿ'' ಎಂದು ಕಾಲೆಳೆದರು.

ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಪರವಾಗಿ ಸಿಎಂ ಸಿದ್ದರಾಮಯ್ಯ ಉತ್ತರ ನೀಡಿ, ''ಗೃಹ ಲಕ್ಷ್ಮೀ ಯೋಜನೆಯ ಹಣವನ್ನು ಆಗಸ್ಟ್ ತಿಂಗಳ ವರೆಗೆ ಬಿಡುಗಡೆ ಮಾಡಿರುವ ಬಗ್ಗೆ ಲಕ್ಷ್ಮಿ ಹೆಬ್ಬಾಳ್ಕರ್ ಹೇಳಿದ್ದಾರೆ. ಮಾರ್ಚ್ ತಿಂಗಳ ಹಣ ಬಿಡುಗಡೆ ಆಗಿಲ್ಲ ಅಂದರೆ ಅದನ್ನು ಬಿಡುಗಡೆ ಮಾಡೋಣ. ಸಾಮಾನ್ಯವಾಗಿ ಎರಡು ತಿಂಗಳು ವಿಳಂಬ ಆಗುತ್ತದೆ. ಬಂದಿಲ್ಲ ಅಂದರೆ ಕೂಡಲೇ ಕೊಡಿಸುವ ಕೆಲಸ ಮಾಡೋಣ ಎಂದು ಸಮಜಾಯಿಷಿ ನೀಡಿದರು.

**ಎಚ್‌ಕೆ ಪಾಟೀಲ್‌ಗೆ ಮಾತನಾಡಲು ಬಿಟ್ಟಿಲ್ಲ!**

**ಉತ್ತರ ಕರ್ನಾಟಕದ ಬಗ್ಗೆ ಚರ್ಚೆ ನಡೆಯುತ್ತಿದ್ದ ಸಂದರ್ಭದಲ್ಲಿ ಸಚಿವ ಎಚ್‌ಕೆ ಪಾಟೀಲ್ ಮಾತನಾಡಲು ಮುಂದಾದರು. ಆದರೆ ಇದು ನಿಯಮಾವಳಿಗಳ ವಿರುದ್ಧ ಎಂದು ವಿಪಕ್ಷ ನಾಯಕ ಆರ್ ಅಶೋಕ್ ಹಾಗೂ ಬಿಜೆಪಿ ಸದಸ್ಯ ಸುನೀಲ್ ಕುಮಾರ್ ವಿರೋಧ ವ್ಯಕ್ತಪಡಿಸಿದರು. ಸಚಿವರು ಉತ್ತರ ಕೊಡಬೇಕು ಅದರ ಹೊರತಾಗಿ ಚರ್ಚೆ ನಡೆಸಿದರೆ ಹೇಗೆ? ಇದು ಸದನದ ನಿಯಮಾವಳಿಯ ವಿರುದ್ಧ ಇದೆ. ಹೀಗಾಗಿ ಸ್ಪೀಕರ್ ಅನುಮತಿ ಕೊಡಬಾರದು ಎಂದು ಆಗ್ರಹಿಸಿದರು. ಹೀಗಾಗಿ ಎಚ್‌ಕೆ ಪಾಟೀಲ್ ಮಾತನಾಡದೆ ಸುಮ್ಮನಾದರು.**

**ನಾವು ಸುಳ್ಳು ಹೇಳಿಲ್ಲ ಎಂದ ಸಿದರಾಮಯ್ಯ :** ಸದನದಲ್ಲಿ ಆರ್ ಅಶೋಕ್ ಅವರು ವಿಪಕ್ಷಗಳು ಇರುವುದು ಸುಳ್ಳು ಹೇಳಲು ಎಂಬ ಹೇಳಿಕೆ ಉಲ್ಲೇಖಿಸಿ ''ನಾನು ಹಿಂದೆ ವಿರೋಧ ಪಕ್ಷದ ನಾಯಕನಿದ್ದಾಗ ಯಾವತ್ತಿಗೂ ಸುಳ್ಳು ಹೇಳಿಲ್ಲ'' ಎಂದು ಸಿಎಂ ಸಿದ್ದರಾಮಯ್ಯ ತಿರುಗೇಟು ನೀಡಿದರು. ಇದಕ್ಕೆ ಪ್ರತಿಕ್ರಿಯೆ ನೀಡಿದ ಅಶೋಕ್ ''ಮಂತ್ರಿ ಸುಳ್ಳು ಹೇಳಿದ್ದಾರೆ ಅವರ ವಿರುದ್ಧ ಕ್ರಮ ಆಗಲಿ'' ಎಂದು ಒತ್ತಾಯಿಸಿದರು. ಇನ್ನು ಇದೇ ಸಂದರ್ಭದಲ್ಲಿ ಸ್ಪೀಕರ್ ಖಾದರ್ ಮಧ್ಯಪ್ರವೇಶ ಮಾಡಿ ಸೋಮವಾರ ಸಚಿವರಿಂದ ಉತ್ತರ ಕೊಡಿಸುವ ಭರವಸೆ ನೀಡಿದರು.

**ಮೊಗಸಾಲೆ ಹೊರಗೆ ಏನೇನು ಗದ್ದಲ?:** ಇನ್ನು ವಿಧಾನಸಭೆಯ ಮೊಗಸಾಲೆಯ ಹೊರಗೂ ಒಂದಿಷ್ಟು ಬೆಳವಣಿಗಳು ನಡೆದವು. ಬಿಜೆಪಿ ಉಚ್ಚಾಟಿತ ಶಾಸಕ ಬಸನಗೌಡ ಪಾಟೀಲ್ ಅವರು ಸಿಡಿಸಿದ ಬಾಂಬ್ ರಾಜಕೀಯ ವಲಯದಲ್ಲಿ ತಲ್ಲಣ ಸೃಷ್ಟಿಸಿದೆ. ಡಿಸಿಎಂ ಡಿಕೆ ಶಿವಕುಮಾರ್ ಅವರುನ್ನು ಬಿವೈ ವಿಜಯೇಂದ್ರ ಅವರು ಅಮಿತ್ ಶಾ ಬಳಿಕ ಕರೆದುಕೊಂಡು ಹೋಗಿದ್ದರು ಎಂದು ಯತ್ನಾಳ್ ಹೇಳಿದ್ದಾರೆ. ಯತ್ನಾಳ್ ಈ ಹೇಳಿಕೆ ಹೊಸ ಚರ್ಚೆಗೆ ನಾಂದಿ ಹಾಡಿದೆ. ಅಷ್ಟೇ ಅಲ್ಲ ಬಿಜೆಪಿಯಲ್ಲಿ ನನಗೆ ನಂಬರ್ ಒನ್ ಸ್ಥಾನ ಕೊಟ್ಟರೆ ಪಕ್ಷಕ್ಕೆ ಮರಳಿ ಸೇರ್ಪಡೆ ಆಗುವುದಾಗಿ ಅವರು ತಿಳಿಸುವ ಮೂಲಕ ಪಕ್ಷದಿಂದ ದೂರ ಹೋಗಲ್ಲ ಎಂಬುವುದನ್ನು ಸ್ಪಷ್ಟಪಡಿಸಿದ್ದಾರೆ.

**ಪ್ರತ್ಯೇಕ ರಾಜ್ಯದ ಕೂಗು:** ಇದೇ ಸಂದರ್ಭದಲ್ಲಿ ಕಾಂಗ್ರೆಸ್ ಶಾಸಕ ರಾಜು ಕಾಗೆ ಪ್ರತ್ಯೇಕ ರಾಜ್ಯದ ಕೂಗನ್ನು ತೇಲಿಬಿಟ್ಟಿದ್ದಾರೆ. ಉತ್ತರ ಕರ್ನಾಟಕ ಅಭಿವೃದ್ಧಿಯ ದೃಷ್ಟಿಯಿಂದ ಪ್ರತ್ಯೇಕ ರಾಜ್ಯದ ಅಗತ್ಯತೆಯ ಬಗ್ಗೆ ಶಾಸಕರ ಸಭೆಯನ್ನು ಕರೆಯುತ್ತೇನೆ. ಅಲ್ಲಿ ಚರ್ಚೆ ನಡೆಸಿ ಅವರ ಅಭಿಪ್ರಾಯ ಪಡೆದುಕೊಳ್ಳುತ್ತೇನೆ ಎಂದಿದ್ದಾರೆ. ಉತ್ತರ ಕರ್ನಾಟಕದ ಅಭಿವೃದ್ಧಿ ವಿಚಾರವಾಗಿಯೇ ಪ್ರತ್ಯೇಕ ರಾಜ್ಯದ ಬೇಡಿಕೆ ಇಟ್ಟಿರುವುದಾಗಿ ಸಮರ್ಥಿಸಿಕೊಂಡಿದ್ದಾರೆ.

**ಈ ದಿನದ ದರ** ಪೆಟ್ರೋಲ್: 103.54 ₹/L | ಡೀಸೆಲ್ : 90.03 ₹/L | ಬಂಗಾರ: ₹13,320/Gram24ct ₹12,210/Gram22ct | ಬೆಳ್ಳಿ: ₹204.00/Gram



## ಸಿದ್ಧಸೂಕ್ತಿ

ಡಾ ಆರೂಢಭಾರತೀ ಸ್ವಾಮೀಜಿ
ಶ್ರೀ ಸಿದ್ಧಾರೂಢ ಮಿಷನ್ ಆಶ್ರಮ
ರಾಮೋಹಳ್ಳಿ

### ಹಿಂದುಧರ್ಮದ ಮೇಲೆ ದ್ವೇಷ

ಕೆಲ ದಲಿತ ಧರ್ಮವಿರೋಧಿ ದೇವರನ್ನು ಒಪ್ಪದ ಅನ್ಯಧರ್ಮದ ಕಮ್ಯುನಿಸ್ಟ್ ಜನ ಹಿಂದುಧರ್ಮದ ವಿರುದ್ಧ ದ್ವೇಷ ಕಾರುವರು. ಹಿಂದುಧರ್ಮ - ಜನರನ್ನು ಒಡೆದು ದುರ್ಬಲಗೊಳಿಸಿ ಪ್ರಾಬಲ್ಯ ಸಾಧಿಸುವುದು ಹುನ್ನಾರ. ಉದಾಹರಣೆಗೆ ಇತ್ತೀಚಿನ ಧರ್ಮಸ್ಥಳ ಪ್ರಕರಣ. ಇಂಥ ಹುನ್ನಾರ ಈಡೇರಿದಲ್ಲಿ ಲಿಂಗಾಯತ ಜೈನ ಬೌದ್ಧ ಸಿಖ್ಖ ಎಲ್ಲರೂ ಆಹುತಿ! ಕೆಟ್ಟ ಮೇಲೆ ಬುದ್ಧಿ ಗಾದೆ. ಕೆಟ್ಟ ಹಲವಾರು ಇತಿಹಾಸ ವರ್ತಮಾನ ಇದ್ದಾಗ್ಯೂ ಬುದ್ಧಿ ಬರದಿರುವುದು ದುರಂತ. ದ್ವೇಷಿಸುವುದಾದರೆ ದೋಷಗಳನ್ನು ದ್ವೇಷಿಸೋಣ. ಬ್ರಾಹ್ಮಣ ಕ್ಷತ್ರಿಯ ವೈಶ್ಯ ಶೂದ್ರ ಈ ನಾಲ್ಕು ವರ್ಣಗಳಲ್ಲಿ ಜನರ ವರ್ಗೀಕರಿಸಿ ಬ್ರಾಹ್ಮಣ ಭೂಸುರ ಶೂದ್ರ ಅಸ್ಪೃಶ್ಯ ಎಂಬಂಥ ಮನುಸ್ಮೃತಿ ಮುಂತಾದ ಪ್ರತಿಪಾದನೆಯನ್ನು ವಿರೋಧಿಸೋಣ. ಸತಿಸಹಗಮನ ಪ್ರಾಣಿಬಲಿ ಬಾಲ್ಯವಿವಾಹಗಳನ್ನು ವಿರೋಧಿಸಿದಂತೆ. ಇಂಥ ವಿರೋಧವನ್ನು ಬೆಂಬಲಿಸೋಣ. ಅಂಬೇಡ್ಕರ್ ನೇತೃತ್ವರಚಿತ ಸಂವಿಧಾನ ಈ ಎಲ್ಲ ದೋಷ ತಳ್ಳಿ ಸಮಬಾಳು ಸಮಪಾಲು ಸಮಾನತೆಯನ್ನು ಪ್ರತಿಪಾದಿಸಿದೆ. ಕಾನೂನು ಪ್ರಕಾರ ಹರಿಜನನೂ ದೇವಸ್ಥಾನದಲ್ಲಿ ಅರ್ಚಕನಾಗಬಹುದು. ಆದಾಗ್ಯೂ ಬ್ರಾಹ್ಮಣ ಲಿಂಗಾಯತ ವೀರಶೈವ ಹಿಂದುಳಿದವ ಮತ್ತೊಬ್ಬ ಯಾವನೇ ಆಗಿರಲಿ, ಮನೆ ದೇವಸ್ಥಾನ ಸಾರ್ವಜನಿಕ ಸ್ಥಳ ಎಲ್ಲಿಯೇ ಆಗಲಿ ಅಸ್ಪೃಶ್ಯತೆ ಆಚರಿಸಿದರೆ ದಂಡಿಸುವ ಕಾನೂನಿದೆ. ಜಾಗೃತಿ ಮೂಡಿಸೋಣ. ಅಷ್ಟಕ್ಕೂ ಚಾತುರ್ವರ್ಣ್ಯ ಆರಂಭವಾದದ್ದು ವ್ಯಕ್ತಿಯ ಸ್ವಭಾವ ಮತ್ತು ಕೆಲಸಗಳ ಆಧಾರದಡಿ. ಬಡಿಗ ಚಮ್ಮಾರನಂತೆ. ಮುಂದೆ ಅದು ಜಾತಿಯಾದದ್ದು ಕಾಲ ಸಮಾಜ ದೋಷ, ಹೊರತು ಮೂಲದ್ದಲ್ಲ. ಖರೀದಿಸಿದ ಸ್ವತ್ತು ವಿವಾದಕ್ಕೊಳಗಾದಂತೆ. ಪರಿಷ್ಕಾರ ಕ್ರಮವೇ ಹೊರತು ತಿರಸ್ಕಾರವಲ್ಲ.


# ಬೆಂಗಳೂರಿನಲ್ಲಿ ಆಕ್ಸಿಲರೇಟರ್‌ಗಿಂತ ಹಾರ್ನ್ ಹೆಚ್ಚು ಉಪಯುಕ್ತ

## ಬೆಂಗಳೂರು ಸಮುದ್ರವಿಲ್ಲದ ಹವಾಯಿ ದ್ವೀಪದಂತೆ ಎಂದು ಬಣ್ಣಿಸಿದ ಜಪಾನಿ ಸಿಇಒ

• ಉದಯವಾಹಿನಿ, ಬೆಂಗಳೂರು

ಐಟಿ-ಬಿಟಿ ಕಂಪನಿಗಳು, ನೆರೆ ರಾಜ್ಯದವರು, ವಿದೇಶಿಗರು ಎಲ್ಲರಿಗೂ ಬೆಂಗಳೂರೆ ಅಚ್ಚುಮೆಚ್ಚು. ಉದ್ಯೋಗ, ಪ್ರೀತಿ, ಬದುಕು ಕಟ್ಟಿಕೊಡುವ, ಲಕ್ಷಾಧೀಶ್ವರರನ್ನಾಗಿ ಮಾಡುವುದು ಈ ಬೆಂಗಳೂರೆ....ಆದರೆ, ಇತ್ತೀಚೆಗೆ ಪ್ರತಿಯೊಬ್ಬರ ದೂರು ಎಂದರೆ ಅದು ಟ್ರಾಫಿಕ್. ರಾಷ್ಟ್ರ, ವಿದೇಶ ಮಟ್ಟದಲ್ಲೂ ಇದರದ್ದೇ ಮಾತುಕತೆ. ಸದ್ಯ ಸಿಲಿಕಾನ್ ಸಿಟಿ ಬಗ್ಗೆ ಜಪಾನಿನ ಸಿಇಒ ಒಬ್ಬರು ಲಿಂಕ್ಡಿನ್‌ನಲ್ಲಿ ಪೋಸ್ಟ್‌ವೊಂದನ್ನು ಹಂಚಿಕೊಂಡಿದ್ದಾರೆ. ಅವರು ಬೆಂಗಳೂರಿನ ಬಗ್ಗೆ ಹೇಳಿದ್ದಿಷ್ಟು. ಬಿಯಾಂಡ್ ನೆಕ್ಸ್ಟ್ ವೆಂಚರ್ಸ್‌ನ ಸಿಇಒ ಮತ್ತು ಸಹ-ಸಂಸ್ಥಾಪಕ ಜಪಾನಿನ ಉದ್ಯಮಿ ತ್ಸುಯೋಶಿ ಇಟೊ ಅವರ ಪೋಸ್ಟ್ ಸದ್ಯ ಸೋಶಿಯಲ್ ಮೀಡಿಯಾದಲ್ಲಿ ವೈರಲ್ ಆಗುತ್ತಿದೆ. ಟ್ರಾಫಿಕ್ ಸಮಸ್ಯೆವೊಂದು ಹೋಗಲಾಡಿಸಿಬಿಟ್ಟರೆ ಬೆಂಗಳೂರು ಸ್ವರ್ಗ. ಅವರ ಈ ಪೋಸ್ಟ್‌ಗೆ ಕೆಲವರು ನಿಜಕ್ಕೂ ನೂರಕ್ಕೆ ನೂರು ಇದು ಸತ್ಯ ಎಂದು ನೆಟ್ಟಿಗರು ಕಾಮೆಂಟ್ ಮಾಡುತ್ತಿದ್ದಾರೆ.

**ಲಿಂಕ್ಡಿನ್ ಪೋಸ್ಟ್‌ನಲ್ಲಿ ಏನಿದೆ:** ಬೆಂಗಳೂರು ನಿಸ್ಸಂದೇಹವಾಗಿ ವಿಶ್ವದ ಅತ್ಯುತ್ತಮ ನಗರ. ನೀವಿಲ್ಲಿವಾಸಿಸಿದರೆ ಮಾತ್ರ ಈ ವಿಷಯ ನಿಮಗೆ ಅರ್ಥವಾಗುತ್ತದೆ. ಇನ್ನು ಇಲ್ಲಿನ ಹವಾಮಾನದ ಬಗ್ಗೆ ಹೇಳುವುದಾದರೆ ಅದಕ್ಕೆ ಸಾಟಿಯೇ ಇಲ್ಲ.


ಉದಯವಾಹಿನಿ ಚಿತ್ರ

ಆದರೆ ಇತ್ತೀಚಿನ ದಿನಗಳಲ್ಲಿ, ಅನೇಕ ಜಪಾನಿಯರು ಭಾರತಕ್ಕೆ ಬರಲು ಹಿಂದೇಟು ಹಾಕುತ್ತಾರೆ. ಅದಕ್ಕೆ ಕಾರಣ ಈ ಟ್ರಾಫಿಕ್. ಎಂದು ಬರೆದುಕೊಂಡಿದ್ದಾರೆ.

ಬೆಂಗಳೂರಿಗೆ ಬರಲು ಹಿಂದೇಟು ಹಾಕುವವರಿಗೆ ನಾನು ಹೇಳೋದು ಇಷ್ಟು, ನಾನು ಬೆಂಗಳೂರನ್ನು ಪರಿಚಯಿಸುವಾಗ, ಯುಎಸ್‌ನಲ್ಲಿರುವ ಹವಾಯಿ ದ್ವೀಪವನ್ನು ಸಮುದ್ರವಿಲ್ಲದಂತೆ ಊಹಿಸಿಕೊಳ್ಳಿ ಎಂದು ನಾನು ಹೇಳುತ್ತಾನೆ. ಹವಾಯಿ ದ್ವೀಪ ಎಂದರೆ ಜಪಾನಿಯರಿಗೆ ಒಂದು ಸ್ವರ್ಗವಿದ್ದಂತೆ. ವಾಸ್ತವದಲ್ಲಿ ನೀವು ಬೆಂಗಳೂರನ್ನು ಹವಾಯಿಗೆ ಹೋಲಿಸಿದರೆ, ಅವೆರಡಕ್ಕೂ ಅಂತಹ ಯಾವ ಸಂಬಂಧವೂ ಇಲ್ಲ. ಆದರೆ ಏನು ಮಾಡುವುದು ಈ ರೀತಿ ಹೇಳುವುದು ತುಂಬಾನೆ ಕೆಲಸ ಮಾಡುತ್ತದೆ. ಎಂದು ಹೇಳಿಕೊಂಡಿದ್ದಾರೆ.

ಗಾಡಿ ನುಗ್ಗಿಸುವುದು, ಶಾಂತವಾಗಿರುವುದು ಕಲಿತಿದ್ದೇನೆ

ವಾಸ್ತವವಾಗಿ ನಿಜಕ್ಕೂ ಹೇಳಬೇಕೆಂದರೆ ನನ್ನಲ್ಲಿ ಇತ್ತೀಚೆಗೆ ಕೆಲವೊಂದು ಅಚ್ಚರಿಯ ಬದಲಾವಣೆಗಳಾಗಿವೆ. ಜಪಾನ್‌ನಲ್ಲಿ ನಾನು ಅಪರೂಪಕ್ಕೊಮ್ಮೆ 'ಹಾರ್ನ್' ಮುಟ್ಟುತ್ತಿದ್ದೆ. ಆದರೆ ಇಲ್ಲಿ ಹಾರ್ನ್ ಮಾಡುವುದನ್ನೇ ಕರಗತ ಮಾಡಿಕೊಂಡಿದ್ದೇನೆ. ನನ್ನಿಂದೆ ಬರುವ ಗಾಡಿಗಳಿಗಿಂತ ಮುಂಚಿತವಾಗಿ ವೇಗವಾಗಿ, ಸರ್ಕಲ್ ಅಥವಾ ಇಂಟರ್‌ಸೆಕ್ಷನ್‌ಗಳಿಗೆ ನುಗ್ಗುವ ಧೈರ್ಯವನ್ನು ತಂದುಕೊಂಡಿದ್ದೇನೆ. ನಾನೀಗ ಡ್ರೈವಿಂಗ್‌ನಲ್ಲಿ ಪರಿಣಿತ. ತಪ್ಪು ದಿಕ್ಕಿನಲ್ಲಿ ಬೈಕುಗಳು, ಕಾರುಗಳು ಅಥವಾ ಹಸುಗಳು ಎದುರಾದರೂ, ಶಾಂತವಾಗಿರುವುದನ್ನು ಕಲಿತುಕೊಂಡಿದ್ದೇನೆ. ಇಂತಹ ಅನುಭವ ನಿಜ ಹೇಳಬೇಕೆಂದರೆ ಜಪಾನ್‌ನಲ್ಲೂ ದೊರೆತಿಲ್ಲ.

**ಬೆಂಗಳೂರಿಗೆ ಕಳಂಕವೇ ಟ್ರಾಫಿಕ್**


**ಮುಂದುವರೆದು, ಆದರೆ ಒಂದಂತೂ ನಿಜಕ್ಕೂ ಸತ್ಯ, ಬೆಂಗಳೂರಿನ ಹವಾಮಾನ, ಹಿತಕರವಾದ ಗಾಳಿ ಮತ್ತು ವಸಂತ ಕಾಲ,ಬೇಸಿಗೆ ಇಲ್ಲಿನ ವಾತಾವರಣ ಮಾತ್ರ ತುಂಬಾನೆ ಅದ್ಭುತ ನನಗೆ ಬೆಂಗಳೂರಿನ ಈ ಹವಾಮಾನವೆಂದರೆ ತುಂಬಾ ಇಷ್ಟ. ಆದರೆ... ಇಲ್ಲೊಂದು ಸಣ್ಣ ಸಮಸ್ಯೆಯಿದೆ, ಅದುವೇ ಇಲ್ಲಿನ ಟ್ರಾಫಿಕ್ (ಡಿಕೆ ಶಿವಕುಮಾರ್ ಮತ್ತು ಸಂಜೀವ್ ರೈ ಮಧ್ಯೆ ಟ್ರಾಫಿಕ್ ಸಮಸ್ಯೆ ಬಗ್ಗೆ ಫೈಟ್) ನಾನು ವಿದೇಶದಲ್ಲಿ ವಾಸಿಸುತ್ತಿರುವಾಗ ಪ್ರತಿಯೊಂದನ್ನು ಅಲ್ಲಿನ ಸ್ಥಳೀಯ ರೀತಿಯಲ್ಲೇ ಅನುಭವಿಸುವುದು ಮುಖ್ಯ ಎಂದು ನಿರ್ಣಯಿಸಿಕೊಂಡಿದ್ದೆ.**

**ಹೀಗಾಗಿಯೇ ನಾನು ಬೆಂಗಳೂರಿಗೆ ಬಂದಾಗ ಇಲ್ಲಿನ ಸ್ಥಿತಿಯನ್ನು ಅಳವಡಿಸಿಕೊಳ್ಳಲು ಸುಜುಕಿ ಕಾರನ್ನು ಖರೀದಿಸಿದೆ. ಆನಂತರ ಟ್ರಾಫಿಕ್ ಎದುರಿಸಲು ಮುಂದಾದೆ. ಭಾರತದಲ್ಲಿ ಡ್ರೈವಿಂಗ್ ಮಾಡಲು ಶುರು ಮಾಡಿದ ಮೇಲೆ ನನಗೊಂದು ವಿಷಯ ಅರಿವಾಯಿತು, ನಾನು ಇಲ್ಲಿನ ಪರಿಸರಕ್ಕೆ ನಿಜವಾಗಿಯೂ ಬೇಗನೆ ಹೊಂದುಕೊಂಡು ಬಿಟ್ಟೆ ಎನ್ನುವುದು ತಿಳಿಯಿತು.**

## ಊಂಜಲ್ ಸಂಗೀತೋತ್ಸವ

• ಉದಯವಾಹಿನಿ, ಬೆಂಗಳೂರು

ತಿರುಮಲ ತಿರುಪತಿ ದೇವಸ್ಥಾನಗಳು ಹಿಂದೂಧರ್ಮ ಪ್ರಚಾರ ಪರಿಷತ್ ವತಿಯಿಂದ ವಯ್ಯಾಲಿಕಾವಲಿನ 16ನೇ ಅಡ್ಡರಸ್ತೆಯಲ್ಲಿರುವ ಶ್ರೀ ವೆಂಕಟೇಶ್ವರ ಸ್ವಾಮಿ ದೇವಸ್ಥಾನ(ಟಿಟಿಡಿ)ದಲ್ಲಿ ಡಿಸೆಂಬರ್ 13, ಶನಿವಾರ ಸಂಜೆ 6-00ಕ್ಕೆ ವಿದುಷಿ ಶ್ರೀಮತಿ ಮಾನಸಾ ಜಯರಾಜ್ ಕುಲಕರ್ಣಿ ಅವರಿಂದ ಊಂಜಲ್ ಸಂಗೀತೋತ್ಸವ ಕಾರ್ಯಕ್ರಮ ಏರ್ಪಡಿಸಿದ್ದು, ಇವರ ಗಾಯನಕ್ಕೆ ಹಾರ್ಮೋನಿಯಂ ವಾದನದಲ್ಲಿ ಶ್ರೀ ಕೃಷ್ಣಮೂರ್ತಿ, ತಬಲಾ ವಾದನದಲ್ಲಿ ಶ್ರೀ ಅಭಿಜಿತ್ ಅವರು ಸಹಕರಿಸಲಿದ್ದಾರೆ ಎಂದು ಟಿ ಟಿ ಡಿ ಹೆಚ್.ಡಿ.ಪಿ.ಪಿ. ಸಂಚಾಲಕರಾದ ಡಾ|| ಪಿ. ಭುಜಂಗರಾವ್ ತಿಳಿಸಿದ್ದಾರೆ.



## ನಾಗರಬಾವಿ ಬಡಾವಣೆಯಲ್ಲಿ ರೂ.140 ಕೋಟಿ ಮೌಲ್ಯದ ಆಸ್ತಿ ವಶಪಡಿಸಿಕೊಂಡ ಬಿಡಿಎ

• ಉದಯವಾಹಿನಿ, ಬೆಂಗಳೂರು

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಕಾರ್ಯಾಚರಣೆ ನಡೆಸಿ, ನಾಗರಬಾವಿ ಬಡಾವಣೆಯಲ್ಲಿ ರೂ.140 ಕೋಟಿ ಮೌಲ್ಯದ ಆಸ್ತಿಯನ್ನು ವಶಪಡಿಸಿಕೊಂಡಿದೆ.ಯಶವಂತಪುರ ಹೋಬಳಿಯ ನಾಗರಬಾವಿ ಗ್ರಾಮದ ಸರ್ವೆ ನಂ. 17ರಲ್ಲಿ 2 ಎಕರೆ 30 ಗುಂಟೆ ಪ್ರದೇಶಗಳಲ್ಲಿ ಅಕ್ರಮವಾಗಿ ನಿರ್ಮಿಸಿದ್ದ ಶೆಡ್‌ಗಳನ್ನು ತೆರವುಗೊಳಿಸಿ, ನೂರು ಕೋಟಿಗೂ ಅಧಿಕ ಮೌಲ್ಯದ ಪ್ರದೇಶವನ್ನು ಪ್ರಾಧಿಕಾರವು ವಶಪಡಿಸಿಕೊಂಡಿತು. ಕೆ.ಆರ್. ಪುರ ಹೋಬಳಿಯ ಕುಂದಲಹಳ್ಳಿ ಗ್ರಾಮದ ಸರ್ವೆ ನಂ. 118ರ 8,070 ಚದರ ಅಡಿಯ ಪ್ರದೇಶದಲ್ಲಿನ ಅಕ್ರಮ ಕಟ್ಟಡಗಳನ್ನು ತೆರವುಗೊಳಿಸಿ, ಸುಮಾರು ರೂ.25 ಕೋಟಿ ಮೌಲ್ಯದ ನಾಗರಿಕ ಸೌಲಭ್ಯ ನಿವೇಶನ ವಶಪಡಿಸಿಕೊಂಡಿದೆ.

## ಉದ್ದೇಶಪೂರ್ವಕ ತಪ್ಪು ಕ್ಷಮಿಸಲ್ಲ: ಪೊಲೀಸ್ ಮಹಾ ನಿರ್ದೇಶಕ ಅಲೋಕ್ ಕುಮಾರ್

• ಉದಯವಾಹಿನಿ, ಬೆಂಗಳೂರು

ಒಳ್ಳೆಯ ಕೆಲಸ ಮಾಡುವ ಅಧಿಕಾರಿ ಮತ್ತು ಸಿಬ್ಬಂದಿಯನ್ನು ಗುರುತಿಸಿ, ಪ್ರೋತ್ಸಾಹಿಸಲಾಗುವುದು. ಆದರೆ, ಉದ್ದೇಶಪೂರ್ವಕವಾಗಿ ತಪ್ಪು ಮಾಡಿದರೆ ಕ್ರಮ ಕೈಗೊಳ್ಳಲಾಗುವುದು ಎಂದು ಕಾರಾಗೃಹ ಹಾಗೂ ಸುಧಾರಣಾ ಸೇವೆಗಳ ಇಲಾಖೆಯ ರಾಜ್ಯ ಪೊಲೀಸ್ ಮಹಾ ನಿರ್ದೇಶಕ ಡಿಜಿಪಿ ಅಲೋಕ್ ಕುಮಾರ್ ಹೇಳಿದರು. ನಗರದಲ್ಲಿ ಅಧಿಕಾರ ಸ್ವೀಕರಿಸಿ ಮಾತನಾಡಿದ ಅವರು, ಇಲಾಖೆಯಲ್ಲಿ ಸುಧಾರಣೆ ಆಗಬೇಕು. ಅದೇ ರೀತಿ ಕೈದಿಗಳಲ್ಲೂ ಸುಧಾರಣೆ ಆಗಬೇಕಿದೆ. ಅಧಿಕಾರಿಗಳು ಮತ್ತು ಸಿಬ್ಬಂದಿಯ ಸಹಕಾರದೊಂದಿಗೆ ಉತ್ತಮವಾಗಿ ಕಾರ್ಯ ನಿರ್ವಹಿಸಲಾಗುವುದು. ಕೆಲವೊಮ್ಮೆ ಉದ್ದೇಶಪೂರ್ವಕವಲ್ಲದ ಸಣ್ಣ ತಪ್ಪುಗಳು ಆಗುತ್ತವೆ. ಆದರೆ, ಉದ್ದೇಶಪೂರ್ವಕವಾಗಿ ಅಕ್ರಮದಲ್ಲಿ ಭಾಗಿಯಾದರೆ ಸಹಿಸುವುದಿಲ್ಲ ಎಂದು ಎಚ್ಚರಿಸಿದರು. ಬೈಲಹೊಂಗಲ ಸೇರಿದಂತೆ ರಾಜ್ಯದ ವಿವಿಧ ಕಾರಾಗೃಹಗಳಿಗೆ ಭೇಟಿ ನೀಡಿದ್ದೇನೆ. ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದ ಮೇಲೆಯೂ ಈ ಹಿಂದೆ ಸಾಕಷ್ಟು ಬಾರಿ ದಾಳಿ ಮಾಡಿ, ಪರಿಶೀಲನೆ ನಡೆಸಿದ್ದೇನೆ. ಅಧಿಕಾರಿಗಳೊಂದಿಗೆ ಸಮಾಲೋಚನೆ ನಡೆಸಿ, ಸಮಸ್ಯೆಗಳನ್ನು ಅರ್ಥೈಸಿಕೊಂಡು ಮುಂದಿನ ಕ್ರಮ ಕೈಗೊಳ್ಳಲಾಗುವುದು. ಇಲಾಖೆಯಲ್ಲಿ ಪ್ರತಿ ಅಧಿಕಾರಿ ಮತ್ತು ಸಿಬ್ಬಂದಿ ಪಾತ್ರ ಮುಖ್ಯ. ಅಕ್ರಮಗಳ ನಿಯಂತ್ರಣ ಅವರಿಂದಲೇ ಸಾಧ್ಯ' ಎಂದರು.




# ಮೇಕೆದಾಟು ಯೋಜನೆ ತ್ವರಿತ ಅನುಷ್ಠಾನ

• ಉದಯವಾಹಿನಿ, ಬೆಂಗಳೂರು

ಕರ್ನಾಟಕದ ಪರ ಸುಪ್ರೀಂ ಕೋರ್ಟ್ ಆದೇಶದ ಹಿನ್ನೆಲೆಯಲ್ಲಿ ಮೇಕೆದಾಟು ಸಮತೋಲಿತ ಜಲಾಶಯನ ಯೋಜನೆ ತ್ವರಿತ ಅನುಷ್ಠಾನಕ್ಕೆ ಕೆಇಆರ್ ಎಸ್ ಕರ್ನಾಟಕ ಇಂಜಿನಿಯರಿಂಗ ಸಂಶೋಧನಾ ಕೇಂದ್ರ ನಿರ್ದೇಶಕರ ನೇತೃತ್ವದಲ್ಲಿ ತಂಡವನ್ನು ರಚಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ. ಈ ತಂಡವು ಉಪ ಮುಖ್ಯ ಇಂಜಿನಿಯರ್ ಹಾಗೂ ಸಿಬ್ಬಂದಿಯನ್ನು ಒಳಗೊಂಡಿದ್ದು, ಬೆಂಗಳೂರು ದಕ್ಷಿಣ ಜಿಲ್ಲೆಯ ರಾಮನಗರವನ್ನು ಕೇಂದ್ರ ಸ್ಥಾನವಾಗಿಟ್ಟುಕೊಂಡು ಕೆಲಸ ನಿರ್ವಹಿಸಲಿದೆ. ರಾಮನಗರದಲ್ಲೇ ಮೇಕೆದಾಟು ಯೋಜನೆ ಕಚೇರಿ ಸ್ಥಾಪಿಸಲಾಗುವುದು ಎಂದು ಆದೇಶದಲ್ಲಿ ತಿಳಿಸಲಾಗಿದೆ.

18.11.2025 ರಂದು ಡಿಸಿಎಂ ಡಿ ಕೆ ಶಿವಕುಮಾರ್ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಮೇಕೆದಾಟು ಯೋಜನೆ ತ್ವರಿತ ಜಾರಿಗೆ ಒಂದು ಮುಖ್ಯ ಇಂಜಿನಿಯರ್ ಕಚೇರಿ


ಉದಯವಾಹಿನಿ ಚಿತ್ರ

ಹಾಗೂ ಒಂದು ಅಧೀಕ್ಷಕ ಇಂಜಿನಿಯರ್ ಕಚೇರಿಯನ್ನು ಆರಂಭಿಸಲು ನಿರ್ಧರಿಸಲಾಗಿತ್ತು. ಆದರೆ ಹೊಸದಾಗಿ ಕಚೇರಿ ಸ್ಥಾಪನೆ ಹಾಗೂ ಹುದ್ದೆಗಳ ನೇಮಕಕ್ಕೆ ಆರ್ಥಿಕ ಇಲಾಖೆಯ ಅನುಮತಿ ಅಗತ್ಯವಾಗಿದ್ದು, ಇದಕ್ಕೆ ಬಹಳಷ್ಟು ಸಮಯಾವಕಾಶ ಬೇಕಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಸರ್ಕಾರವು ಈ ಯೋಜನೆ ಜಾರಿಯ ಜವಾಬ್ದಾರಿಯನ್ನು ಕೆಇಆರ್ ಎಸ್ ನಿರ್ದೇಶಕರಿಗೆ ವಹಿಸಿದೆ. ಕೆಇಆರ್ ಎಸ್ ಸಂಸ್ಥೆ ತನ್ನಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳು ಹಾಗೂ ನೌಕರರನ್ನು ಒಳಗೊಂಡು ತಂಡವನ್ನು ರಚಿಸಿ ಮೇಕೆದಾಟು ಯೋಜನೆಯ ಜಾರಿಯ ಜವಾಬ್ದಾರಿಯನ್ನು ನೀಡಲಾಗಿದೆ.

ಈ ತಂಡಕ್ಕೆ ಓರ್ವ ಕಾರ್ಯಪಾಲಕ ಇಂಜಿನಿಯರ್, ಮೂವರು ತಾಂತ್ರಿಕ ಸಹಾಯಕರು, ಆರು ಸಹಾಯಕ ಇಂಜಿನಿಯರ್, ಓರ್ವ ಸಹಾಯಕ ಆಡಳಿತಾಧಿಕಾರಿ, ಓರ್ವ ಲೆಕ್ಕಾಧೀಕ್ಷಕರು, ಅಧೀಕ್ಷಕರು, ಪ್ರಥಮ ದರ್ಜೆ ಲೆಕ್ಕ ಸಹಾಯಕರು, ಇಬ್ಬರು ಪ್ರಥಮ ದರ್ಜೆ ಸಹಾಯಕರು, ಓರ್ವ ದ್ವಿತೀಯ ದರ್ಜೆ ಲೆಕ್ಕ ಸಹಾಯಕರು, ನಾಲ್ವರು ದ್ವಿತೀಯ ದರ್ಜೆ ಸಹಾಯಕರು, ಓರ್ವ ಶೀಘ್ರಲಿಪಿಗಾರರು, ನಾಲ್ವರು ಬೆರಳಚ್ಚುಗಾರರು, ಓರ್ವ ವಾಹನ ಚಾಲಕರ, ಇಬ್ಬರು ಗ್ರೂಪ್ ಡಿ ಸಿಬ್ಬಂದಿ, 1 ಕಾವಲುಗಾರನನ್ನು ನೇಮಿಸಲಾಗಿದೆ.

## ಜಾಮೀನು ನಿರಾಕರಣೆ ಪ್ರಶ್ನಿಸಿ ಹೈಕೋರ್ಟ್ ಮೆಟ್ಟಿಲೇರಿದ ವಿನಯ್ ಕುಲಕರ್ಣಿ!

• ಉದಯವಾಹಿನಿ, ಬೆಂಗಳೂರು

2016ರಲ್ಲಿ ನಡೆದ ಬಿಜೆಪಿ ನಾಯಕ ಯೋಗೇಶ್ ಗೌಡ ಅವರ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಕಾಂಗ್ರೆಸ್ ಶಾಸಕ ವಿನಯ್ ಕುಲಕರ್ಣಿ ತಮಗೆ ಜಾಮೀನು ನಿರಾಕರಿಸಿದ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದ ಆದೇಶವನ್ನು ಪ್ರಶ್ನಿಸಿ ಕರ್ನಾಟಕ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ.



ವಿನಯ್ ಕುಲಕರ್ಣಿ ಅವರಿಗೆ ಜಾಮೀನು ನೀಡಲು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ನಿರಾಕರಿಸಿತ್ತು. ಜಾಮೀನು ಅರ್ಜಿ ವಿಚಾರಣೆ ನಡೆಸಿ, ಕಾಯ್ದಿರಿಸಿದ್ದ ಆದೇಶವನ್ನು ವಿಶೇಷ ನ್ಯಾಯಾಧೀಶ ಸಂತೋಷ ಗಜಾನನ ಭಟ್ ಪ್ರಕಟಿಸಿದರು. ನ್ಯಾಯಮೂರ್ತಿ ಎಸ್. ಸುನೀಲ್‌ದತ್ ಯಾದವ್ ಅವರಿದ್ದ ಏಕಸದಸ್ಯ ಪೀಠವು ವಿನಯ್ ಕುಲಕರ್ಣಿ ಅವರ ಅರ್ಜಿಯ ವಿಚಾರಣೆ ನಡೆಸಿತು. ವಿಚಾರಣೆಯ ಸಮಯದಲ್ಲಿ, ವಿನಯ್ ಕುಲಕರ್ಣಿ ಪರ ಹಾಜರಾದ ಹಿರಿಯ ವಕೀಲ ಸಿವಿ ನಾಗೇಶ್, ಹೆಚ್ಚಿನ ಪ್ರತ್ಯಕ್ಷದರ್ಶಿಗಳು ತಮ್ಮ ಹಿಂದಿನ ಹೇಳಿಕೆಗಳನ್ನು ಹಿಂತೆಗೆದುಕೊಂಡಿದ್ದಾರೆ. ಆದ್ದರಿಂದ ವಿಚಾರಣೆಯ ಸಮಯದಲ್ಲಿ ಅರ್ಜಿದಾರರನ್ನು ಕಸ್ಟಡಿಯಲ್ಲಿ ಇಡುವ ಅಗತ್ಯವಿಲ್ಲ ಎಂದು ವಾದಿಸಿದರು. ಆದ್ದರಿಂದ, ಅರ್ಜಿಯನ್ನು ತುರ್ತಾಗಿ ವಿಚಾರಣೆ ನಡೆಸಿ ಜಾಮೀನು ನೀಡಬೇಕು ಎಂದರು. ಇದಕ್ಕೆ ಪ್ರತಿಕ್ರಿಯೆಯಾಗಿ, ಸಿಬಿಐ ಪರ ವಕೀಲರು ಆಕ್ಷೇಪಣೆಗಳನ್ನು ಸಲ್ಲಿಸಲು ಸಮಯ ಕೋರಿದರು. ಈ ಮನವಿಯನ್ನು ಸ್ವೀಕರಿಸಿದ ನ್ಯಾಯಾಲಯವು ವಿಚಾರಣೆಯನ್ನು ಡಿಸೆಂಬರ್ 18ಕ್ಕೆ ಮುಂದೂಡಿತು. ಧಾರವಾಡ ಜಿಲ್ಲಾ ಪಂಚಾಯತ್ ಸದಸ್ಯ ಯೋಗೇಶ್ ಗೌಡ ಅವರನ್ನು 2016ರ ಜೂನ್ 15ರಂದು ಅವರ ಮಾಲಿಕತ್ವದ ಜಿಮ್‌ನಲ್ಲಿ ಭೀಕರವಾಗಿ ಹತ್ಯೆ ಮಾಡಲಾಗಿತ್ತು. ಆ ಸಮಯದಲ್ಲಿ ಕುಲಕರ್ಣಿ ಅವರು ರಾಜ್ಯದಲ್ಲಿ ಸಿದ್ದರಾಮಯ್ಯ ನೇತೃತ್ವದ ಆಗಿನ ಕಾಂಗ್ರೆಸ್ ಸರ್ಕಾರದಲ್ಲಿ ಸಚಿವರಾಗಿದ್ದರು.

ಸೆಪ್ಟೆಂಬರ್ 2019 ರಲ್ಲಿ, ರಾಜ್ಯ ಸರ್ಕಾರ ಪ್ರಕರಣದ ತನಿಖೆಯನ್ನು ಸಿಬಿಐಗೆ ಹಸ್ತಾಂತರಿಸಿತು. ಈ ಪ್ರಕರಣದಲ್ಲಿ ವಿನಯ್ ಕುಲಕರ್ಣಿ ಅವರ ಕೈವಾಡದ ಬಗ್ಗೆ ಆರೋಪಿಸಿ 2020ರ ನವೆಂಬರ್ 5ರಂದು ಸಿಬಿಐ ಅಧಿಕಾರಿಗಳು ಅವರನ್ನು ಬಂಧಿಸಿದ್ದರು. ಒಂಬತ್ತು ತಿಂಗಳ ಕಾಲ ಜೈಲಿನಲ್ಲಿದ್ದ ನಂತರ, ಕುಲಕರ್ಣಿ ಅವರನ್ನು 2021ರ ಆಗಸ್ಟ್ 13ರಂದು ಬಿಡುಗಡೆ ಮಾಡಲಾಯಿತು.

# ತಿದ್ದುಪಡಿ ಮಸೂದೆ: ಬಿಬಿಎಂಪಿ ಆಚೆಗೂ ಜಿಬಿಎ ವಿಸ್ತರಣೆ

• ಉದಯವಾಹಿನಿ, ಬೆಂಗಳೂರು



ಗ್ರೇಟರ್ ಬೆಂಗಳೂರು ಪ್ರಾಧಿಕಾರದ ವ್ಯಾಪ್ತಿಯನ್ನು ಹಿಂದಿನ ಬಿಬಿಎಂಪಿ ವ್ಯಾಪ್ತಿಯ ಆಚೆಗೆ ವಿಸ್ತರಿಸಲು ಅವಕಾಶ ಕಲ್ಪಿಸುವ ಉದ್ದೇಶದಿಂದ ಗ್ರೇಟರ್ ಬೆಂಗಳೂರು ಆಡಳಿತ (ಎರಡನೇ ತಿದ್ದುಪಡಿ) ಮಸೂದೆ-2025 ಅನ್ನು ವಿಧಾನಸಭೆಯಲ್ಲಿ ಮಂಡಿಸಲಾಯಿತು. ಬೆಂಗಳೂರು ಅಭಿವೃದ್ಧಿ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಪರವಾಗಿ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರು ಈ ಮಸೂದೆ ಮಂಡಿಸಿದರು.

ಗ್ರೇಟರ್ ಬೆಂಗಳೂರು ಪ್ರಾಧಿಕಾರಕ್ಕೆ ಹೊಸದಾಗಿ ಸೇರಿಸಲಾದ ನಗರ ಮತ್ತು ಗ್ರಾಮೀಣ ಸ್ಥಳೀಯ ಸಂಸ್ಥೆ ವ್ಯಾಪ್ತಿಯ ಪ್ರದೇಶಗಳ ಮರು ವಿಂಗಡಣೆಗೆ ಮೂರು ತಿಂಗಳ ಕಾಲಮಿತಿ ವಿಧಿಸಲಾಗಿದೆ. ಜೊತೆಗೆ, ನಗರಪಾಲಿಕೆಯ ಮುಂದಿನ ಸಾರ್ವತ್ರಿಕ ಚುನಾವಣೆಯ ಕನಿಷ್ಠ ಆರು ತಿಂಗಳ ಮೊದಲು ಜನಗಣತಿಯ ಫಲಿತಾಂಶಗಳು ಲಭ್ಯ ಇದ್ದರೆ ಮತ್ತು ಪ್ರತಿ ಜನಗಣತಿಯ ಬಳಿಕ ನಗರಪಾಲಿಕೆಯ ಮುಂದಿನ ಸಾರ್ವತ್ರಿಕ ಚುನಾವಣೆಯ ಮೊದಲು ಹೊಸ ಪುನರ್‌ವಿಂಗಡಣೆ ಪ್ರಕ್ರಿಯೆ ನಡೆಸಬೇಕು ಎಂದು ಮಸೂದೆಯಲ್ಲಿ ಉಲ್ಲೇಖಿಸಲಾಗಿದೆ. ಗ್ರೇಟರ್ ಬೆಂಗಳೂರು ನಗರಪಾಲಿಕೆಗಳಿಗೆ ನೇಮಕವಾದ ಸದಸ್ಯ ಪದಾವಧಿಯವರೆಗೆ ಆಯಾ ವಿಧಾನಸಭೆ ಕ್ಷೇತ್ರ ಮಟ್ಟದ ಸಮಾಲೋಚನಾ ಮತ್ತು ಸಮನ್ವಯ ಸಮಿತಿಗೆ ನಾಮನಿರ್ದೇಶಿತ ಸದಸ್ಯ ಕೂಡ ಆಗಿರುತ್ತಾರೆ ಎಂದೂ ಮಸೂದೆಯಲ್ಲಿದೆ.


**ಜಿಬಿಎ ಸದಸ್ಯರ ಸಂಖ್ಯೆ ಹೆಚ್ಚಳ:** ಜಿಬಿಎ ಪ್ರದೇಶ ಅಥವಾ ಭಾಗಶಃ ಮತಕ್ಷೇತ್ರ ಬರುವ ಲೋಕಸಭೆ, ರಾಜ್ಯಸಭೆ, ವಿಧಾನಸಭೆ, ವಿಧಾನ ಪರಿಷತ್ ಸದಸ್ಯರು, ರಾಜ್ಯಸಭೆ, ವಿಧಾನ ಪರಿಷತ್‌ಗೆ ನೇಮಕವಾದ ಸದಸ್ಯರು, ವಿಧಾನ ಪರಿಷತ್ ಶಿಕ್ಷಕರ, ಪದವೀಧರ ಕ್ಷೇತ್ರದಿಂದ ಚುನಾಯಿತರು, ಜಿಬಿಎ ಪ್ರದೇಶದ ಮತದಾರರ ಪಟ್ಟಿಯಲ್ಲಿ ಇರುವ ರಾಜ್ಯಸಭಾ, ವಿಧಾನ ಪರಿಷತ್ ಸದಸ್ಯರು ಪ್ರಾಧಿಕಾರದ ಸದಸ್ಯರಾಗಲಿದ್ದಾರೆ. ಅಲ್ಲದೆ, ಮುಖ್ಯ ಕಾರ್ಯದರ್ಶಿ, ನಗರಾಭಿವೃದ್ಧಿ ಹಾಗೂ ಆರ್ಥಿಕ ಇಲಾಖೆಗಳ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳು ಜಿಬಿಎ ಪದನಿಮಿತ್ತ ಸದಸ್ಯರಾಗಲಿದ್ದಾರೆ ಎಂದೂ ಮಸೂದೆಯಲ್ಲಿ ಪ್ರಸ್ತಾಪಿಸಲಾಗಿದೆ.

## ಕೆ.ಆರ್.ಪುರದಿಂದ ಸಿಲ್ಕ್ ಬೋರ್ಡ್‌ವರೆಗೆ 10 ಪಥದ ರಸ್ತೆ: ರೂ.307 ಕೋಟಿ ಅನುಮೋದನೆ

• ಉದಯವಾಹಿನಿ, ಬೆಂಗಳೂರು

ಬೆಂಗಳೂರು ಸ್ಮಾರ್ಟ್ ಇನ್ಫ್ರಾಸ್ಟ್ರಕ್ಚರ್ ಲಿಮಿಟೆಡ್ ಬಿಸ್ಮೈಲ್ ವತಿಯಿಂದ ಸಿಲ್ಕ್ ಬೋರ್ಡ್ ಜಂಕ್ಷನ್‌ನಿಂದ ಕೆ.ಆರ್.ಪುರ ಮೆಟ್ರೊ ನಿಲ್ದಾಣದವರೆಗೆ ಹೊರ ವರ್ತುಲ ರಸ್ತೆಯನ್ನು ಜಾಗತಿಕ ರೂಪದಲ್ಲಿ ವಿನ್ಯಾಸಗೊಳಿಸಿ ಅಭಿವೃದ್ಧಿಪಡಿಸುವ ರೂ.307 ಕೋಟಿ ಯೋಜನೆಗೆ ರಾಜ್ಯ ಸಚಿವ ಸಂಪುಟ ಒಪ್ಪಿಗೆ ನೀಡಿದೆ.

ಗುಣಮಟ್ಟದ ಪ್ರಯಾಣಕ್ಕೆ ಹಾಗೂ ದಟ್ಟಣೆ ನಿಯಂತ್ರಣಕ್ಕೆ 17.01 ಕಿ.ಮೀ ಉದ್ದದ ಈ ರಸ್ತೆಯನ್ನು ಅಭಿವೃದ್ಧಿಪಡಿಸಲಾಗುತ್ತದೆ. 10 ಪಥದ ರಸ್ತೆ ಇದಾಗಿರಲಿದ್ದು, ಮೂರು ಪಥದ ಪ್ರಮುಖ ರಸ್ತೆ ಹಾಗೂ ಎರಡೂ ಬದಿಗಳಲ್ಲಿ ತಲಾ ಎರಡು ಪಥದ ಸರ್ವಿಸ್ ರಸ್ತೆಗಳು ಇರಲಿವೆ. 'ಬಸ್ ಆದ್ಯತಾ ಪಥವನ್ನು ಪುನರ್‌ಸ್ಥಾಪಿಸುವ ಯೋಜನೆಯೂ ಇದ್ದು ಸಂಚಾರ ದಟ್ಟಣೆ ಕಡಿಮೆಯಾಗಲಿದೆ' ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಉಭಯ ಕಡೆಗಳಲ್ಲೂ ಪಾದಾಚಾರಿ ಸೈಕಲ್ ಪಥ


ಉದಯವಾಹಿನಿ ಚಿತ್ರ

ಇರಲಿದೆ. ರಸ್ತೆಯ ಕೆಲವೊಂದು ಭಾಗಗಳನ್ನು ಮರುನಿರ್ಮಾಣ ಮಾಡಲಾಗುತ್ತದೆ. ಆಧುನಿಕ ಬಸ್ ತಂಗುದಾಣ ಅದರಲ್ಲಿ ಮಾಹಿತಿ ಬೋರ್ಡ್‌ಗಳು ಇರಲಿವೆ.

ಇಬ್ಬಲೂರಿನಿಂದ ಕೆ.ಆರ್ ಪುರದವರೆಗೆ ಮೆಟ್ರೊ ಎತ್ತರಿಸಿದ ಮಾರ್ಗದ ಅಡಿಯಲ್ಲಿ ಸ್ಕೈವಾಕ್ ನಿರ್ಮಾಣ ಮಾಡಲಾಗುವುದು, ಇದು ಸರ್ಕಾರ ಖಾಸಗಿ ಪಾಲುದಾರಿಕೆಯಲ್ಲಿ ನಿರ್ಮಾಣ ಮಾಡಲಾಗುವುದು' ಎಂದು ಅವರು ತಿಳಿಸಿದ್ದಾರೆ.

# ರೈಲ್ವೆ ಕಂಟೋನ್ಮೆಂಟ್: ಪಾರಂಪರಿಕ ತಾಣ ರದ್ದು

• ಉದಯವಾಹಿನಿ, ಬೆಂಗಳೂರು

ರೈಲ್ವೆ ಕಂಟೋನ್ಮೆಂಟ್ ಕಾಲೊನಿಯಲ್ಲಿ 371 ಮರಗಳಿರುವ 8.61 ಎಕರೆ ಪ್ರದೇಶವನ್ನು ಜೀವವೈವಿಧ್ಯ ಪಾರಂಪರಿಕ ತಾಣ ಎಂದು ಘೋಷಿಸಿ 3 ತಿಂಗಳ ಹಿಂದೆ ಹೊರಡಿಸಿದ್ದ ಆದೇಶವನ್ನು ಯಾವುದೇ ಕಾರಣ ನೀಡದೆ ಈ ತಿಂಗಳ 6ರಂದು ಅರಣ್ಯ ಇಲಾಖೆಯು ಹಿಂಪಡೆದಿದೆ.

ವಸಂತನಗರದ ದಂಡು ಪ್ರದೇಶದ ಬಳಿಯ ರೈಲ್ವೆ ಕಾಲೊನಿಯಲ್ಲಿ 371 ಮರಗಳಿರುವ ಈ ಪ್ರದೇಶವನ್ನು ಜೀವವೈವಿಧ್ಯ ಪಾರಂಪರಿಕ ತಾಣ ಎಂದು 2025ರ ಸೆಪ್ಟೆಂಬರ್ 10ರಂದು ಘೋಷಿಸಲಾಗಿತ್ತು. ಆದರೆ, ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಇಲಾಖೆ ಏಕಾಏಕಿ ಈ ಆದೇಶವನ್ನು ವಾಪಸ್ ಪಡೆದಿದ್ದು, ಇದಕ್ಕೆ ಆಕ್ಷೇಪ ವ್ಯಕ್ತವಾಗಿದೆ.

ಈ ಜಾಗದಲ್ಲಿನ ಮರಗಳನ್ನು ತೆರವುಗೊಳಿಸಿ ವಾಣಿಜ್ಯ ಕೇಂದ್ರ ಅಭಿವೃದ್ಧಿಪಡಿಸುವುದಕ್ಕೆ ಪರಿಸರ ಕಾರ್ಯಕರ್ತರು ವಿರೋಧ ವ್ಯಕ್ತಪಡಿಸಿ, ಹೋರಾಟ ನಡೆಸಿದ್ದರು. ಆಗ, ಇದಕ್ಕೆ ಸ್ಪಂದಿಸಿದ ರಾಜ್ಯ ಜೀವವೈವಿಧ್ಯ ಮಂಡಳಿಯ


ಉದಯವಾಹಿನಿ ಚಿತ್ರ

ಅಧ್ಯಕ್ಷರೂ ಆಗಿರುವ ಅರಣ್ಯ ಸಚಿವ ಈಶ್ವರ ಖಂಡ್ರೆ, ಮಂಡಳಿಯ ವಿಶೇಷ ಸಭೆ ನಡೆಸಿ, ಕಂಟೋನ್ಮೆಂಟ್ ರೈಲು ನಿಲ್ದಾಣಕ್ಕೆ ಹೊಂದಿಕೊಂಡಿರುವ ಈ ಪ್ರದೇಶವನ್ನು ಹಸಿರು ವಲಯವನ್ನಾಗಿ ಪರಿಗಣಿಸಲಾಗಿತ್ತು.

ಜೀವ ವೈವಿಧ್ಯ ಕಾಯ್ದೆ-2002 ನಿಬಂಧನೆಗಳ ಅಡಿಯಲ್ಲಿ ಈ ಸ್ಥಳವನ್ನು ಜೀವವೈವಿಧ್ಯ ಪಾರಂಪರಿಕ ತಾಣ (ಬಿಎಚ್‌ಎಸ್) ಎಂದು ಘೋಷಿಸಿ ಅಧಿಸೂಚನೆ ಹೊರಡಿಸಲಾಗಿತ್ತು. ಈ ಪ್ರದೇಶವು ಸಸ್ಯ ಸಂಕುಲ, ಪಕ್ಷಿ ಸಂಕುಲ ಮತ್ತು ಕೀಟ ಸಂಕುಲದ ತಾಣವಷ್ಟೇ ಅಲ್ಲದೆ ಬೆಂಗಳೂರು ನಗರಕ್ಕೆ ಅತ್ಯಗತ್ಯವಾದ ಶ್ವಾಸತಾಣವಾಗಿದೆ. 50-60 ವರ್ಷಗಳಿಂದ ಬೆಳೆದ ಬೃಹತ್ ಮರಗಳಿರುವ ಈ ಸುಂದರ ಪ್ರದೇಶವನ್ನು ಬೆಂಗಳೂರು ಉಪನಗರ ರೈಲ್ವೆ ಯೋಜನೆಗೆ ನಿಧಿ ಸಂಗ್ರಹಿಸುವ ಉದ್ದೇಶದಿಂದ ರೈಲ್ವೆ ಭೂ ಅಭಿವೃದ್ಧಿ ಪ್ರಾಧಿಕಾರ ಖಾಸಗಿ ಸಂಸ್ಥೆಯೊಂದಕ್ಕೆ 60 ವರ್ಷಗಳ ದೀರ್ಘಾವಧಿಗೆ ಗುತ್ತಿಗೆ ನೀಡಿತ್ತು.

> **ಮರಗಳನ್ನು ಉಳಿಸಿಕೊಳ್ಳಲು ಆ ಪ್ರದೇಶವನ್ನು ಪಾರಂಪರಿಕ ತಾಣವನ್ನಾಗಿಸಲಾಗಿತ್ತು. ಇದಕ್ಕಾಗಿ ಸಾಕಷ್ಟು ಮಂದಿ ಹೋರಾಟ ನಡೆಸಿದ್ದರು. ಮರಗಳ ರಕ್ಷಣೆಯಾಯಿತು ಎಂಬ ಸಂತಸ ಇನ್ನೂ ಮಾಸದ ಸಮಯದಲ್ಲೇ ಯಾವುದೇ ವಿವರಣೆ ಇಲ್ಲದೆ ಅಧಿಸೂಚನೆ ವಾಪಸ್ ಪಡೆದಿರುವುದು ಸರಿಯಲ್ಲ. ಹೋರಾಟ ಮುಂದುವರಿಸುತ್ತೇವೆ**
>
> **-ಪರಿಸರ ಕಾರ್ಯಕರ್ತ ವಿಜಯ್ ನಿಶಾಂತ್**

# ನಮ್ಮ ಮೆಟ್ರೋ ಬಳಕ್ಕೆ ಮೇಡ್ ಇನ್ ಇಂಡಿಯಾ ಮೊದಲ ರೈಲು ಸೇರ್ಪಡೆ

## ನಮ್ಮ ಮೆಟ್ರೋಗೆ ಬಂತು ಚಾಲಕ ರಹಿತ ರೈಲು; ಚೀನಾದಲ್ಲ, ಮೊದಲ ಮೇಡ್ ಇನ್ ಇಂಡಿಯಾ ಟ್ರೈನ್! ಏನಿದು ಟೆಕ್ನಾಲಜಿ

• ಉದಯವಾಹಿನಿ, ಬೆಂಗಳೂರು

ಬೆಂಗಳೂರು ನಮ್ಮ ಮೆಟ್ರೋ ಬಳಕ್ಕೆ ಮೇಡ್ ಇನ್ ಇಂಡಿಯಾ ಮೊದಲ ರೈಲು ಸೇರ್ಪಡೆಯಾಗಿದೆ. ಭಾರತ್ ಅರ್ಥ್‌ಮೂವರ್ಸ್ ಲಿಮಿಟೆಡ್ ಬಿಇಎಂಎಲ್ ಅತ್ಯಾಧುನಿಕ ಚಾಲಕ ರಹಿತ ಮೆಟ್ರೋ ರೈಲನ್ನು ಅನಾವರಣ ಮಾಡಿದೆ. ಈ ರೈಲನ್ನು ಗುಲಾಬಿ ಮಾರ್ಗಕ್ಕಾಗಿ ತಯಾರಿಸಲಾಗಿದ್ದು ಮತ್ತು 2027 ಮೇನಿಂದ ವಾಣಿಜ್ಯ ಸಂಚಾರ ಆರಂಭಿಸಲಿದೆ.

ಇದು ಮೊದಲ ಮೇಡ್ ಇನ್ ಇಂಡಿಯಾ ಚಾಲಕರಹಿತ ಮೆಟ್ರೋ ರೈಲಾಗಿದೆ. ಈ ಮೆಟ್ರೋ ರೈಲನ್ನು ಓಡಿಸಲು ಡ್ರೈವರ್ ಬೇಕಿಲ್ಲ. ಸಂಪೂರ್ಣ ಆಟೋಮೆಟಿಕ್ ಆಗಿ ಆಪರೇಟ್ ಆಗಬಲ್ಲ ಈ 6 ಬೋಗಿಗಳ ರೈಲು, ಅಂತಾರಾಷ್ಟ್ರೀಯ ಗುಣಮಟ್ಟದ ಸುರಕ್ಷತಾ ಮಾನದಂಡಗಳನ್ನು ಹೊಂದಿದೆ. ಕಮ್ಯುನಿಕೇಷನ್ ಬೇಸ್ಡ್ ಟ್ರೈನ್ ಕಂಟ್ರೋಲ್ ತಂತ್ರಜ್ಞಾನದ ಮೂಲಕ ಈ ರೈಲುಗಳು ಹಳಿಗಳ ಮೇಲೆ ಸಂಚರಿಸಲಿವೆ. ಮೊದಲ ಹಂತದಲ್ಲಿ ಕಾಳೇನ ಅಗ್ರಹಾರದಿಂದ ತಾವರೆಕೆರೆವರೆಗಿನ 7.5 ಕಿಲೋಮೀಟರ್ ಎತ್ತರಿಸಿದ ಮಾರ್ಗದಲ್ಲಿ ಈ ಪರೀಕ್ಷೆ ನಡೆಯಲಿದೆ. ಜೂನ್ 2026ರ ವೇಳೆಗೆ ಈ ನಿರ್ದಿಷ್ಟ ಮಾರ್ಗದಲ್ಲಿ ಐದು ಚಾಲಕ ರಹಿತ ರೈಲುಗಳ ಮೂಲಕ ವಾಣಿಜ್ಯ ಸಂಚಾರ ಆರಂಭಿಸುವ ಗುರಿಯನ್ನು ಬಿಎಂಆರ್‌ಸಿಎಲ್ ಹೊಂದಿದೆ. ಇನ್ನು ಸಂಪೂರ್ಣ ಪಿಂಕ್ ಲೈನ್, ಅಂದರೆ ಕಾಳೇನ ಅಗ್ರಹಾರದಿಂದ ನಾಗವಾರದವರೆಗಿನ ಮಾರ್ಗವು ಡಿಸೆಂಬರ್ 2026ರ ವೇಳೆಗೆ ಕಾರ್ಯಾಚರಣೆಗೆ ಮುಕ್ತವಾಗುವ ನಿರೀಕ್ಷೆಯಿದೆ.


ಉದಯವಾಹಿನಿ ಚಿತ್ರ

**ಪ್ರಯಾಣಿಕರ ಸುರಕ್ಷತೆಗಿದೆ ಫುಲ್ ಗ್ಯಾರಂಟಿ!**

ಈ ರೈಲುಗಳು ಸ್ಟೇನ್‌ಲೆಸ್ ಸ್ಟೀಲ್ ಬಾಡಿಯನ್ನು ಹೊಂದಿದ್ದು, ಅತ್ಯಂತ ಗಟ್ಟಿಮುಟ್ಟಾಗಿವೆ. ಇಂಧನ ಉಳಿತಾಯ ವ್ಯವಸ್ಥೆ, ಅಗಲವಾದ ಗ್ಯಾಂಗ್‌ವೇಗಳು, ಯುಎಸ್‌ಬಿ ಚಾರ್ಜಿಂಗ್ ಪೋರ್ಟ್‌ಗಳು, ಮತ್ತು ಪ್ರಯಾಣಿಕರಿಗೆ ಆರಾಮದಾಯಕವಾದ ಆಸನ ವ್ಯವಸ್ಥೆಯನ್ನು ಇದು ಒಳಗೊಂಡಿದೆ.

ಇದಕ್ಕಾಗಿ ಅತ್ಯಾಧುನಿಕ ಸಿಬಿಟಿಸಿ ಸಿಸ್ಟಮ್ ಅನ್ನು ಬಳಸಲಾಗುತ್ತದೆ. ಇದು ರೈಲಿನ ನಿಖರವಾದ ಸ್ಥಾನ, ಅಡೆತಡೆಗಳ ಪತ್ತೆ ಮತ್ತು ತುರ್ತು ಸಂದರ್ಭಗಳಲ್ಲಿ ಸ್ಪಂದಿಸುವ ಕೆಲಸವನ್ನು ಕೂಡ ಆಟೋಮೆಟಿಕ್ ಆಗಿ ಮಾಡುತ್ತದೆ.

**ಸದ್ಯಕ್ಕೆ ಹಳದಿ ಮಾರ್ಗ ರೀತಿಯೇ ಮೆಟ್ರೋ ಸಂಚಾರ!:** ಈಗಾಗಲೇ ಆರ್‌ವಿ ಕಾಲೇಜು ಹಾಗೂ ಬೊಮ್ಮಸಂದ್ರ ನಡುವಿನ ಹಳದಿ ಮಾರ್ಗದಲ್ಲಿ ಚಾಲಕ ರಹಿತ ಮೆಟ್ರೋಗಳು ಆಪರೇಟ್ ಆಗುತ್ತಿವೆ. ಹಳದಿ ಮಾರ್ಗನಲ್ಲಿ ಬಳಕೆಯಾಗುತ್ತಿರುವ ಮೆಟ್ರೋ ರೈಲುಗಳು ಟಿಟಾಗರ್‌ನಲ್ಲಿ ಚೀನಾ ಕಂಪನಿಯ ಸಹಾಯದಿಂದ ಉತ್ಪಾದನೆ ಮಾಡಲಾಗುತ್ತಿದೆ. ಈಗ ಬೆಮೆಲ್ ಡೆವಲಪ್ ಮಾಡಿರುವುದು ಮೊದಲ ಮೇಡ್ ಇನ್ ಇಂಡಿಯಾ ಚಾಲಕ ರಹಿತ ರೈಲಾಗಿದೆ. ಹಳದಿ ಮಾರ್ಗನಲ್ಲಿ ಸಂಚರಿಸುವ ಮೆಟ್ರೋ ರೈಲುಗಳು GoA2 ಟೆಕ್ನಾಲಜಿಯನ್ನು ಹೊಂದಿವೆ, ಅಂದರೆ, ಡೋರ್ ಹಾಕೋಕೆ ತೆಗೆಯೋಕೆ ಇಲ್ಲಿ ಡ್ರೈವರ್ ಬೇಕಾಗ್ತಾರೆ. ಸದ್ಯಕ್ಕೆ ಇದೇ ಮಾದರಿಯನ್ನು ಕೂಡ ಗುಲಾಬಿ ಮಾರ್ಗದಲ್ಲಿ ಅನುಸರಿಸಲು ಬಿಎಂಆರ್‌ಸಿಎಲ್ ಮುಂದಾಗಿದೆ. ರೈಲು ಸಂಪೂರ್ಣ ಆಟೋಮ್ಯಾಟಿಕ್ ಡ್ರೈವರ್‌ಲೆಸ್ ಟೆಕ್ನಾಲಜಿಗೆ ಸಪೋರ್ಟ್ ಮಾಡುತ್ತಿದ್ದರು ಕೂಡ ಪಿಂಕ್ ಲೈನ್‌ನಲ್ಲಿ ಸದ್ಯಕ್ಕೆ GoA2 ಟೆಕ್ನಾಲಜಿಯನ್ನೇ ಅನುಸರಿಸಲು ಬಿಎಂಆರ್‌ಸಿಎಲ್ ಮುಂದಾಗಿದೆ. ಮುಂದಿನ ದಿನಗಳಲ್ಲಿ ಪಿಂಕ್ ಲೈನ್‌ನಲ್ಲಿ ಪೂರ್ತಿ ಡ್ರೈವರ್‌ಲೆಸ್ ಮೆಟ್ರೋ ಬರಲಿದೆ. ಈ ತಂತ್ರಜ್ಞಾನದ ಪ್ರಮುಖ ಲಾಭವೆಂದರೆ ಮೂವಿಂಗ್ ಬ್ಲಾಕ್ ಸಿಗ್ನಲಿಂಗ್.

ಹಳೇ ಫಿಕ್ಸೆಡ್ ಬ್ಲಾಕ್ ಸಿಸ್ಟಮ್‌ಗಿಂತ ಇದು ಭಿನ್ನ. ಇದರಲ್ಲಿ ರೈಲುಗಳು ಸುರಕ್ಷಿತ ಅಂತರವನ್ನು ಕಾಯ್ದುಕೊಂಡು ಒಂದರ ಹಿಂದೊಂದು ಚಲಿಸಬಹುದು. ಇದರಿಂದ ಪ್ರತಿ ಗಂಟೆಗೆ, ಪ್ರತಿ ದಿಕ್ಕಿನಲ್ಲಿ ಬರೋಬ್ಬರಿ 40 ರೈಲುಗಳನ್ನು ಓಡಿಸುವ ಸಾಮರ್ಥ್ಯ ಲಭ್ಯವಾಗುತ್ತದೆ. ಅಂದರೆ ಪೀಕ್ ಅವರ್‌ಗಳಲ್ಲಿ ಪ್ರಯಾಣಿಕರು ಗಂಟೆಗಟ್ಟಲೆ ಕಾಯುವ ಅಗತ್ಯವಿಲ್ಲ.

### ಏನಿದು ಮೆಟ್ರೋ ರೈಲಿನ GoA4 ತಂತ್ರಜ್ಞಾನ ?

**ಈ ಮೆಟ್ರೋ ರೈಲುಗಳಲ್ಲಿ ಗ್ರೇಡ್ ಆಫ್ ಆಟೊಮೇಷನ್ 4 ಅಥವಾ GoA4 ಟೆಕ್ನಾಲಜಿ ಬಳಸಲಾಗಿದೆ. ರೈಲಿನಲ್ಲಿ ಚಾಲಕರು ಅಥವಾ ಯಾವುದೇ ಸಿಬ್ಬಂದಿಯ ಅಗತ್ಯವಿರುವುದಿಲ್ಲ. ಎಲ್ಲಾ ಕಾರ್ಯಗಳನ್ನೂ ದೂರದಲ್ಲಿರುವ ಸೆಂಟ್ರಲ್ ಕಂಟ್ರೋಲ್ ರೂಂ ಅಥವಾ ನಿಯಂತ್ರಣ ಕೊಠಡಿಯಿಂದಲೇ ನಿರ್ವಹಿಸಲಾಗುತ್ತದೆ. ಇದನ್ನು ಸಿಂಪಲ್ ಆಗಿ ಅರ್ಥ ಮಾಡಿಕೊಳ್ಳಬೇಕೆಂದರೆ, ಒಟ್ಟು ನಾಲ್ಕು ರೀತಿಯ ಡ್ರೈವರ್‌ಲೆಸ್ ಮೆಟ್ರೋ ಟೆಕ್ನಾಲಜಿ ಇವೆ.**

- **GoA1 ನಲ್ಲಿ ಚಾಲಕನಿದ್ದು ಆಟೋಮ್ಯಾಟಿಕ್ ಟ್ರೈನ್ ಆಪರೇಷನ್ ಅನ್ನು ಮೇಲ್ವಿಚಾರಣೆ ಮಾಡುತ್ತಾನೆ.**
- **GoA2 ನಲ್ಲಿ ಚಾಲಕ ಬಾಗಿಲುಗಳನ್ನು ಮಾತ್ರ ಆಪರೇಟ್ ಮಾಡುತ್ತಾನೆ.**
- **GoA3 ನಲ್ಲಿ ಡ್ರೈವರ್ ಇರುವುದಿಲ್ಲ ಆದರೆ ಅಟೆಂಡೆಂಟ್ ಇರುತ್ತಾರೆ.**
- **GoA4 ನಲ್ಲಿ ಯಾರೂ ಇರುವುದಿಲ್ಲ. ರೈಲು ಸ್ಟಾರ್ಟ್ ಆಗುವುದು, ವೇಗ ಹೆಚ್ಚಿಸುವುದು, ಬ್ರೇಕ್ ಹಾಕುವುದು, ಮತ್ತು ಬಾಗಿಲುಗಳ ನಿರ್ವಹಣೆ ಎಲ್ಲವೂ ಆಟೋಮ್ಯಾಟಿಕ್.**

# 17 ಗೃಹಲಕ್ಷ್ಮಿ ಸಹಕಾರ ಸಂಘ ಸ್ಥಾಪನೆ: ತಾಲ್ಲೂಕು ಅಧ್ಯಕ್ಷ ಬೋರ್‌ವೆಲ್ ರಂಗನಾಥ್

• ಉದಯವಾಹಿನಿ, ಚನ್ನಪಟ್ಟಣ

ಗೃಹಲಕ್ಷ್ಮಿ ಫಲಾನುಭವಿಗಳಿಗೆ ಮತ್ತಷ್ಟು ಆರ್ಥಿಕ ಶಕ್ತಿ ತುಂಬಲು ಸರ್ಕಾರ ಗೃಹಲಕ್ಷ್ಮಿ ಸಹಕಾರ ಸಂಘಗಳನ್ನು ಸ್ಥಾಪಿಸಲಿದೆ. ಈ ಯೋಜನೆ ಅಡಿ ತಾಲ್ಲೂಕಿನಲ್ಲಿ 17 ಗೃಹಲಕ್ಷ್ಮಿ ಸಹಕಾರ ಸಂಘ ಸ್ಥಾಪಿಸಲಾಗುವುದು ಎಂದು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ತಾಲ್ಲೂಕು ಅಧ್ಯಕ್ಷ ಬೋರ್‌ವೆಲ್ ರಂಗನಾಥ್ ತಿಳಿಸಿದರು. ನಗರದ ತಾ.ಪಂ. ಸಭಾಂಗಣದಲ್ಲಿ ನಡೆದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಮತ್ತು ಗ್ಯಾರಂಟಿ ಯೋಜನೆಗಳಿಗೆ ಸಂಬಂಧಿಸಿದ ಸರ್ಕಾರಿ ಇಲಾಖೆ ಅಧಿಕಾರಿಗಳು ಹಾಗೂ ಸಮಿತಿಯ ಸದಸ್ಯರ ಸಭೆಯಲ್ಲಿ ಅವರು




ಮಾತನಾಡಿದರು.

ತಾಲ್ಲೂಕಿನಲ್ಲಿ ಗೃಹಲಕ್ಷ್ಮಿ ಸಹಕಾರ ಸಂಘಗಳನ್ನು ಸ್ಥಾಪಿಸಿ ಈ ಭಾಗದ ಗೃಹಲಕ್ಷ್ಮಿ ಯೋಜನೆಯ ಫಲಾನುಭವಿಗಳನ್ನು ಸದಸ್ಯರನ್ನಾಗಿಸಿ ಸರ್ಕಾರದಿಂದ ಹೆಚ್ಚಿನ ಆರ್ಥಿಕ ನೆರವು, ಸಾಲ ಸೌಲಭ್ಯಗಳನ್ನು ನೀಡಿ ಮಹಿಳೆಯರು ಸ್ವಉದ್ಯೋಗ ಪ್ರಾರಂಭಿಸಲು ಅನುಕೂಲ ಮಾಡಿಕೊಡಲು ಸರ್ಕಾರ ಕ್ರಮ ಕೈಗೊಂಡಿದೆ ಎಂದು ತಿಳಿಸಿದರು. ತಾಲ್ಲೂಕಿನಲ್ಲಿ ಗ್ಯಾರಂಟಿ ಯೋಜನೆಗಳನ್ನು ಸಮರ್ಪಕವಾಗಿ ಅನುಷ್ಠಾನಕ್ಕೆ ತರಲಾಗಿದೆ. ತಾಲ್ಲೂಕಿನಲ್ಲಿ ಶೇ 96 ರಷ್ಟು ಫಲಾನುಭವಿಗಳು ಗೃಹಲಕ್ಷ್ಮಿ ಯೋಜನೆಯ ಫಲಾನುಭವಿಗಳಾಗಿದ್ದಾರೆ. 74 ಸಾವಿರಕ್ಕೂ ಹೆಚ್ಚು ಕುಟುಂಬಗಳು ಅನ್ನಭಾಗ್ಯ ಯೋಜನೆ ಪಡೆಯುತ್ತಿವೆ. 75 ಸಾವಿರಕ್ಕೂ ಹೆಚ್ಚು ಕುಟುಂಬಗಳು ಗೃಹಜ್ಯೋತಿ ಯೋಜನೆಯ ಲಾಭ ಪಡೆಯುತ್ತಿವೆ. ಜೊತೆಗೆ ಶಕ್ತಿ ಯೋಜನೆ, ಯುವಶಕ್ತಿ ಯೋಜನೆಯು ಸಮರ್ಪಕವಾಗಿ ಜಾರಿಯಾಗಿದೆ ಎಂದು ತಿಳಿಸಿದರು.

ತಾಲ್ಲೂಕಿನ ಅನ್ನಭಾಗ್ಯ ಯೋಜನೆಯಲ್ಲಿ ಕೆಲ ಫಲಾನುಭವಿಗಳಿಗೆ ಯೋಜನೆಯ ಪಡಿತರ ಸಿಗುತ್ತಿಲ್ಲ.

ಕೆಲವು ಕುಟುಂಬಗಳಿಗೆ ಬಿಪಿಎಲ್ ಕಾರ್ಡ್ ಅನ್ನು ಎಪಿಎಲ್ ಮಾಡಿ ಅನ್ನಭಾಗ್ಯ ಯೋಜನೆ ಕಡಿತ ಮಾಡಿರುವ ಆರೋಪ ಇದೆ. ಈ ನಿಟ್ಟಿನಲ್ಲಿ ಆಗಿರುವ ಲೋಪದೋಷಗಳನ್ನು ಸರಿಪಡಿಸಲಾಗುವುದು. ಶಕ್ತಿ ಯೋಜನೆಯಡಿ ವಿದ್ಯಾರ್ಥಿನಿಯರಿಗೆ ಅಗತ್ಯ ಸಮಯದಲ್ಲಿ ಬಸ್ ಸೌಲಭ್ಯ ಹಾಗೂ ಹೆಚ್ಚುವರಿ ಬಸ್ ಸೌಲಭ್ಯ ಕಲ್ಪಿಸಲು ಕ್ರಮ ಕೈಗೊಳ್ಳುವ ಬಗ್ಗೆ ಅಧಿಕಾರಿಗಳ ಜೊತೆ ಸಭೆ ಮಾಡಲಾಗಿದೆ ಎಂದು ತಿಳಿಸಿದರು.

## ಪೌರ ಕಾರ್ಮಿಕರು ಸುರಕ್ಷತಾ ಕವಚವಿಲ್ಲದೆ ಚರಂಡಿಗಳ ಸ್ವಚ್ಛ




• ಉದಯವಾಹಿನಿ, ಗುಡಿಬಂಡೆ

ಪಟ್ಟಣದ ವಿವಿಧ ವಾರ್ಡ್‌ಗಳಲ್ಲಿ ಪೌರ ಕಾರ್ಮಿಕರು ಸುರಕ್ಷತಾ ಕವಚಗಳನ್ನು ಧರಿಸದೆ ಚರಂಡಿಗಳನ್ನು ಸ್ವಚ್ಛ ಮಾಡುತ್ತಿದ್ದಾರೆ. ಪೌರ ಕಾರ್ಮಿಕರಿಗೆ ಪಟ್ಟಣ ಪಂ. ಸುರಕ್ಷತಾ ಕವಚಗಳನ್ನು ಒದಗಿಸಿಲ್ಲ ಎಂದು ಸ್ಥಳೀಯರು ದೂರಿದ್ದಾರೆ. ಪಟ್ಟಣ ಪಂ.ವ್ಯಾಪ್ತಿಯಲ್ಲಿನ ಅನೇಕ ವಿವಿಧ ವಾರ್ಡ್‌ಗಳಲ್ಲಿ ಚರಂಡಿ ಸೇರಿ ಇನ್ನಿತರ ಸ್ಥಳಗಳನ್ನು ಶುಚಿಯಾಗಿಡುವ ಪೌರಕಾರ್ಮಿಕರ ಕೈ ಮತ್ತು ಕಾಲುಗಳಿಗೆ ಧರಿಸಲು ಸುರಕ್ಷತಾ ಕವಚಗಳನ್ನು ವಿತರಿಸಿಲ್ಲ. ಹೀಗಾಗಿ, ಪೌರಕಾರ್ಮಿಕರು ಬರಿಗೈಯಲ್ಲೇ ಚರಂಡಿಗಳನ್ನು ಶುಚಿ ಮಾಡುತ್ತಿದ್ದಾರೆ. ಚರಂಡಿ ಮತ್ತು ಬೀದಿಗಳನ್ನು ಸ್ವಚ್ಛ ಮಾಡಲು ಸುರಕ್ಷತಾ ಸಲಕರಣೆಗಳನ್ನು ನೀಡಿ ಎಂದು ಅಧಿಕಾರಿಗಳ ಬಳಿ ಕೇಳಿದ್ದೇವೆ. ಆದರೆ, ಅಧಿಕಾರಿಗಳು ಸರಿಯಾದ ಸಮಯಕ್ಕೆ ಸುರಕ್ಷತಾ ಕವಚಗಳನ್ನು ನೀಡದೆ ಸತಾಯಿಸುತ್ತಿದ್ದಾರೆ. ಈ ಬಗ್ಗೆ ನಾವು ಧ್ವನಿಯೆತ್ತಿದ್ದರು ತೊಂದರೆ ಕೊಡುತ್ತಾರೆ ಎಂದು ಕೆಲವು ಪೌರಕಾರ್ಮಿಕರು ದೂರಿದ್ದಾರೆ.

ಈ ಕುರಿತು ಪ್ರತಿಕ್ರಿಯಿಸಿದ ಚಿಕ್ಕಬಳ್ಳಾಪುರ ಜಿಲ್ಲಾ ಯೋಜನಾ ನಿರ್ದೇಶಕ ಮಂಜುನಾಥ್, ಪೌರ ಕಾರ್ಮಿಕರು ಸ್ವಚ್ಛತೆ ಕಾಮಗಾರಿ ಕೈಗೊಳ್ಳುವ ಸಂದರ್ಭದಲ್ಲಿ ಸುರಕ್ಷತಾ ಸಲಕರಣೆಗಳನ್ನು ಬಳಸಬೇಕು. ಸುರಕ್ಷತಾ ಸಲಕರಣೆ ಇಲ್ಲದೆ ಕಾರ್ಮಿಕರನ್ನು ಸ್ವಚ್ಛತಾ ಕಾಮಗಾರಿಯಲ್ಲಿ ತೊಡಗಿಸುವುದು ಅಪರಾಧ. ಈ ಬಗ್ಗೆ ಮಾಹಿತಿ ಪಡೆದು ಕ್ರಮ ಕೈಗೊಳ್ಳಲಾಗುವುದು' ಎಂದರು.

# ಯೂನಿಟಿ ಮಾಲ್ ನಿರ್ಮಾಣಕ್ಕೆ ತಡೆಯಾಜ್ಞೆ

## ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಸ್ಪಷ್ಟನೆ

• ಉದಯವಾಹಿನಿ, ಮೈಸೂರು

ಮೈಸೂರಿನಲ್ಲಿ ಯೂನಿಟಿ ಮಾಲ್ ನಿರ್ಮಾಣಕ್ಕೆ ನ್ಯಾಯಾಲಯದ ಮೂಲಕ ತಡೆಯಾಜ್ಞೆ ವಿಚಾರವಾಗಿ, ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಪತ್ರಿಕಾ ಪ್ರಕಟಣೆ ಬಿಡುಗಡೆ ಮಾಡಿ, ಸ್ಪಷ್ಟನೆ ನೀಡಿದ್ದಾರೆ.

ಯೂನಿಟಿ ಮಾಲ್ ನಿರ್ಮಾಣಕ್ಕೆ ನನ್ನ ವಿರೋಧ ಇಲ್ಲ, ನಮ್ಮ ಜಾಗದಲ್ಲಿ ಕಟ್ಟಡ ನಿರ್ಮಾಣ ಮಾಡುವುದು ಸರಿಯಲ್ಲ. ನ್ಯಾಯಾಲಯದಲ್ಲಿ ಇದೇ ವಿಚಾರವಾಗಿ ಪ್ರಕರಣ ದಾಖಲಾಗಿದೆ. ಮೈಸೂರು ಕಸಬಾ ಹೋಬಳಿಯ ಸರ್ವೇ ನಂಬರ್ 1 ರಲ್ಲಿರುವ ದೊಡ್ಡಕೆರೆ ಟ್ಯಾಂಕ್ ಬೆಡ್ ಭೂಮಿಯಲ್ಲಿ ನಿರ್ಮಿಸಲು ಉದ್ದೇಶಿಸಲಾದ ಯೂನಿಟಿ ಮಾಲ್ ವಿಚಾರಕ್ಕೆ ಕರ್ನಾಟಕದ ಹೈಕೋರ್ಟ್ ಯಥಾಸ್ಥಿತಿ ಕಾಯ್ದುಕೊಳ್ಳಲು ಆದೇಶ ನೀಡಿದೆ. ಈ ವಿಚಾರವಾಗಿ ಕೆಲ ಪತ್ರಿಕೆ, ಕೆಲ ಟಿವಿಗಳಲ್ಲಿ ತಪ್ಪು ವರದಿ ಪ್ರಕಟವಾಗಿದೆ. ರಾಜ್ಯದ ಕರಕುಶಲ ವಸ್ತುಗಳು ಮತ್ತು ಜಿಐ ಟ್ಯಾಗ್ ಮಾಡಲಾದ ಉತ್ಪನ್ನಗಳನ್ನು ಪ್ರದರ್ಶಿಸುವುದನ್ನು ನಾನು ವಿರೋಧಿಸುವುದಿಲ್ಲ.

ಬಹಿರಂಗ ಮತ್ತು ಅಂತರಂಗ ಜಗಳ ವಿಚಾರ ಸಹ ಇಲ್ಲಿ ಇಲ್ಲ. ಕರ್ನಾಟಕ ಸರ್ಕಾರವು ಮಾಲ್ ಸ್ಥಾಪಿಸಲಿ, ಅದಕ್ಕೆ ನನ್ನ ವಿರೋಧ ಇಲ್ಲ. ಆದರೆ ಸರ್ಕಾರಕ್ಕೆ ಸೇರಿದ ಯಾವುದೇ ಭೂಮಿಯನ್ನು ಹಂಚಿಕೆ ಮಾಡಲಿ. ಅದರ ಬದಲು ಈ ನಿರ್ದಿಷ್ಟ ಖಾಸಗಿ ಆಸ್ತಿಯನ್ನು ಹಂಚಿಕೆ ಮಾಡುವುದು ಸರಿಯಲ್ಲ ಎಂದಿದ್ದಾರೆ.

ಇದು ಭಾರತ ಸರ್ಕಾರ ಮತ್ತು ಅಂದಿನ ರಾಜ್ಯ ಸರ್ಕಾರದ ನಡುವೆ ರಾಜ್ಯಗಳ ವಿಲೀನದ ಸಮಯದಲ್ಲಿ, ನಂತರದ ಒಪ್ಪಂದದ ದಿನಾಂಕ 23-01-1950 ರಂದು ಇತ್ಯರ್ಥವಾಗಿದೆ. ನನ್ನ ಪೂರ್ವಜರ ಭೂಮಿಯನ್ನು ಉಳಿಸಿಕೊಳ್ಳುವುದು ಮತ್ತು ರಕ್ಷಿಸುವುದು ನನ್ನ ಜವಾಬ್ದಾರಿ. ಅದೇ ಕೆಲಸವನ್ನು ನಾನು ಮಾಡಿದ್ದೇನೆ. ನಾನು ಸಲ್ಲಿಸಿದ ಅರ್ಜಿಯಲ್ಲಿ ನನ್ನ ನಿಲುವನ್ನು ದೃಢೀಕರಿಸಲು ಸಂಬಂಧಪಟ್ಟ ದಾಖಲೆಗಳನ್ನು ಸಲ್ಲಿಸಲಾಗಿದೆ. ಸರ್ಕಾರದ ಪ್ರತಿಕ್ರಿಯೆ ಮುಂದಿನ ವಿಚಾರಣೆಗಾಗಿ ಕರ್ನಾಟಕದ ಹೈಕೋರ್ಟ್ ಮುಂದೆ ಬರಲಿದೆ ಎಂದು ಪತ್ರಿಕಾ ಪ್ರಕಟಣೆಯ ಮೂಲಕ ರಾಜವಂಶಸ್ಥೆ ಪ್ರಮೋದಾ ದೇವಿ ಒಡೆಯರ್ ಸ್ಪಷ್ಟನೆ ನೀಡಿದ್ದಾರೆ.



ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಅವರು ಸರ್ವೆ ನಂ.1ರಲ್ಲಿಬರುವ ಭೂಮಿಯು ತಮ್ಮದೆಂದು ವಾದ ಮಾಡುತ್ತಿರುವ ಪರಿಣಾಮವಾಗಿ, ಏಕತಾ ಮಾಲ್ ನಿರ್ಮಾಣ ಮಾಡದಂತೆ ನ್ಯಾಯಾಲಯದ ಮೊರೆ ಹೋಗಿದ್ದರು. ಕುರುಬಾರಹಳ್ಳಿ ಸರ್ವೆ ನಂ. ಭೂಮಿ, ಗರಿಕೆಮಾಳ ಸರ್ವೆ ನಂ.1ರ ಭೂಮಿಯು ರಾಜಮನೆತನಕ್ಕೆ ಸೇರಿದೆ ಎಂದು ಹೇಳಿರುವ ಜತೆಗೆ, ಕೆಲವು ಸರ್ವೆ ನಂ. ಭೂಮಿಯು ರಾಜಮನೆತನಕ್ಕೆ ಸೇರಿದ್ದೆಂದು ತೀರ್ಪು ಬಂದಿತ್ತು. ಇದರ ಆಧಾರದ ಮೇಲೆ ಪ್ರಮೋದಾದೇವಿ ಒಡೆಯರ್ ಅವರು ಹೈಕೋರ್ಟ್ ಮೊರೆ ಹೋಗಿ ತಡೆಯಾಜ್ಞೆ ಕೋರಿದ್ದರು.

**ಸರಕಾರದ ಮುಖ್ಯ ಕಾರ್ಯದರ್ಶಿ, ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿ, ಜಿಲ್ಲಾಧಿಕಾರಿ, ಉಪ ವಿಭಾಗಾಧಿಕಾರಿ, ತಹಶೀಲ್ದಾರ್, ಮೈಸೂರು ಅಭಿವೃದ್ಧಿ ಪ್ರಾಧಿಕಾರದ ಆಯುಕ್ತರು, ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಪ್ರಧಾನ ಕಾರ್ಯ ದರ್ಶಿಗೆ ನೋಟಿಸ್ ಜಾರಿಗೊಳಿಸಿ ಎರಡು ವಾರದೊಳಗೆ ಲಿಖಿತ ಉತ್ತರ ನೀಡುವಂತೆ ಸೂಚನೆ ನೀಡಿದೆ.**

**ಮೇಕ್ ಇನ್ ಇಂಡಿಯಾ ಪರಿಕಲ್ಪನೆಗೆ ಉತ್ತೇಜನ:** ಅರ್ಜಿದಾರರ ಮನವಿ ಪುರಸ್ಕರಿಸಿದ ನ್ಯಾಯಾಧೀಶರು ಕಾಮಗಾರಿ ಯಥಾಸ್ಥಿತಿ ಕಾಯ್ದುಕೊಳ್ಳುವಂತೆ ಆದೇಶ ನೀಡಿದ್ದಾರೆ. ಒಂದು ರಾಜ್ಯ ಒಂದು ಉತ್ಪನ್ನ, ಒಂದು ಜಿಲ್ಲೆ ಒಂದು ಉತ್ಪನ್ನ ಪರಿಕಲ್ಪನೆಯಡಿ 193 ಕೋಟಿ ರೂ.ವೆಚ್ಚದಲ್ಲಿ ರಾಜ್ಯದ ನಾನಾ ಭಾಗಗಳಲ್ಲಿ ತಯಾರಾಗುವ ದೇಸಿ ಉತ್ಪನ್ನಗಳನ್ನು ಒಂದೇ ಸೂರಿನಡಿ ಮಾರಾಟ ಮಾಡುವ ಅವಕಾಶ

**ಲಿಖಿತ ಉತ್ತರ ನೀಡುವಂತೆ ಸೂಚನೆ**

ಕಲ್ಪಿಸಲು ಈ ಮಾಲ್ ನಿರ್ಮಿಸಲು ನಿರ್ಧರಿಸಲಾಗಿತ್ತು.

ಕೇಂದ್ರ ಸರಕಾರವು ದೇಶಿಯ ಉತ್ಪನ್ನಗಳಿಗೆ ಮಾರುಕಟ್ಟೆ ಕಲ್ಪಿಸಲು, ರಾಷ್ಟ್ರೀಯ ಏಕೀಕರಣದೊಂದಿಗೆ ಮೇಕ್ ಇನ್ ಇಂಡಿಯಾ ಪರಿಕಲ್ಪನೆಗೆ ಉತ್ತೇಜನ ನೀಡಲು ಅರಮನೆ ನಗರಿಯಲ್ಲಿ 'ಯೂನಿಟಿ ಮಾಲ್' ನಿರ್ಮಾಣ ಕಾರ್ಯ ಆರಂಭಿಸಿತ್ತು. ಇದರೊಂದಿಗೆ ಗುಣಮಟ್ಟದ ಸ್ವದೇಶಿ ಉತ್ಪನ್ನಗಳಿಗೆ ಮಾರುಕಟ್ಟೆ ವೃದ್ಧಿಸುವುದರೊಂದಿಗೆ ಗ್ರಾಮೀಣ ಕುಶಲ ಕರ್ಮಿಗಳಿಗೆ ನೆರವು ಮತ್ತು ಉದ್ಯೋಗ ಸೃಷ್ಟಿಯೇ ಮೂಲ ಉದ್ದೇಶವಾಗಿದೆ. ಕೇಂದ್ರ ಸರಕಾರದ ಆದೇಶದ ಮೇರೆಗೆ ಈ ಕಾಮಗಾರಿಯ ನಿರ್ಮಾಣದ ಹೊಣೆಯನ್ನು ಕರ್ನಾಟಕ ರಾಜ್ಯ ಕೈಗಾರಿಕಾ ಅಭಿವೃದ್ಧಿ ಮಂಡಳಿಗೆ ವಹಿಸಲಾಗಿತ್ತು.

ವಸ್ತು ಪ್ರದರ್ಶನ ಪ್ರಾಧಿಕಾರವು ಯೂನಿಟಿ ಮಾಲ್ ನಿರ್ಮಾಣಕ್ಕೆ ಬೇಕಾದ ಆರು ಎಕರೆ ಭೂಮಿಯನ್ನು ಹಸ್ತಾಂತರ ಮಾಡಿತ್ತು. ಇದರಿಂದಾಗಿ ಈ ಜಾಗದಲ್ಲಿ ಶಂಕುಸ್ಥಾಪನೆ ನೆರವೇರಿಸಿ ಕಾಮಗಾರಿಯನ್ನು ಶುರು ಮಾಡಲಾಗಿತ್ತು.

# ಎಸ್ಸಿ ಎಸ್ಟಿ ಸಭೆಗೆ ಪ್ರಮುಖಾಧಿಕಾರಿಗಳ ಗೈರು: ಮುಖಂಡರ ಕಿಡಿ




• ಉದಯವಾಹಿನಿ, ಗುಂಡ್ಲುಪೇಟೆ

ಸಮುದಾಯದ ಕುಂದು ಕೊರತೆಗಳನ್ನ ಆಲಿಸಲು ಸರ್ಕಾರದ ನಿಯಮಾವಳಿಯಂತೆ ಮೂರು ತಿಂಗಳಿಗೊಮ್ಮೆ ಎಸ್ಸಿ ಎಸ್ಟಿ ಹಿತರಕ್ಷಣಾ ಸಮಿತಿ ಸಭೆ ಕರೆಯಬೇಕೆಂಬ ಸಾಮಾನ್ಯ ಪ್ರಜ್ಞೆ ಸಂಬಂದಪಟ್ಟ ಇಲಾಖೆ ಅಧಿಕಾರಿಗಳಿಗೆ ಜಟಿಲವಾದಂತೆ ಕಾಣುತ್ತಿದೆ ಎಂದು ಮುಖಂಡ ಗೋವಿನಾಯಕ್ ಆಕ್ರೋಶ ಹೊರಹಾಕಿದರು.

ಪಟ್ಟಣದ ತಹಶೀಲ್ದಾರ್ ಕಚೇರಿ ಸಭಾಂಗಣದಲ್ಲಿ ಆಯೋಜಿಸಿದ್ದ ಪರಿಶಿಷ್ಟ ಜಾತಿ, ವರ್ಗಗಳ ಹಿತರಕ್ಷಣಾ ಸಮಿತಿ ಸಭೆಯಲ್ಲಿ ಗೈರು ಮನೋಭಾವನೆ ಅಧಿಕಾರಿಗಳ ಕುರಿತು ಜಾಡಿಸಿದ ಅವರು ನಿರ್ಲಕ್ಷ್ಯ ದಾರ್ಢ್ಯ ಬಿಡುವಂತೆ ಆಗ್ರಹಿಸಿದರು.

ದಲಿತರ ಸಮಸ್ಯೆಗಳು ಹಾಗೂ ಅವರ ಮೇಲಿನ ದೌರ್ಜನ್ಯದ ಕುರಿತಾಗಿ ಇಲಾಖೆ ತೆಗೆದುಕೊಂಡಿರುವ ಕ್ರಮಗಳ ಕುರಿತು ಮುಖಂಡರ ಸಮಕ್ಷಮದಲ್ಲಿ ವಿನಿಮಯ ಮಾಡಿಕೊಳ್ಳುವ ವೇದಿಕೆಗೆ ಕೆಲವು ಅಧಿಕಾರಿಗಳು ಗೈರಾಗುತ್ತಿರುವುದು ಆಯಾ ಇಲಾಖೆಗಳ ಲೋಪವನ್ನ ಮರೆಮಾಚುವ ಕುಟಿಲ ತಂತ್ರಗಾರಿಕೆಯಾಗಿದೆ ಎಂದು ವಕೀಲ ಕಾಂತರಾಜು ದೂರಿದರು. ಇಂದಿಗೂ ಸಹ ದಲಿತರು ಕ್ಲಿಷ್ಟಕರ ಜೀವನ ಸಾಗಿಸುತ್ತಿರುವುದಕ್ಕೆ ಪ್ರಮುಖ ಕಾರಣವೇ ಸಮುದಾಯದ ಕುರಿತು ಅಸಡ್ಡೆ ಮನೋಭಾವನೆ ಹೊಂದಿರುವಂತಹ ಅಧಿಕಾರಿಗಳು ಎಂದು ನೇರ ಆರೋಪ ಮಾಡಿದರು.ದಲಿತರ ಉದ್ದಾರಕ್ಕಾಗಿ ನಿಗಮಗಳನ್ನ ಸ್ಥಾಪನೆ ಮಾಡಲಾಗಿದೆಯಾದರು ಸವಲತ್ತುಗಳನ್ನ ಪಡೆಯಲು ಸರ್ಕಸ್ ಮಾಡಬೇಕಾದ ಅನಿವಾರ್ಯತೆ ಪರಿಸ್ಥಿತಿಗೆ ದೂಡಿರುವ ಅಧಿಕಾರಿ ವೃಂದದವರಿಗೆ ಮನಸಾಕ್ಷಿ ಎಂಬುದಿದೆಯೇ ಎಂದು ಛೇಡಿಸಿದರು. ತರೇಹವಾರಿ ಸಿದ್ಧತಾ ಸಬೂಬುಗಳನ್ನ ಮಾರ್ದನಿಸುವ ತಾವು ಸಮಜಾಯಿಷಿ ಪಾಂಡಿತ್ಯತೆಯನ್ನ ಹಲವು ವರ್ಷಗಳಿಂದ ಪ್ರದರ್ಶನ ಮಾಡುತ್ತಲೇ ಬಂದಿರುವುದು ನಮಗೆ ಗ್ರಹಿಕೆಯಾಗಿದೆ ಆದುದರಿಂದ ಇಂತಹ ಬೇಜವಬ್ದಾರಿತನದ ಅಧಿಕಾರಿಗಳ ವಿರುದ್ಧ ಕೇಸ್ ದಾಖಲಿಸಬೇಕು ಎಂದು ಒತ್ತಾಯಿಸಿದರು.

ಕಳೆದ ಬಾರಿ ಅರಣ್ಯ ಇಲಾಖೆಯ ಕರ್ಮಕಾಂಡದ ಕುರಿತು ಆರೋಪಿಸಿದ್ದ ಮುತ್ತಣ್ಣ ನಡಾವಳಿಯಲ್ಲಿ ಸಕಾರಣ ಹಾಗೂ ಪರಿಪೂರ್ಣ ಮಾಹಿತಿ ನೀಡದ ಹಿನ್ನಲೆ ಆಕ್ರೋಶಗೊಂಡರು ಹಾಗೂ ಅರಣ್ಯದ ಗಡಿಭಾಗದ ಜನರ ಜೊತೆ ಸಮನ್ವಯತೆ ಕಾಯ್ದುಕೊಳ್ಳಲು ಅರಣ್ಯ ಇಲಾಖೆ ಕಾರ್ಯಕ್ರಮಗಳನ್ನ ರೂಪಿಸಬೇಕು ಆದರೆ ಇಲ್ಲದ ಸಮಿತಿ ಹೆಸರಿನಲ್ಲಿ ಕೋಟ್ಯಾಂತರ ಹಣ ದುರ್ಬಳಕೆ ಮಾಡಿಕೊಳ್ಳಲಾಗಿದೆ ಎಂಬ ಗಂಭೀರ ಆರೋಪ ಮಾಡಿದರು. ಹಾಗೆಯೇ ವಕೀಲ ರಾಜೇಶ್, ರಾಜ್ ಗೋಪಾಲ್, ಶಿವು ವೀರನಪುರ, ಉಮೇಶ್ ಮಂಗಲ, ಪಾಪಣ್ಣ, ನಾಗೇಂದ್ರ, ಸುರೇಶ್ ನಾಯ್ಕ, ಕುಮಾರ್, ಶ್ರೀನಿವಾಸ್ ನಾಯ್ಕ, ರಾಜೇಂದ್ರ, ರಮೇಶ್, ನಂಜುಂಡಸ್ವಾಮಿ ಹುಣಸಿನಪುರ, ಲಕ್ಕೂರು ಗಿರೀಶ್, ರವಿ ಬೆಳವಾಡಿ, ಚಿಕ್ಕಣ್ಣ, ನಾಗಯ್ಯ, ಶಿವು ಕುಣಗಳ್ಳಿ, ಸೇರಿದಂತೆ ಹಲವರು ಸಮಸ್ಯೆಗಳ ಕುರಿತು ದನಿ ಎತ್ತಿದರು. ಈ ವೇಳೆ ತಹಸೀಲ್ದಾರ್ ತನ್ಮಯ್, ಇಓ ಷಣ್ಮುಗಂ, ಸಿಓ ಸರವಣ, ಸಿಡಿಪಿಓ ಹೇಮಾವತಿ, ತೋಟಗಾರಿಕೆ ಇಲಾಖೆ ಎಡಿ ಭಾಸ್ಕರ್, ಅಬಕಾರಿ ನಿರೀಕ್ಷಕಿ ದೀಪು, ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಮೋಹನ್ ಕುಮಾರ್, ಪಿ ಎಸ್ ಐ ಸಾಹೇಬ್ ಗೌಡ, ಲೀಡ್ ಬ್ಯಾಂಕ್ ವ್ಯವಸ್ಥಾಪಕಿ ಸುರೇಖಾ, ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳು ಹಾಜರಿದ್ದರು.

## ಸಿಡಿಮದ್ದು ಸ್ಫೋಟ ಹಸುವಿನ ಬಾಯಿ ಛಿದ್ರ




• ಉದಯವಾಹಿನಿ, ಗುಂಡ್ಲುಪೇಟೆ

ಕಾಡು ಹಂದಿಗಳ ಬೇಟೆಗಾಗಿ ಕಳ್ಳ ಬೇಟೆಗಾರರು ಜಮೀನಿನಲ್ಲಿ ಅಡಗಿಸಿಟ್ಟಿದ್ದ ಸಿಡಿಮದ್ದನ್ನ ಜಗಿದ ಹಸುವಿನ ಬಾಯಿ ಛಿದ್ರಗೊಂಡಿರುವ ಘಟನೆ ತಾಲ್ಲೂಕಿನ ಬೇಗೂರು ಪೊಲೀಸ್ ಠಾಣಾ ವ್ಯಾಪ್ತಿಯ ಸೋಮಹಳ್ಳಿ ಗ್ರಾಮದಲ್ಲಿ ಶುಕ್ರವಾರ ಸಂಭವಿಸಿದ್ದು ಪ್ರೀತಿಯಿಂದ ಸಾಕಿದ್ದ ಗೋವಿನ ನರಳಾಟ ನೋಡಿದ ರೈತ ಕಂಗಾಲಾಗಿ ಹೋಗಿದ್ದಾರೆ.

ತಾಲ್ಲೂಕಿನ ಸೋಮಹಳ್ಳಿ ಗ್ರಾಮದ ರೈತ ನಂಜುಂಡಪ್ಪ ಎಂಬವರು ತಮ್ಮ ಜಮೀನಿನಲ್ಲಿ ಹಸು ಮೇಯಿಸುತ್ತಿದ್ದ ವೇಳೆ ಪಟಾಕಿ ಸಿಡಿದಂತೆ ಶಬ್ದ ಕೇಳಿ ಬಂದ ಹಿನ್ನೆಲೆ ಪರಿಶೀಲಿಸಿದ ವೇಳೆ ಹಸುವಿನ ಬಾಯಿ ಛಿದ್ರಗೊಂಡಿರುವುದನ್ನ ಗಮನಿಸಿದ್ದಾರೆ, ಜೀವನಕ್ಕೆ ಆಧಾರವಾಗಿದ್ದ ಹಸುವಿನ ಪರಿಸ್ಥಿತಿ ನೋಡಿ ಬಡ ರೈತ ಕಣ್ಣೀರಾಕುತ್ತಿದ್ದು ಕೃತ್ಯ ಎಸಗಿದ ಕಿಡಿಗೇಡಿಗಳಿಗೆ ತಕ್ಕ ಸಾಸ್ತಿ ಮಾಡುವಂತೆ ಸ್ಥಳೀಯರು ಆಗ್ರಹಿಸಿದ್ದಾರೆ.

ಘಟನಾ ಸಂಬಂಧ ಸ್ಥಳಕ್ಕೆ ತೆರಳಿ ಮಾಹಿತಿ ಸಂಗ್ರಹಿಸಿದ ಬೇಗೂರು ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

**ಗ್ರಾಮದ ಕೂಗಳತೆ ದೂರದಲ್ಲೇ ಸಿಡಿಮದ್ದು ತಯಾರಿಕೆ ಹಾಗೂ ಸಂಗ್ರಹಣ ಘಟಕ ಸ್ಥಾಪನೆ ಮಾಡಿರುವುದು ಆತಂಕಕಾರಿ ಸಂಗತಿಯಾಗಿದೆ, ಘಟಕದಲ್ಲಿ ಸಿದ್ಧವಾದ ಬಾರಿ ಸ್ಫೋಟಕಗಳನ್ನ ಆಗಾಗ್ಗೆ ಸ್ಫೋಟಿಸಿ ಪ್ರಾತ್ಯಕ್ಷಿಕೆ ನಡೆಸಲಾಗುತ್ತಿದೆ ಸಿಡಿಮದ್ದಿನ ಶಬ್ದದ ತೀವ್ರತೆಗೆ ಗ್ರಾಮದ ಜನರೇ ಬೆಚ್ಚಿಬೀಳುತ್ತಿದ್ದಾರೆ, ಪ್ರಭಾವಿಗಳ ಕೃಪಾ ಕಟಾಕ್ಷದಿಂದ ತಲೆ ಎತ್ತಿರುವ ವಿಧ್ವಂಸಕ ಸಿಡಿಮದ್ದು ತಯಾರಿಕ ಘಟಕದಿಂದ ಸಾರ್ವಜನಿಕರಿಗೆ ಬಹಳ ತೊಂದರೆಯಾಗುತ್ತಿದೆ.**

**ಮಧುಶಂಕರ್ ತಾಲ್ಲೂಕು ಪಂ.ಮಾಜಿ ಅಧ್ಯಕ್ಷ, ಸೋಮಹಳ್ಳಿ**

# ಅಂಬೇಡ್ಕರ್ ದಲಿತರಿಗೆ ಅನುಕೂಲವಾಗುವಂತೆ ಸಂವಿಧಾನ ರಚನೆ

• ಉದಯವಾಹಿನಿ, ಕೆಜಿಎಫ್

ಅಂಬೇಡ್ಕರ್ ಅವರು ದಲಿತರಿಗೆ ಅನುಕೂಲವಾಗುವಂತೆ ಸಂವಿಧಾನ ರಚನೆ ಮಾಡಿದ್ದಾರೆ ಎಂಬ ಭಾವನೆ ಬೇಡ. ಇಡೀ ಮನುಕುಲದ ಎಲ್ಲಾ ಸಮುದಾಯದ ಅಭ್ಯುದಯಕ್ಕಾಗಿ ಸಂವಿಧಾನ ರಚಿಸಲಾಗಿದೆ ಎಂದು ಮೈಸೂರಿನ ಮಾಜಿ ಸಂಸದ ಪ್ರತಾಪ ಸಿಂಹ ಅಭಿಪ್ರಾಯಪಟ್ಟರು.

ರಾಬರ್ಟಸನ್‌ಪೇಟೆಯಲ್ಲಿ ಬಿಜೆಪಿ ವತಿಯಿಂದ ಆಯೋಜಿಸಿದ್ದ ಸಂವಿಧಾನ ಜಾಗೃತಿಗಾಗಿ ಭೀಮ ನಡೆ ಕಾರ್ಯಕ್ರಮದಲ್ಲಿ ಮಾತನಾಡಿ, ಧರ್ಮಶಾಸ್ತ್ರ ಒಪ್ಪುವುದಿಲ್ಲ ಎಂದು ಮಹಾರಾಷ್ಟ್ರದ ದೇವಾಲಯದೊಳಗೆ ಅಸ್ಪೃಶ್ಯರನ್ನು ಒಳಗೆ ಬಿಡದಿದ್ದಾಗ ಅಂಬೇಡ್ಕರ್ ಅವರು ಏಳು ವರ್ಷಗಳ ಕಾಲ ಸಂಸ್ಕೃತ ವಿದ್ವಾಂಸರಿಂದ ಸಂಸ್ಕೃತ ಕಲಿತು. ಧರ್ಮಶಾಸ್ತ್ರದಲ್ಲಿ ದಲಿತರಿಗೆ ಪ್ರವೇಶ ಮಾಡುವುದನ್ನು ಎಲ್ಲಿಯೂ ನಿಷೇಧಿಸಿಲ್ಲ ಎಂದು ಪ್ರತಿಪಾದಿಸಿದರು. ಹುಟ್ಟು ಯಾವುದೇ ಜನಾಂಗದಲ್ಲಿ ಆಗಲಿ, ಜ್ಞಾನ ಪಡೆದವರು ಸಂಸ್ಕಾರ ಪಡೆಯುತ್ತಾರೆ. ವಾಲ್ಮೀಕಿ, ಕೃಷ್ಣ, ವಿಶ್ವಾಮಿತ್ರ, ವಿವೇಕಾನಂದ, ಮೊದಲಾದವರು ಉನ್ನತ ಜಾತಿಗೆ ಸೇರಿಲ್ಲದೆಯೂ ಜ್ಞಾನಿಗಳಾದರು. ಅದೇ ಸಾಲಿನಲ್ಲಿ ಅಂಬೇಡ್ಕರ್ ಅವರು ಸೇರುತ್ತಾರೆ ಎಂದು ಹೇಳಿದರು.

ಈಗಿನ ಸರ್ಕಾರದ ತಪ್ಪುಗಳನ್ನು ಮುಚ್ಚಿಕೊಳ್ಳಲು ಸಂವಿಧಾನ ಅಪಾಯದಲ್ಲಿದೆ ಎಂದು ಸುಳ್ಳು ಪ್ರಚಾರ ಮಾಡುತ್ತಿದ್ದಾರೆ. ಈಗ ಇರುವುದು ಮೂಲ ಅಂಬೇಡ್ಕರ್ ಸಂವಿಧಾನ ಅಲ್ಲ, ತುರ್ತು ಪರಿಸ್ಥಿತಿಯಲ್ಲಿ ಕಾಂಗ್ರೆಸ್ ಅವರು ತಿದ್ದುಪಡಿ ಮಾಡಿದ ಸಂವಿಧಾನ ಎಂದು




ದೂರಿದರು. ಅಂಬೇಡ್ಕರ್ ಹೆಸರೇಳಿಕೊಂಡು ಬಿಜೆಪಿ, ಸಂಘ ಪರಿವಾರವನ್ನು ಬೈಯುವ ಪರಿಪಾಠವನ್ನು ಕಾಂಗ್ರೆಸ್ ಅವರು ಮಾಡುತ್ತಿದ್ದಾರೆ. ತುರ್ತು ಪರಿಸ್ಥಿತಿಯಲ್ಲಿ ಸಂವಿಧಾನದ ಆಶಯವನ್ನೇ ಬುಡಮೇಲು ಮಾಡುವ ಕೆಲಸ ಆಯಿತು. ರಾಜ್ಯದಲ್ಲಿ ಸಂವಿಧಾನ ಪುಸ್ತಕ ಮುದ್ರಣ ಮಾಡಿ ಹಂಚಿದ ಸಚಿವ ಮಹದೇವಪ್ಪ ಕೋಟ್ಯಂತರ ರೂಪಾಯಿ ಲೂಟಿ ಹೊಡೆದಿದ್ದಾರೆ ಎಂದು ಆರೋಪಿಸಿದರು. ಕೆಜಿಎಫ್ ಶಾಸಕರು ಕ್ಷೇತ್ರದಲ್ಲಿ ಏನೂ ಅಭಿವೃದ್ಧಿ ಮಾಡಿಲ್ಲ. ನಗರಸಭೆಯಲ್ಲಿ ರೂ.200 ಕೋಟಿ ಅವ್ಯವಹಾರ ಆಗಿದೆ. ತಾಲ್ಲೂಕಿನಲ್ಲಿ ಆಗಿರುವ ಅಭಿವೃದ್ಧಿ ಕಾಮಗಾರಿಗಳು ಬಿಜೆಪಿ ಅವಧಿಯಲ್ಲಿ ಆಗಿದ್ದವು ಎಂದು ಮಾಜಿ ಸಂಸದ ಎಸ್.ಮುನಿಸ್ವಾಮಿ ಆರೋಪಿಸಿದರು.

**ಸಂವಿಧಾನ ರಚನೆಯಾದ ಹತ್ತು ವರ್ಷದಲ್ಲಿ ದೇಶದ ಸಂಪತ್ತನ್ನು ಬಡವರಿಗೆ ಹಂಚಬೇಕು ಎಂದು ಬಿ.ಆರ್.ಅಂಬೇಡ್ಕರ್ ಅವರು ಬಯಸಿದ್ದರು. 55 ವರ್ಷ ಆಡಳಿತ ನಡೆಸಿದ ಕಾಂಗ್ರೆಸ್ ಪಕ್ಷವು ಅವರ ಆಶಯವನ್ನು ಈಡೇರಿಸಲಿಲ್ಲ. ಅಂಬೇಡ್ಕರ್ ಅವರು ಕಾಂಗ್ರೆಸ್ ಪಕ್ಷದಲ್ಲಿ ಮಂತ್ರಿಯಾಗಿರಲಿಲ್ಲ. ರಾಷ್ಟ್ರೀಯ ಸರ್ಕಾರದಲ್ಲಿ ಮಂತ್ರಿಯಾಗಿದ್ದರು. ರಾಜ್ಯದಲ್ಲಿ ದಲಿತರ ಸಮಸ್ಯೆಗಳಿಗೆ ಎಂದೂ ಪರಿಹಾರ ಸಿಕ್ಕಿಲ್ಲ. ದಲಿತರಿಗೆ ಮೀಸಲಾದ ಹಣವನ್ನು ಅಕ್ರಮವಾಗಿ ಬಳಸಿಕೊಳ್ಳಲಾಯಿತು. ಒಬ್ಬ ದಲಿತರಿಗೆ ಮನೆ ಕೊಡಲಿಲ್ಲ. ಭೂಮಿ ಹಂಚಲಿಲ್ಲ ಎಂದು ದೂರಿದರು.**

**-ಮಾಜಿ ಸಚಿವ ಎ.ನಾರಾಯಣಸ್ವಾಮಿ**

# ಡಿ.16ರಂದು ಮಳವಳ್ಳಿಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಭೇಟಿ

## ಆದಿ ಜಗದ್ಗುರು ಶಿವರಾತ್ರೀಶ್ವರ ಶ್ರೀಗಳ 1066ನೇ ಜಯಂತಿಯಲ್ಲಿ ಮುಖ್ಯ ಅತಿಥಿಯಾಗಿ ಭಾಗಿ

• ಉದಯವಾಹಿನಿ, ಮಂಡ್ಯ,

ಸೆಪ್ಟೆಂಬರ್ 1ರಂದು ಮೈಸೂರಿಗೆ ಆಗಮಿಸಿದ್ದ ರಾಷ್ಟ್ರಪತಿ ದ್ರೌಪದಿ ಮುರ್ಮು 3 ತಿಂಗಳ ಬಳಿಕ ಮತ್ತೆ ರಾಜ್ಯಕ್ಕೆ ಭೇಟಿ ನೀಡಲಿದ್ದಾರೆ.

ಡಿಸೆಂಬರ್ 16ರಂದು ಅವರು ಮಂಡ್ಯ ಜಿಲ್ಲೆಯ ಮಳವಳ್ಳಿಯಲ್ಲಿ ನಡೆಯಲಿರುವ ಆದಿ ಜಗದ್ಗುರು ಶಿವರಾತ್ರೀಶ್ವರ ಶ್ರೀಗಳ 1066ನೇ ಜಯಂತಿಯಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದಾರೆ. ಈ ಹಿನ್ನೆಲೆಯಲ್ಲಿ ಬಿಗಿ ಭದ್ರತೆ ಕೈಗೊಳ್ಳಲಾಗಿದೆ. ಮಳವಳ್ಳಿಯಲ್ಲಿ ಡಿಸೆಂಬರ್ 16ರಿಂದ 21ರವರೆಗೆ ಆದಿ ಜಗದ್ಗುರು ಶಿವರಾತ್ರೀಶ್ವರ ಶ್ರೀಗಳ 1066ನೇ ಜಯಂತಿ ಮಹೋತ್ಸವವನ್ನು ಆಯೋಜಿಸಲಾಗಿದೆ.



ಈ ಹಿನ್ನೆಲೆಯಲ್ಲಿ ಮಳವಳ್ಳಿಯ ಮುನ್ಸಿಪಲ್ ಮೈದಾನದಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಡಿಸೆಂಬರ್ 16ರ ಮಧ್ಯಾಹ್ನ 2.10ಕ್ಕೆ ಮೈಸೂರಿನ ಏರ್‌ಪೋರ್ಟ್‌ಗೆ ಆಗಮಿಸಲಿರುವ ದ್ರೌಪದಿ ಮುರ್ಮು, ಬಳಿಕ ಹೆಲಿಕಾಪ್ಟರ್‌ನಲ್ಲಿ ಮಂಡ್ಯ ಜಿಲ್ಲೆಯ ಮಳವಳ್ಳಿಗೆ ತೆರಳಲಿದ್ದಾರೆ. ಬಳಿಕ ಮಳವಳ್ಳಿಯಲ್ಲಿ ನಡೆಯುವ ಸುತ್ತೂರು ಮಠದ ಕಾರ್ಯಕ್ರಮದಲ್ಲಿ ಭಾಗಿಯಾಗಲಿದ್ದಾರೆ. ಸಂಜೆ 5.25ಕ್ಕೆ ಮಳವಳ್ಳಿಯಿಂದ ಮೈಸೂರಿಗೆ ಹಿಂದಿರುಗುವ ರಾಷ್ಟ್ರಪತಿ ರಾತ್ರಿ ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ವಾಸ್ತವ್ಯ ಹೂಡಲಿದ್ದಾರೆ. ಡಿಸೆಂಬರ್ 17ರ ಬೆಳಗ್ಗೆ 9.25ಕ್ಕೆ ಮೈಸೂರಿನಿಂದ ತಿರುಪತಿಗೆ ಹಿಂದಿರುಗಲಿದ್ದಾರೆ.

ರಾಷ್ಟ್ರಪತಿ ದ್ರೌಪದಿ ಮುರ್ಮು ಮಂಡ್ಯ ಜಿಲ್ಲೆಗೆ ಭೇಟಿ ನೀಡುತ್ತಿರುವ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿ ಡಾ. ಕುಮಾರ್ ಅಧಿಕಾರಿಗಳೊಂದಿಗೆ ಸಭೆ ಮಾಡಿ ಅಗತ್ಯ ಸಿದ್ಧತೆ ಮಾಡಿಕೊಳ್ಳುವಂತೆ ಸೂಚನೆ ನೀಡಿದ್ದಾರೆ. ಸಮರೋಪಾದಿಯಲ್ಲಿ ಕಾಮಗಾರಿ ನಡೆಸಲಾಗುತ್ತಿದೆ.

### ಮೈಸೂರಿಗೆ ಭೇಟಿ ನೀಡಿದ್ದ ರಾಷ್ಟ್ರಪತಿ

**ರಾಷ್ಟ್ರಪತಿ ದ್ರೌಪದಿ ಮುರ್ಮು ಸೆಪ್ಟೆಂಬರ್ 1ರಂದು ಮೈಸೂರಿಗೆ ಆಗಮಿಸಿದ್ದರು. ವಿವಿಧ ಕಾರ್ಯಕ್ರಮಗಳ ನಿಮಿತ್ತ ಮೈಸೂರಿಗೆ 2 ದಿನಗಳ ಪ್ರವಾಸವನ್ನು ಕೈಗೊಂಡಿದ್ದ ಅವರನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಹೂಗುಚ್ಛ ನೀಡಿ ಸ್ವಾಗತಿಸಿದರು. ದೆಹಲಿಯಿಂದ ವಿಶೇಷ ವಿಮಾನದಲ್ಲಿ ಮೈಸೂರಿಗೆ ಆಗಮಿಸಿದ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಮೈಸೂರಿನ ವಿಮಾನ ನಿಲ್ದಾಣದಲ್ಲಿ ಸಿಎಂ ಆತ್ಮೀಯವಾಗಿ ಸ್ವಾಗತಿಸಿದರು. ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಉಪಸ್ಥಿತರಿದ್ದರು. ಮೈಸೂರಿನ ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ (ಆಯಿಷ್)ಯಲ್ಲಿ ನಡೆದ 60ನೇ ವರ್ಷದ ವಜ್ರ ಮಹೋತ್ಸವ ಕಾರ್ಯಕ್ರಮದಲ್ಲಿ ದ್ರೌಪದಿ ಮುರ್ಮು ಭಾಗಿಯಾಗಿದ್ದರು. ಸೆಪ್ಟೆಂಬರ್ 1ರಂದು ಚಾಮುಂಡೇಶ್ವರಿ ತಾಯಿಯ ದರ್ಶನ ಪಡೆದ ಅವರು ಸಂಜೆ ಚಾಮುಂಡಿ ಬೆಟ್ಟಕ್ಕೆ ಭೇಟಿ ನೀಡಲಿದ್ದರು. ಇದೇ ವೇಳೆ ದ್ರೌಪದಿ ಮುರ್ಮು ಮೈಸೂರು ಅರಮನೆಗೆ ಭೇಟಿ ನೀಡಿದ್ದರು.**

## ಮಿನಿ ನ್ಯೂಸ್

### ಗ್ರಾಮ ಪಂ. ಕಚೇರಿ ಅಂಗವಿಕಲನಿಂದ ಅನಿರ್ದಿಷ್ಟಾವಧಿ ಧರಣಿ

• ಉದಯವಾಹಿನಿ, ಶಿಡ್ಲಘಟ್ಟ

ಕುಂದಲಗುರ್ಕಿ ಗ್ರಾಮ ಪಂಚಾಯಿತಿಯು ಒಂದೇ ನಿವೇಶನವನ್ನು ಇಬ್ಬರಿಗೆ ನೀಡುವ ಮೂಲಕ ಇಬ್ಬರ ಮಧ್ಯೆ ಜಗಳ ತಂದಿಟ್ಟಿದೆ. ಅಲ್ಲದೆ, ಈ ನಿವೇಶನವು ಇದೀಗ ಇಬ್ಬರಿಗೂ ಇಲ್ಲದಂತೆ ಮಾಡಲಾಗಿದೆ ಎಂದು ಆರೋಪಿಸಿ ಅಂಗವಿಕಲ ಸಂತೋಷ್ ಕುಮಾರ್ ಅವರು ಗ್ರಾಮ ಪಂಚಾಯಿತಿ ಕಚೇರಿ ಆವರಣದಲ್ಲಿ ಅನಿರ್ದಿಷ್ಟಾವಧಿ ಧರಣಿ ಆರಂಭಿಸಿದರು. ತಾಲ್ಲೂಕಿನ ಕುಂದಲಗುರ್ಕಿ ಗ್ರಾಮ ಪಂಚಾಯಿತಿ ಕಚೇರಿ ಆವರಣದಲ್ಲಿ ಮಹಾತ್ಮಗಾಂಧಿ ಮತ್ತು ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಭಾವಚಿತ್ರ ಇಟ್ಟುಕೊಂಡು ಒಬ್ಬಂಟಿಯಾಗಿ ಧರಣಿ ಆರಂಭಿಸಿದ್ದಾರೆ ಸಂತೋಷ್. 2013ರಲ್ಲಿ ಗ್ರಾಮ ಪಂಚಾಯಿತಿಯಿಂದ ಸಂತೋಷ್ ಕುಮಾರ್ ಅವರ ತಾಯಿ ಅಂಜಿನಮ್ಮ ಹೆಸರಿಗೆ ನಿವೇಶನ ಮಂಜೂರಾಗಿತ್ತು.

ಇಂದಿರಾ ಆವಾಸ್ ವಸತಿ ಯೋಜನೆಯಡಿ ಮನೆ ಕೂಡ ಮಂಜೂರಾಗಿತ್ತು. ಅಂಜಿನಮ್ಮ ಅವರು ನಿವೇಶನದಲ್ಲಿ ಮನೆ ನಿರ್ಮಿಸಲು ಅಡಿಪಾಯ ಹಾಕಿ ಮೊದಲ ಬಿಲ್ ರೂ.29,800 ಬಿಲ್ ಹಣ ಕೂಡ ಪಡೆದುಕೊಂಡಿದ್ದಾರೆ. ಆದರೆ, ಅದೇ ನಿವೇಶನ ತಮಗೆ ಮಂಜೂರು ಆಗಿದೆ ಎಂದು ಗ್ರಾಮದ ಪ್ರಭಾವಿ ವ್ಯಕ್ತಿಯೊಬ್ಬರು ಪಂಚಾಯಿತಿಗೆ ದಾಖಲೆ ಸಲ್ಲಿಸಿದ್ದಾರೆ. ಇದರಿಂದ ಇಬ್ಬರ ನಡುವೆ ವಾದ-ವಿವಾದ ನಡೆದಿದೆ ಎಂದರು.ಅಂತಿಮವಾಗಿ ಸಂತೋಷ್ ಕುಮಾರ್ ನಿರ್ಮಿಸಿದ್ದ ಅಡಿಪಾಯ ಕಿತ್ತು ಹಾಕಲಾಗಿದೆ. ಮನೆ ಕಟ್ಟಲು ಬಿಡುತ್ತಿಲ್ಲ. ಅಂದಿನಿಂದ ಇಂದಿನವರೆಗೆ ನಿವೇಶನಕ್ಕೆ ಸಂಬಂಧಿಸಿದಂತೆ ಎರಡು ಕುಟುಂಬಗಳ ನಡುವೆ ಗಲಾಟೆ ನಡೆಯುತ್ತಿದೆ. ಸಮಸ್ಯೆ ಬಗೆಹರಿಸಬೇಕಿದ್ದ ಗ್ರಾಮ ಪಂಚಾಯಿತಿ ಅಧಿಕಾರಿಗಳು ಸುಮ್ಮನಿದ್ದಾರೆ ಎಂದು ದೂರಿದರು.

### ಹೆಚ್ಚುತ್ತಿದೆ ಮಾನವ ಹಕ್ಕುಗಳ ಉಲ್ಲಂಘನೆ

• ಉದಯವಾಹಿನಿ, ಶಿರಾ

ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ರಾಜ್ಯಶಾಸ್ತ್ರ ವಿಭಾಗ ಮತ್ತು ಎನ್‌ಸಿಸಿಯಿಂದ ಅಂತರರಾಷ್ಟ್ರೀಯ ಮಾನವ ಹಕ್ಕುಗಳ ದಿನಾಚರಣೆ ನಡೆಯಿತು. ಅರ್ಥಶಾಸ್ತ್ರ ವಿಭಾಗ ಮುಖ್ಯಸ್ಥ ಪ್ರೊ. ಎಂ.ತಿಪ್ಪೇಸ್ವಾಮಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ನಾಗರಿಕ ಸಮಾಜದ ಸ್ವಾತಂತ್ರ್ಯ ಎತ್ತಿ ಹಿಡಿಯುವ ದೃಷ್ಟಿಯಿಂದ ಘೋಷಿಸಲಾದ ಮಾನವ ಹಕ್ಕುಗಳನ್ನು 1948ರಲ್ಲಿ ವಿಶ್ವಸಂಸ್ಥೆ ಅಂಗೀಕರಿಸಿತು. ಅಂದಿನಿಂದ ಪ್ರತಿವರ್ಷ ಡಿಸೆಂಬರ್ 10ರಂದು ಅಂತರರಾಷ್ಟ್ರೀಯ ಮಾನವ ಹಕ್ಕುಗಳ ದಿನ ಆಚರಿಸಲಾಗುತ್ತಿದೆ ಎಂದರು. ಅಂತರರಾಷ್ಟ್ರೀಯ ಮಟ್ಟದಲ್ಲಿ ಇತ್ತೀಚಿನ ದಿನಗಳಲ್ಲಿ ಮಾನವ ಹಕ್ಕುಗಳ ಉಲ್ಲಂಘನೆ ಹೆಚ್ಚುತ್ತಿರುವುದು ವಿಷಾದನೀಯ ಎಂದರು. ರಾಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥ ಡಿ.ಆರ್. ಹೊನ್ನಾಂಜಿನಯ್ಯ, ಮಾತನಾಡಿ, ಮಾನವ ಹಕ್ಕುಗಳ ಸಂರಕ್ಷಣೆ ಕೇವಲ ಸರ್ಕಾರಗಳ ಕರ್ತವ್ಯವಲ್ಲ. ಸಮಾಜದಲ್ಲಿರುವ ಪ್ರತಿಯೊಬ್ಬರ ಕರ್ತವ್ಯ. ವಿದ್ಯಾರ್ಥಿಗಳು ಇದರ ಮಹತ್ವ ಅರಿಯಬೇಕು ಎಂದರು. ಎನ್‌ಸಿಸಿ ವಿದ್ಯಾರ್ಥಿ ವೆಂಕಟೇಶ್ ಮಾನವ ಹಕ್ಕುಗಳ ಬಗ್ಗೆ ವಿದ್ಯಾರ್ಥಿಗಳು ಹೆಚ್ಚಿನ ಆಸಕ್ತಿ ತೋರಿಸಬೇಕು ಎಂದರು. ಸಹ ಪ್ರಾಧ್ಯಾಪಕ ಪ್ರೊ. ಶಾಂತಕುಮಾರಿ, ಸುಕನ್ಯಾ ಟಿ.ಎಲ್, ಸುರೇಶ್ ಎನ್., ದೈಹಿಕ ಶಿಕ್ಷಣ ನಿರ್ದೇಶಕ ವೆಂಕಟೇಶ್ ಮೂರ್ತಿ, ಎನ್‌ಸಿಸಿ ಹಿರಿಯ ವಿದ್ಯಾರ್ಥಿಗಳಾದ ದರ್ಶನ್, ಕುಮಾರ್ ಮತ್ತು ಮಹಾಲಕ್ಷ್ಮಿ ಹಾಜರಿದ್ದರು.

### ಜಿಲ್ಲಾಧಿಕಾರಿ ಕಚೇರಿಗೆ ಬಾಂಬ್ ಬೆದರಿಕೆ

• ಉದಯವಾಹಿನಿ, ಕೋಲಾರ

ನಗರ ಹೊರವಲಯದಲ್ಲಿರುವ ಜಿಲ್ಲಾಧಿಕಾರಿ ಕಚೇರಿಯಲ್ಲಿ ಬಾಂಬ್ ಇರಿಸಿರುವುದಾಗಿ ಬೆದರಿಕೆ ಇ-ಮೇಲ್ ಸಂದೇಶ ಕಳುಹಿಸಿರುವ ಘಟನೆ ಬೆಳಿಗ್ಗೆ ನಡೆದಿದೆ. ತಪಾಸಣೆ ನಡೆಸಿದ ಬಳಿಕ ಇದು ಹುಸಿ ಬಾಂಬ್ ಸಂದೇಶ ಎಂಬುದು ಗೊತ್ತಾಗಿದೆ. ಜಿಲ್ಲಾಧಿಕಾರಿ ಇ-ಮೇಲ್‌ಗೆ ಬೆಳಿಗ್ಗೆ 6.30ರ ಸುಮಾರಿಗೆ ಈ ಬೆದರಿಕೆ ಸಂದೇಶ ಬಂದಿದೆ. ಮಧ್ಯಾಹ್ನ 1.30ರ ಸುಮಾರಿಗೆ ಜಿಲ್ಲಾಧಿಕಾರಿ ಆಪ್ತ ಸಹಾಯಕರು ಪೊಲೀಸರ ಗಮನಕ್ಕೆ ತಂದಿದ್ದಾರೆ. ಜಿಲ್ಲಾಧಿಕಾರಿ ಎಂ.ಆರ್.ರವಿ. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ನಿಖಿಲ್ ಬಿ. ಹಾಗೂ ಸಿಬ್ಬಂದಿ ಸ್ಥಳಕ್ಕೆ ತೆರಳಿ ಪರಿಶೀಲಿಸಿದರು. ಜಿಲ್ಲಾಡಳಿತ ಭವನದಲ್ಲಿದ್ದ ಎಲ್ಲಾ ಅಧಿಕಾರಿ ಹಾಗೂ ಸಿಬ್ಬಂದಿಯನ್ನು ಪೊಲೀಸರು ಹೊರಗೆ ಕಳಿಸಿದರು. ಬಾಂಬ್ ನಿಷ್ಕ್ರಿಯ ದಳ, ಶ್ವಾನದಳ ಪರಿಶೀಲಿಸಿದವು. ಪೊಲೀಸರು ಕಂಪ್ಯೂಟರ್ ವಶಕ್ಕೆ ಪಡೆದು ತಪಾಸಣೆ ನಡೆಸಿದರು.

### ಕುಂಟುತಲ್ಲೇ ಇದೆ ಭದ್ರಾ ಮೇಲ್ದಂಡೆ, ಎತ್ತಿನಹೊಳೆ ಯೋಜನೆ

• ಉದಯವಾಹಿನಿ, ಪಾವಗಡ

ಉರಿ ಬಿಸಿಲು, ಬರ, ಅನಾವೃಷ್ಟಿ, ಬೆಳೆ ಹಾನಿಯಿಂದ ತತ್ತರಿಸಿದ್ದ ತಾಲ್ಲೂಕಿನ ನಿಡಗಲ್ ಹೋಬಳಿ ಜನರಿಗೆ ಆಂಧ್ರದ ಹಂದ್ರಿನಿವಾ ಸುಜಲಶ್ರವಂತಿ ಯೋಜನೆ ನೆಮ್ಮದಿಯ ಬದುಕಿನ ಭರವಸೆ ನೀಡಿದೆ. ತಾಲ್ಲೂಕಿನ ಕೆರೆಗಳಿಗೆ ನೀರು ಹರಿಸುವ ಭದ್ರಾ ಮೇಲ್ದಂಡೆ ಹಾಗೂ ಎತ್ತಿನಹೊಳೆ ಯೋಜನೆಗಳು ದಶಕಗಳಿಂದ ಪ್ರಗತಿಯಲ್ಲಿಯೇ ಇವೆ. ಇಷ್ಟೆಲ್ಲದರ ನಡುವೆ ಆಂಧ್ರದ ಶ್ರೀಶೈಲಂ ಜಲಾಶಯದಿಂದ 500ರಿಂದ 600 ಕಿ.ಮೀ ದೂರದವರೆಗೆ ಕೃಷ್ಣಾನದಿ ನೀರು ಹರಿಸುವ ಹಂದ್ರಿನಿವಾ ಸುಜಲಶ್ರವಂತಿ ನೀರು ತಾಲ್ಲೂಕಿನ ಕೂಗಳತೆ ದೂರದಲ್ಲಿ ಹರಿಯುತ್ತಿರುವುದು ಗಡಿಗೆ ಹೊಂದಿಕೊಂಡಿರುವ ರೈತರಲ್ಲಿ ಸಂತಸ ಮೂಡಿಸಿದೆ. ಈ ನೀರಿನಿಂದ ವಂಚಿತರಾದ ತಾಲ್ಲೂಕಿನ ಇತರೆ ರೈತರಲ್ಲಿ ಸರ್ಕಾರಗಳ ಬಗ್ಗೆ ಬೇಸರ ಮೂಡಿಸುತ್ತಿದೆ. ಕಾಲುವೆಯಲ್ಲಿ ಹರಿಯುತ್ತಿರುವ ನೀರನ್ನು ಕಣ್ತುಂಬಿಕೊಳ್ಳಲು ತಾಲ್ಲೂಕಿನ ರೈತರು ಎಡತಾಕುತ್ತಿದ್ದಾರೆ. ಕಾಲುವೆಗೆ ಇಳಿದು ನೀರು ಧುಮುಕುವ ಸ್ಥಳದಲ್ಲಿ ನಿಂತು ಸೆಲ್ಫಿ ಕ್ಲಿಕ್ಕಿಸಿಕೊಂಡು ಅಲ್ಪ ತೃಪ್ತರಾಗುತ್ತಿದ್ದಾರೆ. ನಮ್ಮ ಕೆರೆಗಳಿಗೆ ಯಾವಾಗ ಹೀಗೆ ನೀರು ಹರಿಯುತ್ತದೆಯೋ ಎಂದು ಗೊಣಗಿಕೊಂಡು ಗ್ರಾಮಗಳಿಗೆ ಮರಳುತ್ತಿರುವುದು ಸಾಮಾನ್ಯವಾಗಿದೆ. ಆಂಧ್ರ ಪ್ರದೇಶದಲ್ಲಿ ಸರ್ಕಾರಗಳು ಬದಲಾದರೂ ರೈತರಿಗೆ ನೀರು ಹರಿಸಲೇಬೇಕೆಂಬ ಧ್ಯೇಯೋದ್ದೇಶ ಬದಲಾಗಿಲ್ಲ. ಟಿಡಿಪಿ, ವೈಎಸ್‌ಆರ್ ಸಿಪಿ ಸೇರಿದಂತೆ ಯಾವುದೇ ಪಕ್ಷ ಅಧಿಕಾರಕ್ಕೆ ಬಂದರೂ ಯೋಜನೆಯ ವೇಗ ಕಡಿಮೆಯಾಗಿಲ್ಲ. ಶ್ರೀಶೈಲಂ ಜಲಾಶಯದಿಂದ ಆಂಧ್ರ ಪ್ರದೇಶದ ಆರು ಲಕ್ಷ ಎಕರೆ ಪ್ರದೇಶಕ್ಕೆ ನೀರುಣಿಸುವುದರ ಜೊತೆಗೆ ಕುಡಿಯುವ ನೀರು ಪೂರೈಕೆ ಯೋಜನೆಯ ಗುರಿಯಾಗಿತ್ತು. 2005ರಲ್ಲಿ ಪ್ರಾರಂಭವಾದ ಯೋಜನೆ ಮೂರು ಹಂತಗಳಲ್ಲಿ 569 ಕಿ.ಮೀ. ದೂರದ ರಾಜ್ಯದ ಹಲ ಜಿಲ್ಲೆಗಳಿಗೆ ಸಂಗ್ರಹಾಗಾರಗಳನ್ನು ನಿರ್ಮಿಸಿಕೊಂಡು ಹಂತ ಹಂತವಾಗಿ ನೀರು ಪೂರೈಕೆ ಮಾಡಿಕೊಂಡು ಬರುತ್ತಿದೆ. ಇದೀಗ ಆಂಧ್ರದ ಮಡಕಶಿರಾ ತಾಲ್ಲೂಕಿನ ಮೂಲಕ ನಿಡಗಲ್ ಹೋಬಳಿಗೆ ಹೊಂದಿಕೊಂಡಿರುವ ಅಲಕೂರು ಕೆರೆಗೆ ಕಾಲುವೆ ಮೂಲಕ ನೀರು ಹರಿಯುತ್ತಿದೆ.

ಅಂತರಾಳದಿಂದ.. EDITORIAL

# ಅಸಮಾನತೆಯ ಕಂದರದೊಳಗೆ ಭಾರತದ ಅಭಿವೃದ್ಧಿಯ ಕನಸು



ತನ್ನೊಳಗಿನ ಅಸಮಾನತೆಯ ಕಾರಣಕ್ಕಾಗಿ ಭಾರತ ಮತ್ತೆ ಸುದ್ದಿ ಮಾಡುತ್ತಿದೆ. ಬಿಡುಗಡೆಗೊಂಡ 2026ರ ವಿಶ್ವ ಅಸಮಾನತೆ ವರದಿಯ ಪ್ರಕಾರ, ಭಾರತದ ಜನಸಂಖ್ಯೆಯ ಶೇ. 1ರಷ್ಟು ಜನರು ದೇಶದ ಶೇ. 40ರಷ್ಟು ಸಂಪತ್ತನ್ನು ಕೈವಶ ಮಾಡಿಕೊಂಡಿದ್ದಾರೆ. ಭಾರತವು ವಿಶ್ವದಲ್ಲೇ ಅತಿ ಹೆಚ್ಚಿನ ಅಸಮಾನತೆಯನ್ನು ಹೊಂದಿರುವ ದೇಶವೆಂದು ವರದಿ ಹೇಳುತ್ತಿದೆ. ಭಾರತವು ಆರ್ಥಿಕವಾಗಿ ಸದೃಢವಾಗುತ್ತಿದೆ, ವಿಶ್ವದಲ್ಲೇ ನಾಲ್ಕನೇ ಶ್ರೀಮಂತ ದೇಶ ಎಂದೆಲ್ಲ ಪ್ರಧಾನಿ ಮೋದಿಯವರು ಹೇಳಿಕೆ ನೀಡುತ್ತಾ ಬರುತ್ತಿದ್ದರೂ ಅಧ್ಯಯನ ವರದಿಗಳು ತೆರೆದಿಡುತ್ತಿರುವ ವಾಸ್ತವ ಮಾತ್ರ ಬೇರೆಯೇ ಆಗಿದೆ. ಅದಾನಿ, ಅಂಬಾನಿಗಳ ಕಡೆಗೆ ಬೆರಳು ತೋರಿಸಿ ಈ ದೇಶದ ಆರ್ಥಿಕತೆಯನ್ನು ವೈಭವೀಕರಿಸುವ ನಮ್ಮ ನಾಯಕರಿಗೆ ಈ ವರದಿಯ ಅಂಶಗಳು ತೀರಾ ಕಹಿಯಾಗಿವೆ. ವರ್ಲ್ಡ್ ಇನ್‌ಇಕ್ವಾಲಿಟಿ ಲ್ಯಾಬ್ ಪ್ರಕಟಿಸಿರುವ ಅಧ್ಯಯನ ವರದಿಯ ಪ್ರಕಾರ ಶೇ. 10ರಷ್ಟು ಅತಿ ಶ್ರೀಮಂತರು ದೇಶದ ಒಟ್ಟು ಸಂಪತ್ತಿನ ಶೇ. 65ರಷ್ಟನ್ನು ಹೊಂದಿದ್ದಾರೆ. ಇದೇ ಸಂದರ್ಭದಲ್ಲಿ ಜನಸಂಖ್ಯೆಯ ತಳಸ್ತರದ ಶೇ. 50ರಷ್ಟು ಜನರು ಕೇವಲ ಶೇ. 15ರಷ್ಟು ಆದಾಯವನ್ನು ಪಡೆಯುತ್ತಿದ್ದಾರೆ. ಅಂದರೆ ಈ ವಿಶ್ವದಲ್ಲಿ ಬಡತನ ಎನ್ನುವುದು ಇಲ್ಲ, ಇದನ್ನು ಶ್ರೀಮಂತರಿಗಾಗಿಯೇ ಸೃಷ್ಟಿಸಲಾಗಿದೆ.ಇತ್ತೀಚೆಗೆ ಹೊರಬಿದ್ದ ಆಕ್ಸ್‌ಫಾಮ್ ವರದಿಯು ಈ ಅಸಮಾನತೆಯ ಭೀಕರತೆಯ ಇನ್ನಷ್ಟು ಮುಖಗಳನ್ನು ತೆರೆದಿಟ್ಟಿತ್ತು.

> **ಮಹಿಳಾ ಕಾರ್ಮಿಕರ ಪಾಲ್ಗೊಳ್ಳುವಿಕೆ ಕಳಪೆ**
>
> **ದೇಶದಲ್ಲಿ ಮಹಿಳಾ ಕಾರ್ಮಿಕರ ಪಾಲ್ಗೊಳ್ಳುವಿಕೆಯು ಶೇ. 15.7ರಷ್ಟಿದ್ದು ಇದು ಕಳಪೆ ಮಟ್ಟವಾಗಿದೆ. ಕಳೆದೊಂದು ದಶಕದಲ್ಲಿ ಮಹಿಳಾ ಕಾರ್ಮಿಕರ ಪಾಲ್ಗೊಳ್ಳುವಿಕೆಯಲ್ಲಿ ಯಾವುದೇ ಹೆಚ್ಚಳ ಕಂಡು ಬಂದಿಲ್ಲ ಎಂದು ವರದಿ ಹೇಳುತ್ತಿದೆ. ಇದು ಕೇವಲ ಭಾರತಕ್ಕೆ ಮಾತ್ರ ಸೀಮಿತವಲ್ಲ. ವಿಶ್ವದ 0.001ರಷ್ಟು ಶ್ರೀಮಂತರು ವಿಶ್ವ ಜನಸಂಖ್ಯೆಯ ಶೇ. 50ರಷ್ಟು ಜನರ ಒಟ್ಟು ಸಂಪತ್ತಿನ ಮೂರು ಪಟ್ಟನ್ನು ಹೊಂದಿದ್ದಾರೆ ಎಂದು ವರದಿ ಹೇಳುತ್ತಿದೆ.**

ಭಾರತದಲ್ಲಿ 300ಕ್ಕೂ ಅಧಿಕ ಬಿಲಿಯಾಧಿಪತಿಗಳು ಇದ್ದಾರೆ. ವರ್ಷದಿಂದ ವರ್ಷಕ್ಕೆ ಇವರ ಸಂಖ್ಯೆ ಹೆಚ್ಚುತ್ತಿದೆ. ಇದೇ ಸಂದರ್ಭದಲ್ಲಿ ಇನ್ನೊಂದೆಡೆ ಭಾರತವು ಹಸಿವಿಗಾಗಿ ವಿಶ್ವದಲ್ಲೇ ನಂ. 1 ಎಂದು ಗುರುತಿಸಲ್ಪಡುತ್ತಿದೆ. ಈ ದೇಶದಲ್ಲಿ ಆರು ಕೋಟಿ ಜನರು ಪ್ರತಿ ವರ್ಷ ಆರೋಗ್ಯ ವೆಚ್ಚದ ಕಾರಣದಿಂದಾಗಿಯೇ ಬಡತನಕ್ಕೆ ತಳ್ಳಲ್ಪಡುತ್ತಿದ್ದಾರೆ. ಭಾರತದ ಅಸಮಾನತೆ ಎಷ್ಟು ಭೀಕರವಾಗಿದೆ ಎಂದರೆ ಇಲ್ಲಿನ ಪ್ರಮುಖ ಉಡುಪು ಕಂಪೆನಿಯ ಉನ್ನತ ವೇತನ ಪಡೆಯುವ ಕಾರ್ಯನಿರ್ವಾಹಕರು ಒಂದು ವರ್ಷದಲ್ಲಿ ಗಳಿಸುವ ಹಣವನ್ನು ಗ್ರಾಮೀಣ ಭಾರತದ ಕನಿಷ್ಠ ವೇತನದ ಕೆಲಸಗಾರ ಗಳಿಸಲು 941 ವರ್ಷಗಳು ಬೇಕಾಗುತ್ತದೆ. ಹಾಗೆಂದು ಇಲ್ಲಿ ಶ್ರೀಮಂತರಷ್ಟೇ ತೆರಿಗೆಯನ್ನು ಕಟ್ಟುತ್ತಾರೆ, ಬಡವರು ಶ್ರೀಮಂತರ ತೆರಿಗೆಯಿಂದ ಬದುಕುತ್ತಿದ್ದಾರೆ ಎಂದರೆ ಅದು ಸುಳ್ಳು ಆಕ್ಸ್ ಫಾಮ್ ವರದಿಯ ಪ್ರಕಾರ, ಭಾರತದ ಜನಸಂಖ್ಯೆಯ ಶೇ. 50ರಷ್ಟು ಬಡವರ್ಗ ಅತಿ ಹೆಚ್ಚು ಪರೋಕ್ಷ ತೆರಿಗೆಯನ್ನು ಕಟ್ಟುತ್ತಿದೆ. 2021–22 ಆರ್ಥಿಕ ವರ್ಷದಲ್ಲಿ ಜಿಎಸ್‌ಟಿಯಿಂದ 14.83 ಲಕ್ಷ ಕೋಟಿ ರೂಪಾಯಿ ತೆರಿಗೆ ಸಂಗ್ರಹವಾಗಿದೆ. ಇದರಲ್ಲಿ ದೊಡ್ಡ ಪಾಲನ್ನು ಈ ದೇಶದ ಬಡ ಮತ್ತು ಮಧ್ಯಮ ವರ್ಗ ನೀಡಿದೆ. ದೇಶದ ಶೇ. 10ರಷ್ಟಿರುವ ಅತಿ ಶ್ರೀಮಂತರು ಜಿಎಸ್‌ಟಿ ರೂಪದಲ್ಲಿ ಪಾವತಿಸಿದ ತೆರಿಗೆ ಶೇ. 3ರಷ್ಟು ಮಾತ್ರ. ಭಾರತದಲ್ಲಿ ಕಾರ್ಪೊರೇಟ್ ತೆರಿಗೆಯನ್ನು ಭಾರೀ ಪ್ರಮಾಣದಲ್ಲಿ ಕಡಿಮೆ ಮಾಡಲಾಗಿದೆ ಮಾತ್ರವಲ್ಲ, ಅವರಿಗೆ ಭತ್ಯೆ ರಿಯಾಯಿತಿಗಳನ್ನು ಹೆಚ್ಚಿಸಿರುವ ಅಂಶವನ್ನು ಅಧ್ಯಯನ ವರದಿ ಬಹಿರಂಗ ಪಡಿಸಿವೆ.ಕೊರೋನ, ಲಾಕ್‌ಡೌನ್ ಕಾಲದಲ್ಲಿ ಸಾವಿರಾರು ಉದ್ಯಮಗಳು ಮುಚ್ಚಿದ್ದವು. ದೊಡ್ಡ ಪ್ರಮಾಣದಲ್ಲಿ ವ್ಯಾಪಾರ, ಉದ್ದಿಮೆಗಳು ನಷ್ಟ ಅನುಭವಿಸಿದವು. ಮಧ್ಯಮ ವರ್ಗ ಮತ್ತು ಬಡವರ್ಗ ಇದರ ನೇರ ಪರಿಣಾಮಗಳನ್ನು ಅನುಭವಿಸಿದವು. ಆದರೆ ಇದೇ ಸಂದರ್ಭದಲ್ಲಿ ಅದಾನಿ, ಅಂಬಾನಿಗಳು ವಿಶ್ವದ ಶ್ರೀಮಂತರ ಪಟ್ಟಿಯಲ್ಲಿ ರಾರಾಜಿಸುತ್ತಿದ್ದರು. ಲಾಕ್‌ಡೌನ್, ಕೊರೋನ ಅವರ ಮೇಲೆ ಯಾವ ಪರಿಣಾಮವನ್ನೂ ಬೀರಿರಲಿಲ್ಲ. ಲಸಿಕೆ ವ್ಯಾಪಾರದಿಂದಲೇ ಕೆಲವು ಕಾರ್ಪೊರೇಟ್ ಉದ್ಯಮಿಗಳು ತಮ್ಮ ಸಂಪತ್ತನ್ನು ಹೆಚ್ಚಿಸಿಕೊಂಡರು. ಈ ದೇಶದ ತೆರಿಗೆ ಹಣವನ್ನು ಸರಕಾರ ಲಸಿಕೆಯ ಮೇಲೆ ಸುರಿಯಿತು. ಅದರಿಂದ ದೇಶದ ಜನತೆಯ ಆರೋಗ್ಯಕ್ಕೆ ಎಷ್ಟರಮಟ್ಟಿಗೆ ಉಪಕಾರವಾಯಿತು ಎನ್ನುವುದು ಇನ್ನೂ ಸ್ಪಷ್ಟವಿಲ್ಲ. ಆದರೆ ಬೆರಳಣಿಕೆಯ ಕೆಲವು ಕಂಪೆನಿಗಳು ಅಪಾರ ಲಾಭ ಮಾಡಿಕೊಂಡವು. ಕೊರೋನ ಕಾಲದಲ್ಲಿ ಬಡವರು ಮತ್ತು ಶ್ರೀಮಂತರ ನಡುವಿನ ಅಂತರ ಹೆಚ್ಚಿತು. ಇದು ಕೇವಲ ಆರ್ಥಿಕ ಕ್ಷೇತ್ರದಲ್ಲಿ ಮಾತ್ರವಲ್ಲ ಶೈಕ್ಷಣಿಕ ಕ್ಷೇತ್ರದಲ್ಲೂ ಉಳ್ಳವರು–ಇಲ್ಲದವರು ಎನ್ನುವ ವ್ಯತ್ಯಾಸ ಕಣ್ಣಿಗೆ ರಾಚುವಂತೆ ಕಾಣುತ್ತಿತ್ತು. ಉಳ್ಳವರಷ್ಟೇ ಶಿಕ್ಷಣ ಪಡೆಯಲು ಅರ್ಹರಾದರು. ಅಸಮಾನತೆ ಅಳಿಯದೆ ದೇಶದ ಆಮೂಲಾಗ್ರ ಅಭಿವೃದ್ಧಿ ಸಾಧ್ಯವಿಲ್ಲ. ಈ ನಿಟ್ಟಿನಲ್ಲಿ ಸಂಪತ್ತಿನ ಸಮಾನ ಹಂಚಿಕೆಗೆ ಸರಕಾರ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಇಲ್ಲವಾದರೆ ಹೆಚ್ಚುತ್ತಿರುವ ಜನಸಂಖ್ಯೆಯ ಕಡೆಗೆ ಬೆರಳು ತೋರಿಸಿ, ಎಂದಿನಂತೆ ತನ್ನ ತಪ್ಪುಗಳನ್ನು ಮರೆಮಾಚಬೇಕಾಗುತ್ತದೆ. ಈ ದೇಶದ ಪ್ರಾಕೃತಿಕ ಸಂಪತ್ತಿಗೆ ಹೋಲಿಸಿದರೆ ಇಲ್ಲಿರುವ ಜನಸಂಖ್ಯೆ ಯಾವತ್ತೂ ಒಂದು ಹೊರೆಯಲ್ಲ.



# ಟೊಮೇಟೊ ಬಳಸುವುದರಿಂದ ಕಿಡ್ನಿ ಸ್ಟೋನ್ ಬರುತ್ತಾ?

**ವಯಸ್ಕರಲ್ಲಿ ಮೂತ್ರಪಿಂಡದ ಕಲ್ಲುಗಳ ಸಮಸ್ಯೆ ಹೆಚ್ಚು**

ಟೊಮೇಟೊ ತಿನ್ನುವುದರಿಂದ ಕಿಡ್ನಿಗಳಲ್ಲಿ ಸ್ಟೋನ್ ಉಂಟಾಗುತ್ತವೆ ಎಂದು ಹಲವಾರು ಅಂದುಕೊಂಡಿರುತ್ತಾರೆ. ಮೂತ್ರಪಿಂಡದ ಕಲ್ಲುಗಳಿರುವ ಜನರು ಈ ಹಣ್ಣಿನಿಂದ ದೂರವಿರುವುದನ್ನು ನಾವು ನೋಡಿದ್ದೇವೆ. ಆದರೆ ಟೊಮೇಟೊ ತಿನ್ನುವುದರಿಂದ ನಿಜವಾಗಿಯೂ ಮೂತ್ರಪಿಂಡದ ಕಲ್ಲುಗಳು ಉಂಟಾಗುತ್ತವೆಯೇ? ಕೆಲವೊಮ್ಮೆ ಇದ್ದಕ್ಕಿದಂತೆ ಮೂತ್ರಪಿಂಡಗಳ ಅಥವಾ ಕಿಡ್ನಿಗಳ ಕಾರ್ಯ ನಿರ್ವಹಣೆಯಲ್ಲಿ ತೊಂದರೆಗಳು ಕಾಣಿಸಿಕೊಳ್ಳುತ್ತವೆ ಇದರಲ್ಲಿ ಕಿಡ್ನಿ ಕಲ್ಲ ಅಥವಾ ಕಿಡ್ನಿಗಳಲ್ಲಿ ಸ್ಟೋನ್ ಕೂಡ ಒಂದು. ಕೆಲವರಿಗೆ ತಾವು ಅನುಸರಿಸುತ್ತಿರುವ ಆಹಾರ ಪದ್ಧತಿಯ ಕಾರಣಗಳಿಂದಾಗಿ ಈ ರೀತಿಯ ಸಮಸ್ಯೆಗಳು ಕಾಣಿಸಿಕೊಂಡರೆ, ಇನ್ನು ಕೆಲವರಿಗೆ ಅವರು ಅನುಸರಿಸುತ್ತಿರುವ ಜಡ ಜೀವನಶೈಲಿ, ದುರಾಭ್ಯಾಸಗಳಿಂದಾಗಿ ಈ ರೀತಿಯ ಸಮಸ್ಯೆ ಕಾಣಿಸಿಕೊಳ್ಳುವ ಸಾಧ್ಯತೆಗಳು ಇರುತ್ತವೆ. ಕಿಡ್ನಿಗಳಲ್ಲಿ ನೋವು ಕಾಣಿಸಿಕೊಂಡರೆ ಅದು ಹೆರಿಗೆ ನೋವಿಗಿಂತ ಭಯಾನಕವಾಗಿರುತ್ತದೆ ಎಂದು ಈ ಬಳಲುತ್ತಿರುವವರೇ ಹೇಳುತ್ತಾರೆ. ಹೀಗಾಗಿ ಕಿಡ್ನಿಗಳಲ್ಲಿ ಸಮಸ್ಯೆ ಉಂಟಾಗಬಾರದು ಎಂದರೆ ಕೆಲವೊಂದು ಊಟತಿಂಡಿ ಜೀವನಶೈಲಿಯ ವಿಚಾರದಲ್ಲಿ ಮುನ್ನೆಚ್ಚರಿಕೆ ವಹಿಸಬೇಕು ಎನ್ನುತ್ತಾರೆ ತಜ್ಞರು

**ಅಡುಗೆಯಲ್ಲಿ ಟೊಮೇಟೊ ಬಳಸುವುದರಿಂದ ಕಿಡ್ನಿಗಳಲ್ಲಿ ಸ್ಟೋನ್ ಬರುತ್ತಾ? :** ಇತ್ತೀಚಿನ ವರ್ಷಗಳಲ್ಲಿ, ಮಕ್ಕಳು ಮತ್ತು ವಯಸ್ಕರಲ್ಲಿ ಮೂತ್ರಪಿಂಡದ ಕಲ್ಲುಗಳ ಸಮಸ್ಯೆ ಹೆಚ್ಚುತ್ತಿದೆ. ಮೂತ್ರಪಿಂಡದ ನೋವು, ಮೂತ್ರ ವಿಸರ್ಜಿಸುವಾಗ ಉರಿ, ಕಿರಿಕಿರಿ ಮುಂತಾದ ಲಕ್ಷಣಗಳು ಇದ್ದಕ್ಕಿದ್ದಂತೆ ಕಾಣಿಸಿಕೊಂಡಾಗ, ಬಹುತೇಕ ಜನರು ತಮಗೆ ಮೂತ್ರಪಿಂಡದ ಕಲ್ಲು ಅಥವಾ ಕಿಡ್ನಿಗಳಲ್ಲಿ ಸ್ಟೋನ್ ಆಗಿರ ಬಹುದು ಅಂದುಕೊಳ್ಳುತ್ತಾರೆ. ಟೊಮೇಟೊ ಹಣ್ಣಿನಲ್ಲಿ ಆಕ್ಸಲೇಟ್ ಅಂಶ ಹೆಚ್ಚಾಗಿರುವ ಕಾರಣ, ಈ ಹಣ್ಣನ್ನು ಅಡುಗೆಯಲ್ಲಿ ಹೆಚ್ಚಾಗಿ ಬಳಸುವುದರಿಂದ ಮೂತ್ರಪಿಂಡದ ಕಲ್ಲು ಅಥವಾ ಕಿಡ್ನಿ ಸ್ಟೋನ್ ಬರುತ್ತವೆ ಎಂದು ಬಹುತೇಕರ ಅಂದುಕೊಂಡಿರುತ್ತಾರೆ. ಆದ್ದರಿಂದ, ಮೂತ್ರಪಿಂಡದ ಕಲ್ಲುಗಳಿರುವ ಅಥವಾ ಅಪಾಯದಲ್ಲಿರುವ ಜನರು ಟೊಮೇಟೊಗಳಿಂದ ದೂರ ಇರುವುದನ್ನು ನಾವು ಹೆಚ್ಚಾಗಿ ನೋಡುತ್ತೇವೆ. ಆದರೆ ಟೊಮೇಟೊ ತಿನ್ನುವುದರಿಂದ ನಿಜವಾಗಿಯೂ ಮೂತ್ರಪಿಂಡದ ಕಲ್ಲುಗಳು ಬರುತ್ತವೆಯೇ? ತಜ್ಞರಿಂದ ಇದರ ಬಗ್ಗೆ ಇನ್ನಷ್ಟು ತಿಳಿದುಕೊಳ್ಳೋಣ...

**ಟೊಮೇಟೊ ಹಣ್ಣಿನ ಪ್ರಯೋಜನಗಳ ಬಗ್ಗೆ ನೋಡೋಣ** : ಕೆಂಪು ಸುಂದರಿ ಟೊಮೇಟೊ ಹಣ್ಣಿನ ಪ್ರಯೋಜನಗಳ ಬಗ್ಗೆ ನಮಗೆಲ್ಲಾ ಗೊತ್ತೇ ಇದೆ. ಪ್ರಮುಖವಾಗಿ ಈ ಹಣ್ಣಿನಲ್ಲಿ ಕಂಡುಬರುವ ವಿಟಮಿನ್ ಸಿ, ಪೊಟ್ಯಾಸಿ ಯಮ್ ಮತ್ತು ಲೈಕೋಪೀನ್ (ಆಂಟಿಆಕ್ಸಿಡೆಂಟ್‌ಗಳು) ನಂತಹ ವಿಶಿಷ್ಟ ಪೌಷ್ಟಿಕಾಂಶದ ಪ್ರಯೋಜನಗಳಿಗೆ ಹೆಸರುವಾಸಿಯಾಗಿದೆ, ಇವು ಆರೋಗ್ಯವನ್ನು ಉತ್ಕೃಷ್ಟಗೊಳಿಸುವ ಗುಣಲಕ್ಷಣಗಳಿಗೆ ಹೆಸರುವಾಸಿಯಾ ಗಿದೆ.

ಪೊಟ್ಯಾಸಿಯಮ್ ಇರುವಿಕೆಯು ಹೃದಯದ ಆರೋಗ್ಯವನ್ನು ಸುಧಾರಿಸಲು ಸಹಾಯ ಮಾಡುತ್ತದೆ ಮತ್ತು ರಕ್ತದೊತ್ತಡವನ್ನು ನಿಯಂತ್ರಿಸಲು ಸಹಾಯ ಮಾಡುತ್ತದೆ ಮತ್ತು ಕೊಕ್ಕರೆಗಳು ಹೃದಯರಕ್ತನಾಳದ ಕಾಯಿಲೆಗಳ ಅಪಾಯವನ್ನು ಕಡಿಮೆ ಮಾಡುತ್ತದೆ. ಲೈಕೋಪೀನ್ ಇರುವಿಕೆಯು ದೇಹವನ್ನು ಕೆಲವು ಕ್ಯಾನ್ಸರ್‌ಗಳಿಂದ ರಕ್ಷಿಸುತ್ತದೆ ಮತ್ತು ಉರಿಯೂತವನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ.

ವಾಸ್ತವ ವಾಗಿ, ಟೊಮೇಟೊ ಹಣ್ಣಿನಲ್ಲಿ ಸಣ್ಣ ಪ್ರಮಾಣದಲ್ಲಿ ವಿಟಮಿನ್ ಕೆ, ಫೋಲೇಟ್ ಮತ್ತು ಫೈಬರ್ ಅಂಶ ಕೂಡ ಕಾಣಿಸಿಕೊಳ್ಳುವುದರಿಂದ ಇದು ಮೂಳೆಯ ಆರೋಗ್ಯ, ಕೆಂಪು ರಕ್ತ ಕಣಗಳ ರಚನೆಯನ್ನು ಬೆಂಬಲಿಸುತ್ತದೆ ಮತ್ತು ಜೀರ್ಣ ಕ್ರಿಯೆಯನ್ನು ಸುಧಾರಿಸುತ್ತದೆ. ಆದರೂ ಇಷ್ಟೆಲ್ಲಾ ಪ್ರಯೋಜನಗಳನ್ನು ಒಳಗೊಂಡಿರುವ ಟೋಮೆಟೊ ಹಣ್ಣಿನ ಬಗ್ಗೆ ಈ ಅಪಾದ ಏಕೆ? ನೋಡೋಣ ಬನ್ನಿ

**ಈ ಬಗ್ಗೆ ತಜ್ಞರು ಏನು ಹೇಳುತ್ತಾರೆ :** ತಜ್ಞರ ಪ್ರಕಾರ, ಟೊಮೇಟೊ ಮೂತ್ರಪಿಂಡದ ಕಲ್ಲುಗಳನ್ನು ಉಂಟುಮಾಡುತ್ತದೆ ಎಂಬುದಕ್ಕೆ ಯಾವುದೇ ವೈಜ್ಞಾನಿಕ ಪುರಾವೆಗಳಿಲ್ಲ. ಟೊಮೇಟೊ ಹಣ್ಣಿನಲ್ಲಿ ಆಕ್ಸಲೇಟ್ ಅಂಶ ಕಂಡು ಬಂದರೂ, ಅದರ ಪ್ರಮಾಣವು ತುಂಬಾನೇ ಕಡಿಮೆ ಇರುಯತ್ತದೆ. 100 ಗ್ರಾಂ ಟೊಮೇಟೊದಲ್ಲಿ ಸುಮಾರು 5 ಮಿಗ್ರಾಂ ಜೀರ್ಣವಾಗುವ ಆಕ್ಸಲೇಟ್ ಇರುತ್ತದೆ. ಈ ಪ್ರಮಾಣವು ದೇಹಕ್ಕೆ ಹಾನಿಕಾರಕವಲ್ಲ ಎಂದು ತಜ್ಞರು ಹೇಳುತ್ತಾರೆ.

> **ಸರಿಯಾಗಿ ನೀರು ಕುಡಿಯದೇ ಇದ್ದರೂ ಕಿಡ್ನಿಗಳಲ್ಲಿ ಸ್ಟೋನ್ ಆಗುತ್ತೆ**
>
> **ಇದರರ್ಥ ಟೊಮೇಟೊ ತಿನ್ನುವುದು ಮೂತ್ರಪಿಂಡದ ಕಲ್ಲುಗಳಿಗೆ ಪ್ರಾಥಮಿಕ ಕಾರಣವಲ್ಲ. ನಿರ್ಜಲೀಕರಣವು ಮೂತ್ರಪಿಂಡದ ಕಲ್ಲುಗಳ ರಚನೆಗೆ ಪ್ರಮುಖ ಕಾರಣವಾಗಿದೆ. ನೀವು ದಿನವಿಡೀ ಸಾಕಷ್ಟು ನೀರು ಕುಡಿಯದಿದ್ದರೆ, ತ್ಯಾಜ್ಯ ಉತ್ಪನ್ನಗಳು ದೇಹದಿಂದ ಸರಿಯಾಗಿ ಹೊರಹಾಕಲ್ಪಡುವುದಿಲ್ಲ ಮತ್ತು ಮೂತ್ರಪಿಂಡಗಳಲ್ಲಿ ಸಂಗ್ರಹವಾಗುತ್ತವೆ. ಇವು ಕ್ಯಾಲ್ಸಿಯಂ ಆಕ್ಸಲೇಟ್ ಅಥವಾ ಇತರ ರೀತಿಯ ಹರಳುಗಳನ್ನು ರೂಪಿಸಬಹುದು, ಕಲ್ಲುಗಳನ್ನು ರೂಪಿಸುತ್ತವೆ. ನೀವು ಪ್ರತಿದಿನ ಕನಿಷ್ಠ 2.5 ರಿಂದ 3 ಲೀಟರ್ ನೀರನ್ನು ಕುಡಿಯದಿದ್ದರೆ ಮೂತ್ರಪಿಂಡದ ಕಲ್ಲುಗಳು ರೂಪುಗೊಳ್ಳುವ ಸಾಧ್ಯತೆ ಹೆಚ್ಚು. ಕೆಲವು ಕಿಣ್ವಗಳ ಅಸಮರ್ಪಕ ಕಾರ್ಯ, ಚಯಾಪಚಯ ಅಸ್ವಸ್ಥತೆಗಳು ಮತ್ತು ಮೂತ್ರಪಿಂಡದ ಕಲ್ಲುಗಳ ಕುಟುಂಬದ ಇತಿಹಾಸ ಕೂಡ ಮೂತ್ರಪಿಂಡದ ಕಲ್ಲುಗಳಿಗೆ ಕಾರಣವಾಗಬಹುದು.**

# ಮಳೆಗಾಲದಲ್ಲಿ ತರಕಾರಿಗಳು ಬೇಗ ಹಾಳಾಗ್ತಿದೆಯಾ..?



ಮಳೆಗಾಲದಲ್ಲಿ ತರಕಾರಿಗಳನ್ನು ಸಂಗ್ರಹಿಸುವುದು ಸಂರಕ್ಷಿಸುವುದು ಒಂದು ಸವಾಲು. ತರಕಾರಿಗಳು ತೇವವಾಗಿರುವುದರಿಂದ ಮತ್ತು ತುಂತುರು ಮಳೆಯಿಂದಾಗಿ ಬೇಗನೆ ಕೆಡಬಹುದು. ಆದರೆ ಈ ಸಲಹೆಗಳನ್ನು ಅನುಸರಿಸುವ ಮೂಲಕ, ಮಳೆಗಾಲದಲ್ಲಿ ನಿಮ್ಮ ತರಕಾರಿಗಳು ಹಾಳಾಗುವ ಸಾಧ್ಯತೆಗಳನ್ನು ಕಡಿಮೆ ಮಾಡಬಹುದು. ಮಳೆಗಾಲದಲ್ಲಿ ಪ್ರಕೃತಿಯನ್ನು ವೀಕ್ಷಿಸುವುದೇ ಒಂದು ಹಬ್ಬ. ಹಚ್ಚಹಸಿರಿನಿಂದ ಕಂಗೊಳಿಸುವ ಮರಗಿಡಗಳು ತಾಜಾ ಅನುಭವವನ್ನು ನೀಡುತ್ತದೆ. ಆದರೆ ಮಳೆಗಾಲದಲ್ಲಿ ಆಹಾರ ಸಂಗ್ರಹಿಸಿಡುವುದು ಕಷ್ಟ. ಹಾಗೂ ತೇವಾಂಶವಿರುವುದರಿಂದ ಅಕ್ಕಿ, ಧಾನ್ಯಗಳನ್ನು ಸಂಗ್ರಹಿಸುವುದು, ತರಕಾರಿಗಳನ್ನು ಸಂಗ್ರಹಿಸುವುದು ಸವಾಲಿನ ಕೆಲಸ. ತರಕಾರಿಗಳು ಬೇಗನೆ ಕೊಳೆತುಹೋಗುವ ಸಾಧ್ಯತೆಗಳಿರುತ್ತವೆ. ಕೆಲವು ಸಲಹೆಗಳನ್ನು ಪಾಲಿಸುವ ಮೂಲಕ ತರಕಾರಿಗಳನ್ನು ತಾಜಾವಾಗಿಡಬಹುದು. ನೀವು ತರಕಾರಿಗಳನ್ನು ಮನೆಗೆ ತಂದ ತಕ್ಷಣ ಅವುಗಳನ್ನು ಸರಿಯಾಗಿ ಸಂಸ್ಕರಿಸುವುದು ಮುಖ್ಯ ಹಾಗೂ ಇದರಿಂದ ಅವು ಸಾಧ್ಯವಾದಷ್ಟು ತಾಜಾವಾಗಿರುತ್ತವೆ. ಮಳೆಗಾಲದಲ್ಲಿ ತರಕಾರಿಗಳನ್ನು ಸಂರಕ್ಷಿಸಲು ನೀವು ಪ್ರಯತ್ನಿಸಬಹುದಾದ 8 ಸಲಹೆಗಳು ಇಲ್ಲಿವೆ.



**ತರಕಾರಿಗಳನ್ನು ತೊಳೆಯಿರಿ:** ಮಳೆಗಾಲದಲ್ಲಿ ತರಕಾರಿಗಳು ಕೀಟಗಳು ಮತ್ತು ಬ್ಯಾಕ್ಟೀರಿಯಾಗಳಿಗೆ ಆಶ್ರಯ ನೀಡುವ ಸಾಧ್ಯತೆ ಹೆಚ್ಚು, ಆದ್ದರಿಂದ ಅವುಗಳನ್ನು ಸಂಗ್ರಹಿಸುವ ಮೊದಲು, ಅವುಗಳನ್ನು ತೊಳೆಯಿರಿ ಮತ್ತು ಮೇಲಾಗಿ ಗಟ್ಟಿಯಾದ ತರಕಾರಿಗಳನ್ನು ಉಪ್ಪು ನೀರಿನ ದ್ರಾವಣದಲ್ಲಿ ನೆನೆಸಿ ಚೆನ್ನಾಗಿ ಒಣಗಿಸಿ ಫ್ರಿಜ್ ಅಥವಾ ಕಪಾಟಿನಲ್ಲಿ ಸಂಗ್ರಹಿಸಿ.

**ಪ್ಲಾಸ್ಟಿಕ್ ಕವರ್‌ನಲ್ಲಿ ರಂಧ್ರಗಳನ್ನು ಮಾಡಿ:** ನೀವು ನಿಮ್ಮ ಆಹಾರವನ್ನು ಪ್ಲಾಸ್ಟಿಕ್ ಚೀಲಗಳಲ್ಲಿ ವಿಶೇಷವಾಗಿ ಮೂಲಂಗಿ ಅಥವಾ ಕ್ಯಾರೆಟ್ ನಂತಹ ಬೇರು ತರಕಾರಿಗಳನ್ನು ಸಂಗ್ರಹಿಸುತ್ತಿದ್ದರೆ, ಚೀಲದಲ್ಲಿ ಕೆಲವು ರಂಧ್ರಗಳನ್ನು ಮಾಡಿ ಇದರಿಂದ ಹೆಚ್ಚುವರಿ ತೇವಾಂಶವು ಒಳಗೆ ಸಂಗ್ರಹವಾಗದೆ ಹೊರಬರುತ್ತದೆ, ಇದು ತರಕಾರಿಗಳು ಬೇಗನೆ ಹಾಳಾಗುವುದನ್ನು ತಪ್ಪಿಸುತ್ತದೆ. ಹೆಚ್ಚಿನ ಗಾಳಿಯ ಅಗತ್ಯವಿರುವ ಹಸಿಮೆಣಸು ಮತ್ತು ಕ್ಯಾಪ್ಸಿಕಂಗಳಿಗೂ ಇದು ಸಹಾಯಕವಾಗಿದೆ.

**ಸೊಪ್ಪು ತರಕಾರಿಗಳ ಬೇರುಗಳನ್ನು ಕತ್ತರಿಸಿ** :ಮಳೆಗಾಲದಲ್ಲಿ ಸೊಪ್ಪು ತರಕಾರಿಗಳನ್ನು ಸಂಗ್ರಹಿಸುವುದು ಸ್ವಲ್ಪ ಕಷ್ಟ. ಏಕೆಂದರೆ ಅವು ತೇವಾಂಶ ಹೊಂದಿರುವುದರಿಂದ ಬೇಗನೆ ಕೊಳೆತುಹೋಗುತ್ತದೆ. ನೀವು ಸೊಪ್ಪು ತರಕಾರಿಗಳನ್ನು ಮನೆಗೆ ತಂದಿದ್ದರೆ ಅದರ ಬೇರುಗಳನ್ನು ಕತ್ತರಿಸಿ ಎಲೆಗಳನ್ನು ಚೆನ್ನಾಗಿ ತೊಳೆಯಿರಿ, ಇದರಿಂದಾಗಿ ಹೆಚ್ಚುವರಿ ಮಣ್ಣು ಮತ್ತು ಕೊಳೆಯನ್ನು ತೆಗೆಯಬಹುದು. ಅವುಗಳನ್ನು ಮತ್ತಷ್ಟು ಸುರಕ್ಷಿತವಾಗಿಡಲು ಎಲೆಗಳನ್ನು ರೆಫ್ರಿಜಿರೇಟರ್ ಸಂಗ್ರಹಿಸುವ ಮೊದಲು ಬಟ್ಟೆ ಅಥವಾ ಕಾಗದದ ಟವಲ್ನಲ್ಲಿ ಸುತ್ತಿ.

**ನೈಸರ್ಗಿಕ ಸಂರಕ್ಷಕಗಳ ಬಳಕೆ:** ಬೆಳ್ಳುಳ್ಳಿ, ಬೇವಿನ ಎಲೆಗಳು, ಕರಿಬೇವಿನ ಎಲೆಗಳಂತಹ ನೈಸರ್ಗಿಕ ಸಂರಕ್ಷಕಗಳು ತರಕಾರಿಗಳ ತಾಜಾತನವನ್ನು ಹೆಚ್ಚಿಸುವಲ್ಲಿ ಹೆಚ್ಚು ಪರಿಣಾಮಕಾರಿಯಾಗುತ್ತವೆ, ವಿಶೇಷವಾಗಿ ಮಳೆಗಾಲದಲ್ಲಿ ಆದ್ರ್ರತೆಯ ಮಟ್ಟ ಹೆಚ್ಚಿರುವಾಗ ಮತ್ತು ಹಾಳಾಗುವ ಅಪಾಯ ಹೆಚ್ಚಾದಾಗ. ಈ ನೈಸರ್ಗಿಕ ವಸ್ತುಗಳು ಅಂತರ್ಗತ ಶಿಲೀಂಧ್ರ ವಿರೋಧಿ ಮತ್ತು ಬ್ಯಾಕ್ಟೀರಿಯಾ ವಿರೋಧಿ ಗುಣಗಳನ್ನು ಹೊಂದಿದ್ದು, ತರಕಾರಿಗಳ ಮೇಲೆ ಬ್ಯಾಕ್ಟೀರಿಯಾಗಳ ಬೆಳವಣಿಗೆಯನ್ನು ತಡೆಯಲು ಸಹಾಯ ಮಾಡುತ್ತದೆ.

**ಎಲ್ಲವನ್ನೂ ಒಟ್ಟಿಗೆ ಸಂಗ್ರಹಿಸಬೇಡಿ:** ಹಣ್ಣುಗಳನ್ನು ಮತ್ತು ತರಕಾರಿಗಳನ್ನು ಒಟ್ಟಿಗೆ ಸಂಗ್ರಹಿಸಬಾರದು. ಹಣ್ಣುಗಳನ್ನು ಮಾಗಿಸುವುದರಿಂದ ಎಥಿಲೀನ್ ಅನಿಲ ಬಿಡುಗಡೆಯಾಗುವುದರಿಂದ ಅವು ಬೇಗನೆ ಹಾಳಾಗುತ್ತವೆ. ಎಥಿಲೀನ್ ಒಂದು ನೈಸರ್ಗಿಕ ಸಸ್ಯ ಹಾರ್ಮೋನ್ ಆಗಿದ್ದು ಅದು ಮಾಗಿದ ಪ್ರಕ್ರಿಯೆಯನ್ನು ನಿಯಂತ್ರಿಸುತ್ತದೆ. ಇದು ನಿಮ್ಮ ತರಕಾರಿಗಳ ಶೆಲ್ಫ್ ಜೀವಿತಾವಧಿಯನ್ನು ಕಡಿಮೆ ಮಾಡಲು ಕಾರಣವಾಗಬಹುದು. ಹಣ್ಣುಗಳು ಮತ್ತು ತರಕಾರಿಗಳನ್ನು ಪ್ರತ್ಯೇಕವಾಗಿ ಸಂಗ್ರಹಿಸುವುದು ಸೂಕ್ತ.

> **ಆಲೂಗಡ್ಡೆ ಈರುಳ್ಳಿ ಹೀಗೆ ಸಂಗ್ರಹಿಸಿ**
>
> **ಎಲ್ಲರ ಅಡುಗೆ ಮನೆಯಲ್ಲೂ ಆಲೂಗಡ್ಡೆ ಮತ್ತು ಈರುಳ್ಳಿ ಇದ್ದೇ ಇರುತ್ತದೆ. ಆದರೆ ಮಳೆಗಾಲದಲ್ಲಿ ಅವುಗಳನ್ನು ಸರಿಯಾಗಿ ಸಂರಕ್ಷಿಸಲು ನಾವು ಹೆಚ್ಚುವರಿ ಕಾಳಜಿ ವಹಿಸಬೇಕಾಗುತ್ತದೆ. ಆಲೂಗಡ್ಡೆ ಮತ್ತು ಈರುಳ್ಳಿ ಮೊಳಕೆಯೊಡೆಯುವುದನ್ನು ತಡೆಯಲು ಒಣ ಸ್ಥಳದಲ್ಲಿ ಸಂಗ್ರಹಿಸುವುದು ಮುಖ್ಯ. ಅವುಗಳನ್ನು ರೆಫ್ರಿಜಿರೇಟರ್ ಸಂಗ್ರಹಿಸಿದರೆ ಅವುಗಳ ರುಚಿಯನ್ನು ಕಡಿಮೆ ಮಾಡಬಹುದು. ಶೇಖರಣೆಗೆ ಸಾಮಾನ್ಯ ಬುಟ್ಟಿ ಸೂಕ್ತವಾಗಿದೆ. ಆಲೂಗಡ್ಡೆಯ ಶೆಲ್ಫ್ ಜೀವಿತಾವಧಿಯನ್ನು ಹೆಚ್ಚಿಸಲು ಕಾಗದದ ಚೀಲದಲ್ಲಿ ಸಂಗ್ರಹಿಸಬಹುದು.**

# ಕಾನೂನು ಹೋರಾಟ

## ನಿಖಿಲ್ ಕುಮಾರಸ್ವಾಮಿ ಎಚ್ಚರಿಕೆ

• ಉದಯವಾಹಿನಿ, ಬೆಂಗಳೂರು


ದ್ವೇಷ ಭಾಷಣ ತಡೆಗೆ ಕಾಂಗ್ರೆಸ್ ಸರ್ಕಾರ ಕಾನೂನು ತರಲು ಹೊರಟಿರುವುದು ಪ್ರಜಾಪ್ರಭುತ್ವದ ಕೊಲೆ. ಇದರ ವಿರುದ್ಧ ಕಾನೂನು ಹೋರಾಟ ನಡೆಸಲಾಗುವುದು ಎಂದು ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಎಚ್ಚರಿಕೆ ನೀಡಿದರು. ದ್ವೇಷ ಭಾಷಣ ಮತ್ತು ದ್ವೇಷ ಅಪರಾಧಗಳನ್ನು ನಿರ್ಬಂಧಿಸುವ ಮಸೂದೆಗೆ ಪಕ್ಷದ ವಿರೋಧವಿದೆ. ಸಂವಿಧಾನ ನೀಡಿರುವ ವಾಕ್ ಹಾಗೂ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಕಾಂಗ್ರೆಸ್ ಸರ್ಕಾರ ಕಿತ್ತುಕೊಳ್ಳುತ್ತಿದೆ. ವಿರೋಧ ಪಕ್ಷ ಹಾಗೂ ಪತ್ರಕರ್ತರನ್ನು ಹತ್ತಿಕ್ಕುವ ಕೆಲಸ ಮಾಡುತ್ತಿದೆ.

ಈ ಮಸೂದೆ ಮೂಲಕ ಕಾಂಗ್ರೆಸ್ ಸರ್ಕಾರವು 1975ರ ತುರ್ತು ಪರಿಸ್ಥಿತಿಯನ್ನು ಮತ್ತೆ ತರುವ ಕುತಂತ್ರ ಮಾಡುತ್ತಿದೆ. ಸರ್ಕಾರ ಪತನವಾಗುವ ದಿನ ದೂರವಿಲ್ಲ' ಎಂದು ಸುದ್ದಿಗೋಷ್ಠಿಯಲ್ಲಿ ವ್ಯಂಗ್ಯವಾಡಿದರು. 'ಗೃಹ ಸಚಿವ ಪರಮೇಶ್ವರ ಅವರು ಮಸೂದೆ ಮಂಡಿಸಿದ್ದಾರೆ. ಅವರಿಗೆ ಏನೂ ಗೊತ್ತಿಲ್ಲ, ಮಸೂದೆಯನ್ನು ಬೇರೆ ಯಾರೋ ತಯಾರಿಸಿ ಗೃಹ ಸಚಿವರ ಮೂಲಕ ಜಾರಿಗೆ ತರಲು ಯತ್ನಿಸುತ್ತಿದ್ದಾರೆ. ಇದರ ವಿರುದ್ಧ ಸದನದ ಒಳಗೆ ಮತ್ತು ಹೊರಗೆ ಜೆಡಿಎಸ್ ಹಾಗೂ ಬಿಜೆಪಿ ಹೋರಾಟ ಮಾಡಲಿದೆ' ಎಂದು ಹೇಳಿದರು. ಆರು ತಿಂಗಳಿಂದ ಉತ್ತರ ಕರ್ನಾಟಕದ ರೈತರು ಸಂಕಷ್ಟದಲ್ಲಿದ್ದಾರೆ. ಅತಿವೃಷ್ಟಿಯಿಂದ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಆದರೆ, ಕಾಟಾಚಾರದ ಅಧಿವೇಶನ ನಡೆಯುತ್ತಿದೆ. ನಾಡಿನ ಸಮಗ್ರ ಬೆಳವಣಿಗೆ ಬಗ್ಗೆ ಅಧಿವೇಶನದಲ್ಲಿ ಚರ್ಚೆ ಆಗುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು. ಸಿದ್ದರಾಮಯ್ಯ ಅವರು ಹೆಲಿಕಾಪ್ಟರ್‌ನಲ್ಲಿ ಸಂಚರಿಸಲು ರೂ.47 ಕೋಟಿ ವೆಚ್ಚ ಮಾಡಲಾಗಿದೆ. ರಸ್ತೆಯಲ್ಲಿ ಓಡಾಡಿದರೆ ಗುಂಡಿಗಳ ಬಗ್ಗೆ ಗೊತ್ತಾಗುತ್ತಿತ್ತು ಎಂದರು. ಪಕ್ಷದ ಪ್ರಮುಖರ ಸಮಿತಿಯ ಅಧ್ಯಕ್ಷ ಎಂ.ಕೃಷ್ಣಾರೆಡ್ಡಿ, ವಿಧಾನ ಪರಿಷತ್ ಮಾಜಿ ಸದಸ್ಯ ತಿಪ್ಪೇಸ್ವಾಮಿ, ವಕ್ತಾರರಾದ ಗಂಗಾಧರ್ ಮೂರ್ತಿ, ಪ್ರದೀಪ್ ಕುಮಾರ್ ಇದ್ದರು.

**ದ್ವೇಷ ಭಾಷಣ ಮಸೂದೆಗೆ ಜೆಡಿಎಸ್ ವಿರೋಧ**



# ರಾಮಾಯಣ



## ಕಬಂಧನು ಹೇಳಿದ ಸುಗ್ರೀವನ ವೃತ್ತಾಂತ

• ಹಿಂದಿನ ಸಂಚಿಕೆಯಿಂದ **120 ನೆಯ ಅಧ್ಯಾಯ**

ಆ ಪುರುಷನು ಮಹಾಪರಾಕ್ರಮಿ. ಸ್ವರ್ಗ ಮರ್ತ್ಯ ಪಾತಾಳಗಳಲ್ಲಿ ಆತನರಿಯದ ವೃತ್ತಾಂತವಿಲ್ಲ. ಆತನು ಒಂದು ಕಾರಣಾಂತರದಿಂದ ಮೂರುಲೋಕ ಗಳನ್ನೂ ಸಂಚರಿಸಿ ಆ ಲೋಕಗಳ ವೃತ್ತಾಂತಗಳನ್ನು ತಿಳಿದಿದ್ದಾನೆ ಎಂದ ಹೇಳಿದನು.

**ಕಬಂಧನು ಹೇಳಿದ ಸುಗ್ರೀವನ ವೃತ್ತಾಂಕ:** ಆಮೇಲೆ ರಾಮಲಕ್ಷ್ಮಣರು ಪರ್ವತಗಳ ತಪ್ಪಲಲ್ಲಿದ್ದ ಕಾಷ್ಠಗಳನ್ನು ಕಡಿದು ಅಗ್ನಿಯನ್ನುಂಟು ಮಾಡಿ ಒಂದು ಹಳ್ಳದಲ್ಲಿ ಚಿತೆಯನ್ನೊಡ್ಡಿ ಆ ಚಿತೆಯ ಮೇಲೆ ಕಬಂಧನ ಶರೀರವನ್ನಿಟ್ಟು ಅಗ್ನಿ ಪ್ರದಾನಮಾಡಿದರು. ಆ ಶರೀರವು ಆಜ್ಞಪಿಂಡದಂತೆ ಉರಿಯಲು ಕಬಂಧನು ಆ ಚಿತೆಯನ್ನು ಭೇದಿಸಿಕೊಂಡು ಹೊಗೆಯಿಲ್ಲದ ಯಜ್ಞಪುರುವನಂತೆ ಅಂತರಿಕ್ಷಮಾರ್ಗಕ್ಕೆ ನೆಗೆದು ನಿಂತನು. ಅವನು ದಿವ್ಯದೇಹವುಳ್ಳವನಾಗಿಯೂ ದಿವ್ಯಾಂಬರಗಳನ್ನುಟ್ಟು ದಿವ್ಯಮಾಲಾಲಂಕೃತನಾಗಿಯೂ ದಿವ್ಯ ಚಂದನಲಿಪ್ತಾಂಗನಾಗಿಯೂ ದಿವ್ಯಾಭರಣಭೂಷಿತನಾಗಿಯೂ ಸೂರ್ಯಪ್ರಭೆಯಂತೆ ದೇದೀಪ್ಯ ಮಾನವಾದ ರಥಾರೂಢನಾಗಿಯೂ ತನ್ನ ತನುಕಾಂತಿಯಿಂದ ಸಮಸ್ತ ದಿಕ್ಕುಗಳನ್ನೂ ಬೆಳಗಿಸು ತ್ತಿದ್ದನು. ಅವನು ಶ್ರೀರಾಮನನ್ನು ಕುರಿತು ಈ ಮಾತುಗಳನ್ನಾಡಿದನು: ಶ್ರೀರಾಮ, ನೀನು ಸೀತಾದೇವಿಯನ್ನು ಕಾಣುವ ಉಪಾಯವನ್ನು ಹೇಳುವೆನು ಹಾಗೂ ಕೇಳು: ಲೋಕದಲ್ಲಿ ಸಂಧಿ, ವಿಗ್ರಹ, ಯಾನ. ಆಸನ, ದ್ವೈಧೀಭಾವ, ಸಮಾಶ್ರಯಗಳೆಂಬ ಷಡ್ಗುಣಗಳು ಅರಸರಿಗೆ ಕಾರಸಾಧನಗಳಾದ ಆರು ಗುಣಗಳು, ಆಪತ್ತುಗಳನ್ನು ಪಡೆದವನೇ ಆ ಪದ್ಧತನಿಗೆ ಸಹಾಯ ಮಾಡುವನು. ಶ್ರೀರಾಮ, ನೀನೂ ಲಕ್ಷ್ಮಣನೂ ದುರವಸ್ಥೆಯನ್ನು ಪಡೆದವರಾಗಿದ್ದೀರಿ.

ನೀವು ಹೇಗೆ ಸ್ತ್ರೀವಿಯೋಗ ದಿಂದ ಅಪತ್ರನ್ನು ಪಡೆದಿದ್ದೀರೋ ಆ ರೀತಿಯಲ್ಲಿಯೇ ಸುಗ್ರೀವನೆಂಬವನು ಸ್ತ್ರೀನಿಮಿತ್ತವಾಗಿ ಆಪತ್ತನ್ನು ಪಡೆದಿದ್ದಾನೆ. ವಾಲಿಯೆಂಬವನೂ ಸುಗ್ರೀವನೂ ಅಣ್ಣತಮ್ಮಂದಿರು. ಅವರಿಬ್ಬರಿಗೂ ಕಲಹವಾಗಲು ಬಲವಂತನಾದ ವಾಲಿಯು ಸುಗ್ರೀವನನ್ನು ಸೋಲಿಸಿ ಹೊಡೆದು ಹೊರಡಿಸಿದನು. ಸುಗ್ರೀವನು ನಾಲ್ಕು ಮಂದಿ ಕಪಿಗಳ ಸಹಿತನಾಗಿ ತನ್ನ ರಾಜ್ಯವನ್ನು ಬಿಟ್ಟು ಋಷ್ಯಮೂಕಪರ್ವತ ದಲ್ಲಿದ್ದಾನೆ. ನೀನು ಆತನನೊಡನೆ ಸ್ನೇಹವನ್ನು ಮಾಡಿಕೊಂಡರೆ ಆತನು ಸಮಸ್ತ ಕಾರ್ಯವನ್ನೂ ನೆರವೇರಿಸಿಕೊಡುವನು. ಆತನೊಡನೆ ಸ್ನೇಹವನ್ನು ಮಾಡಿಕೊಳ್ಳದ ಪಕ್ಷದಲ್ಲಿ ಸೀತಾದೇವಿಯನ್ನರಸು ವುದಕ್ಕೆ ಉಪಾಯಾಂತರವನ್ನು ಕಾಣೆನು. ಸುಗ್ರೀವನು ಮಹಾಪರಾಕ್ರಮಿ, ಸತ್ಯಸಂಧ, ವಿನಯ ಗುಣಸಂಪನ್ನ, ಬುದ್ಧಿವಂತ, ಮಹಾಧೈರವುಳ್ಳವನು, ಮಹಾತ್ಮ ಹಾಗೂ ಮಹಾದಕ್ಷ, ಅಂಥ ಪರಾಕ್ರಮಿ ಯಾದ ಸುಗ್ರೀವನು ವಾಲಿಯಿಂದ ಹೊರಡಿಸಲ್ಪಟ್ಟು ಋಷ್ಯಮೂಕಪರ್ವತದಲ್ಲಿದ್ದಾನೆ. ಆತನ ಸಮೀಪಕ್ಕೆ ನೀವು ಹೋದರೆ ಆತನು ನಿಮಗೆ ಮಿತ್ರನಾಗಿ ಸೀತಾದೇವಿಯನ್ನರಸುವುದಕ್ಕೆ ಸಹಾಯ ವಾಗುವನು. ಶ್ರೀರಾಮ, ನೀನು ಮನಸ್ಸಿನಲ್ಲಿ ವ್ಯಥೆಪಡಬೇಡ.

ಮುಂದುವರಿಯುವುದು...


# ಸಣ್ಣಗಿರುವವರಲ್ಲೂ ಅಧಿಕ ಕೊಲೆಸ್ಟ್ರಾಲ್ ?

ಸಣ್ಣಗಿರುವವರನ್ನೂ ಕೆಟ್ಟ ಕೊಲೆಸ್ಟ್ರಾಲ್ ಸಮಸ್ಯೆ ಕಾಡುತ್ತೆ ಎನ್ನುವುದನ್ನು ನಂಬಲೇ ಬೇಕು. ಇದರಿಂದಾಗಿ ಹೃದಯಾಘಾತಕ್ಕೂ ಕಾರಣವಾಗುತ್ತದೆ. ಇದಕ್ಕೆ ಕಾರಣಗಳೇನಿರಬಹುದು ಎನ್ನುವುದನ್ನು ತಿಳಿಯೋಣ.

ಕೆಲವರು ತಿಳಿದಿರುತ್ತಾರೆ ಕೊಲೆಸ್ಟ್ರಾಲ್ ಬರೀ ದಪ್ಪ ಇರುವವರಿಗೆ, ಬೊಜ್ಜು ಇರುವವರಿಗೆ ಮಾತ್ರ ಬರುತ್ತದೆ ಎನ್ನುವುದು. ಆದರೆ ಸಣ್ಣಗಿರುವವರಲ್ಲೂ ಅಧಿಕ ಕೊಲೆಸ್ಟ್ರಾಲ್ ಸಮಸ್ಯೆ ಇರುವುದನ್ನು ನೀವು ಗಮನಿಸಿರುವಿರಿ. ಕೊಲೆಸ್ಟ್ರಾಲ್‌ನಿಂದಾಗಿ ಸಣ್ಣಗಿರುವವರಿಗೂ ಹೃದಯಾಘಾತ ಉಂಟಾಗುವುದನ್ನು ಗಮನಿಸಿರುವಿರಿ. ನಿಜಕ್ಕೂ ಇದು ಆಶ್ಚರ್ಯವೇ ಸರಿ. ತೆಳ್ಳಗಿರುವುದು ನಿಮ್ಮ ಹೃದಯವನ್ನು ತೊಂದರೆಯಿಂದ ರಕ್ಷಿಸುವುದಿಲ್ಲ. ಸಣ್ಣಗಿರುವವರೂ ಹೆಚ್ಚಾಗಿ ಅಪಧಮನಿಗಳಲ್ಲಿ ವರ್ಷದಿಂದ ವರ್ಷಕ್ಕೆ ಯಾವುದೇ ಲಕ್ಷಣಗಳಿಲ್ಲದೆ ಸಂಗ್ರಹವಾಗುವ ಹೆಚ್ಚಿನ ಕೊಲೆಸ್ಟ್ರಾಲ್ ಅನ್ನು ಹೊಂದಿರುತ್ತಾರೆ.

**ಸಣ್ಣಗಿರುವ ಜನರನ್ನು ಕೊಲೆಸ್ಟ್ರಾಲ್ ಏಕೆ ಹೆಚ್ಚು ಕಾಡುತ್ತದೆ:** ನಿಮ್ಮ ದೇಹವು ಆಹಾರದಿಂದ ಕೊಲೆಸ್ಟ್ರಾಲ್ ಅನ್ನು ಎಳೆಯುತ್ತದೆ. ಆದರೆ ಯಕೃತ್ತು ಅದರಲ್ಲಿ ಹೆಚ್ಚಿನದನ್ನು ಮಾಡುತ್ತದೆ. ಕೆಲವೊಮ್ಮೆ ಜೀನ್‌ಗಳೂ ಕಾರಣವಾಗುತ್ತವೆ, ಆದ್ದರಿಂದ ಕೆಲವು ತೆಳ್ಳಗಿನ ಜನರು ಹುಟ್ಟಿನಿಂದಲೇ ಹೆಚ್ಚುವರಿ LDL ಅನ್ನು ಹೊರಹಾಕುತ್ತಾರೆ. ಅವರು ತಮ್ಮ ಆಹಾರವನ್ನು ಗಮನಿಸುತ್ತಾರೆ ಮತ್ತು ಜಿಮ್‌ಗೆ ಹೋಗುತ್ತಾರೆ.

**ಅಧ್ಯಯನಗಳು ಏನು ಹೇಳುತ್ತವೆ:** ಝುಡ್. ವೇಜಿಯಂತಹ ಸಂಶೋಧಕರು ಇದು ಯುವ ಸ್ಲಿಮ್ ವಯಸ್ಕರಲ್ಲಿ ಪ್ಲೇಕ್ ಅನ್ನು ಹೇಗೆ ಪ್ರಚೋದಿಸುತ್ತದೆ ಎಂಬುದನ್ನು ಸೂಚಿಸುತ್ತಾರೆ. ಅಪಧಮನಿಗಳು ಅಂತಿಮವಾಗಿ ಅವರ ವಯಸ್ಸಿನ ಎರಡು ಪಟ್ಟು ಹೆಚ್ಚು LDL, ಅನ್ನು DNA ದೋಷಗಳಿಗೆ ಜೋಡಿಸುತ್ತವೆ, ಮಧ್ಯದಲ್ಲಿ ಕೊಬ್ಬಿನಲ್ಲ. ಸಿ. ಪಿರಾಜಿಯವರ ಸಂಶೋಧನೆಗಳು FH ರೂಪಾಂತರಗಳು ಆರಂಭಿಕ ಹೃದಯ ಪ್ರಕರಣಗಳಲ್ಲಿ, ಫಿಟ್ ಆಗಿ ಕಾಣುವ ಜನರಲ್ಲಿಯೂ ಸಹ 15 ಪಟ್ಟು ಹೆಚ್ಚು ಕಾಣಿಸಿಕೊಳ್ಳುತ್ತವೆ ಎಂದು ತೋರಿಸುತ್ತವೆ.



ಕೌಟುಂಬಿಕ ಹೈಪರ್‌ಕೊಲೆಸ್ಟರಾಲ್ಮಿಯಾದ ಮೂಲಭೂತ ಅಂಶಗಳು: CDC ವರದಿಗಳು, ಫ್ಯಾಮಿಲಿ ಹಾರ್ಟ್ ಫೌಂಡೇಶನ್ ಅಂಕಿಅಂಶಗಳ ಪ್ರಕಾರ, FH ಜಾಗತಿಕವಾಗಿ ಸುಮಾರು 200 ರಿಂದ 250 ಜನರಲ್ಲಿ 1 ಜನರನ್ನು ಮುಟ್ಟುತ್ತದೆ.

LDLR, APOB ಅಥವಾ PCSK9 ನಂತಹ ದೋಷಯುಕ್ತ ಜೀನ್‌ಗಳು ರಕ್ತದಿಂದ ಐಆಐ ಶುದ್ಧೀಕರಣವನ್ನು ಹಾಳುಮಾಡುತ್ತವೆ. ವಯಸ್ಕರು 190 mg/dL ಸ್ಲಿಮ್ ಅಥವಾ ಸ್ಲಿಮ್ ಇಲ್ಲದಿದ್ದರೂ ಸಹ ಮೇಯೊ ಕ್ಲಿನಿಕ್ ಸಂಶೋಧನೆಯು ಏನೂ 50 ಕ್ಕಿಂತ ಮೊದಲು ಹೃದಯಾಘಾತ ಸಂಭವಿಸುವ ಬಗ್ಗೆ ಎಚ್ಚರಿಸುತ್ತದೆ.

**LDL, HDL, ಟ್ರೈಗ್ಲಿಸರೈಡ್‌ಗಳನ್ನು ಅರ್ಥಮಾಡಿಕೊಳ್ಳುವುದು:** LDL, ಕೊಲೆಸ್ಟ್ರಾಲ್ ಅನ್ನು ಅಪಧಮನಿಯ ಗೋಡೆಗಳಿಗೆ ನೇರವಾಗಿ ಇಳಿಸುವ ಟ್ರಕ್‌ಗಳಂತೆ ಕಾರ್ಯನಿರ್ವಹಿಸುತ್ತದೆ.

HDL ಶುಚಿಗೊಳಿಸುವ ತಂಡವಾಗಿ ಹೆಜ್ಜೆ ಹಾಕುತ್ತದೆ, ಅದನ್ನು ಹಿಂದಕ್ಕೆ ಎಳೆಯುತ್ತದೆ. LDL, 100 mg/dL ದಾಟಿದಾಗ ಮತ್ತು ಪುರುಷರಿಗೆ HDL, 40 mg/dL ಗಿಂತ ಕಡಿಮೆಯಾದಾಗ ಅಥವಾ ಮಹಿಳೆಯರಿಗೆ 50 ಕ್ಕಿಂತ ಕಡಿಮೆಯಾದಾಗ, ಪ್ಲೇಕ್ ಗೆಲ್ಲುತ್ತದೆ. ಕಡಿಮೆ HDL, ಜೊತೆಗೆ 150 mg/dL ಗಿಂತ ಹೆಚ್ಚಿನ ಟ್ರೈಗ್ಲಿಸರೈಡ್‌ಗಳು ನಿಜವಾದ ಅಪಾಯವನ್ನುಂಟುಮಾಡುತ್ತವೆ. ಸುರಕ್ಷಿತ ಬೆಟ್‌ಗಾಗಿ ಒಟ್ಟು ಕೊಲೆಸ್ಟ್ರಾಲ್ ಅನ್ನು 200 mg/dL ಗಿಂತ ಕಡಿಮೆ ಇಡುವ ಗುರಿಯನ್ನು ಹೊಂದಿದೆ. ಸಕ್ಕರೆ ಭರಿತ ಆಹಾರವನ್ನು ತ್ಯಜಿಸುವಂತಹ ಸಣ್ಣ ಆಹಾರ ಬದಲಾವಣೆಗಳು ಇವುಗಳನ್ನು ಸಮತೋಲನಗೊಳಿಸಲು ಸಹಾಯ ಮಾಡುತ್ತದೆ.

**ಕುಟುಂಬದ ಇತಿಹಾಸದ ಅಪಾಯಗಳನ್ನು ಗುರುತಿಸುವುದು:** ನಿಮ್ಮ ಕುಟುಂಬದಲ್ಲಿ ಪುರುಷರಲ್ಲಿ 55 ಅಥವಾ ಮಹಿಳೆಯರಲ್ಲಿ 65 ವರ್ಷಕ್ಕಿಂತ ಮೊದಲು ಹೃದಯಾಘಾತಕ್ಕೆ ಒಳಗಾದ ಪೋಷಕರು ಅಥವಾ ಕುಟುಂಬಸ್ಥರು ಇದ್ದಲ್ಲಿ ಉಳಿದ ಕುಟುಂಬ ಸದಸ್ಯರು ಎಚ್ಚರಿಕೆಯಿಂದಿರಬೇಕು. ಮೊದಲೇ ಜಾಗರೂಕತೆ ವಹಿಸಿದರೆ ಒಡಹುಟ್ಟಿದವರು ಮತ್ತು ಮಕ್ಕಳು ಮೊದಲೇ ಕೊಲೆಸ್ಟ್ರಾಲ್ ಪರೀಕ್ಷೆ, ಹೃದಯದ ತಪಾಸಣೆಯನ್ನು ನಡೆಸಬೇಕು. ಇದು ಮುಂದಿನ ಅಪಾಯವನ್ನು ತಡೆಯಲು ಸಹಕಾರಿಯಾಗಿದೆ.

ಉದಯ ವಾಹಿನಿ
ಪ್ರಾದೇಶಿಕ
ಶನಿವಾರ
13 ಡಿಸೆಂಬರ್ 2025
05

ಈ ಸುಸಜ್ಜಿತ ಕೌಂಟರ್‌ಗಳಲ್ಲಿ ಪೊಲೀಸ್ ಮತ್ತು ಸಾರಿಗೆ ಸಿಬ್ಬಂದಿ ಒಂದು ದಿನವೂ ಕುಳಿತು ಕರ್ತವ್ಯ ನಿರ್ವಹಿಸಿಲ್ಲ

# ಬಸ್ ನಿಲ್ದಾಣದಲ್ಲಿ ಅವ್ಯವಸ್ಥೆ: ಶೋಕಿಗಷ್ಟೇ ವಿಚಾರಣಾ ಕೇಂದ್ರ

• ಉದಯವಾಹಿನಿ ಕುಷ್ಟಗಿ

ಪ್ರಯಾಣಿಕರ ಅನುಕೂಲಕ್ಕೆ ಇಲ್ಲಿಯ ಬಸ್ ನಿಲ್ದಾಣದಲ್ಲಿ ವಿಚಾರಣಾ ಕೌಂಟರ್‌ಗಳನ್ನು ನಿರ್ಮಿಸಲಾಗಿದೆ. ಆದರೆ ನಿಲ್ದಾಣ ಉದ್ಘಾಟನೆಗೊಂಡು 3 ವರ್ಷ ಕಳೆದರೂ ಅವು ಬಾಗಿಲು ತೆರೆದಿಲ್ಲ. ಸರ್ಕಾರದ ಲಕ್ಷಾಂತರ ಹಣ ಪೋಲಾಗಿರುವ ಬಗ್ಗೆ ಜನರಲ್ಲಿ ಅಸಮಾಧಾನವಿದೆ.

ರಾಯಚೂರು, ವಿಜಯಪುರ, ಹುಬ್ಬಳ್ಳಿ, ಕೊಪ್ಪಳ ಮತ್ತು ಹೊಸಪೇಟೆ ಕಡೆಗೆ ಸಂಚರಿಸುವ ಬಸ್‌ಗಳಿಗೆ ಕುಷ್ಟಗಿ ನಿಲ್ದಾಣ ಸಂಪರ್ಕ ಕೊಂಡಿಯಾಗಿದೆ. ನಿತ್ಯ ನೂರಾರು ಬಸ್‌ಗಳು, ಸಹಸ್ರ ಸಂಖ್ಯೆ ಪ್ರಯಾಣಿಕರಿಂದಾಗಿ ಸದಾ ಜನಜಂಗುಳಿ ಇರುತ್ತದೆ. ಅದೇ ರೀತಿ ಕಿಸೆಗಳ್ಳರಿಗೂ ಈ ನಿಲ್ದಾಣ ಆಯಕಟ್ಟಿನ ಜಾಗ. ಆದರೆ ನಿಲ್ದಾಣಕ್ಕೆ ಬರುವ ಪ್ರಯಾಣಿಕರು, ಅನೇಕ ರೀತಿಯ ಸಮಸ್ಯೆಗಳನ್ನು ಎದುರಿಸುತ್ತಿರುವುದು ಕಂಡುಬಂದಿದೆ.

ಜನರ ಸಮಸ್ಯೆಗೆ ತಕ್ಷಣ ನೆರವಾಗುವುದು, ಮಾಹಿತಿಗಾಗಿ ಪೊಲೀಸ್ ಚೌಕಿ ಮತ್ತು ವಿಚಾರಣಾ ಕೇಂದ್ರಗಳನ್ನು ತೆರೆಯಲಾಗಿದೆ. ಈ ಸುಸಜ್ಜಿತ ಕೌಂಟರ್‌ಗಳಲ್ಲಿ ಪೊಲೀಸ್ ಮತ್ತು ಸಾರಿಗೆ ಸಿಬ್ಬಂದಿ ಒಂದು ದಿನವೂ ಕುಳಿತು ಕರ್ತವ್ಯ ನಿರ್ವಹಿಸಿಲ್ಲ. ಅಷ್ಟೇ ಏಕೆ ಉದ್ಘಾಟನೆಯಾದಾಗಿನಿಂದ ಒಂದು ದಿನವೂ ಇವುಗಳ ಕದ ತೆರೆದಿಲ್ಲ. ಒಳಗೆ ಧೂಳು, ಕಸ ಕಡ್ಡಿ ಆವರಿಸಿದ್ದು ಎರಡೂ ಇಲಾಖೆಗಳ ನಿರ್ಲಕ್ಷ್ಯ ಎದ್ದು ಕಾಣುತ್ತಿದೆ ಎಂಬ ಆರೋಪ ಸಾರ್ವಜನಿಕರದ್ದು.



ಉದಯವಾಹಿನಿ ಚಿತ್ರ

> ಸಿಬ್ಬಂದಿ ಕೊರತೆ ಕಾರಣಕ್ಕೆ ಕೌಂಟರ್‌ಗಳಲ್ಲಿ ನಿಯಂತ್ರಕರು ಇರುವುದಿಲ್ಲ. ಈ ಬಗ್ಗೆ ಕ್ರಮ ಕೈಗೊಳ್ಳುತ್ತೇನೆ.
> -ನೀಲಪ್ಪ ನಾಸಿಪುಡಿ, ಘಟಕ ವ್ಯವಸ್ಥಾಪಕ

**ಲಕ್ಷಾಂತರ ಹಣ ಪೋಲು**

ಬಸ್‌ಗಳ ಬರಹೋಗುವಿಕೆ ಮತ್ತಿತರೆ ಅಗತ್ಯ ಸಂದರ್ಭದಲ್ಲಿ ಸಂಪರ್ಕಿಸಲು ಪ್ರಯಾಣಿಕರು ದಪ್ಪನೆ ಅಕ್ಷರಗಳಲ್ಲಿ ಬರೆದಿರುವ ವಿಚಾರಣೆ ಕೇಂದ್ರಕ್ಕೆ ಹೋದರೆ ಅಲ್ಲಿ ಯಾರೊಬ್ಬರೂ ಇರದ ಕಾರಣ ಶಪಿಸುತ್ತ ಬರುತ್ತಾರೆ. ಇನ್ನು ತುರ್ತು ಸಂದರ್ಭದಲ್ಲಿ ಮಾಹಿತಿ ನೀಡಲು ಹೋದರೆ ಪೊಲೀಸ್ ಚೌಕಿಯೂ ಖಾಲಿ. ಒಂದು ದಿನವೂ ಇವು ಬಳಕೆಯಾಗುತ್ತಿಲ್ಲವೆಂದರೆ ಸರ್ಕಾರದ ಬೊಕ್ಕಸಕ್ಕೆ ಹಾನಿ ಮಾಡಿ ನಿರ್ಮಿಸಿರುವುದಾದರೂ ಏಕೆ ಎಂಬ ಪ್ರಶ್ನೆ ಪ್ರಯಾಣಿಕರದು. ಅಗತ್ಯವಿಲ್ಲದಿದ್ದರೆ ಅವುಗಳನ್ನು ತೆರವುಗೊಳಿಸಬೇಕಿತ್ತು. ಶೋಕಿಗಾಗಿ ಹಾಗೇ ಉಳಿಸಿಕೊಂಡಿರುವುದೇಕೆ ಎಂದೆ ಪ್ರಯಾಣಿಕರು ಅಸಮಾಧಾನ ಹೊರಹಾಕಿದರು.

ಪೊಲೀಸರು ಎಲ್ಲಿ ಇರುತ್ತಾರೊ ಗೊತ್ತಿಲ್ಲ ಕಳ್ಳತನ ನಡೆದಾಗ ಅವರನ್ನು ಹುಡುಕಿಕೊಂಡು ಹೋಗಬೇಕು, ಪೊಲೀಸ್ ಠಾಣೆಗೆ ಕರೆ ಮಾಡಿದರೆ ಪೊಲೀಸರೂ ಬೇಗನೆ ಬರುವುದಿಲ್ಲ. ಇನ್ನು ಬಸ್‌ಗಳ ಬಗ್ಗೆ ಮಾಹಿತಿ ಪಡೆಯಲು ನಿಲ್ದಾಣದ ಮೂಲೆಯಲ್ಲಿನ ಹಳೆ ಕೊಠಡಿಯಲ್ಲಿ ಕುಳಿತ ನಿಯಂತ್ರಕರ ಬಳಿ ಓಡೋಡಿ ಹೋಗಬೇಕು. ಮರಳಿ ಬರುವಷ್ಟರಲ್ಲಿ ಬಸ್‌ಗಳು ಹೋಗಿರುತ್ತವೆ. ಇದನ್ನು ಸಾರಿಗೆ ಇಲಾಖೆಯವರು ಅರ್ಥ ಮಾಡಿಕೊಳ್ಳಬೇಕಿತ್ತಲ್ಲವೆ ಎಂದೆ ಪ್ರಯಾಣಿಕರಾದ ವೀರೇಶ ಮಠಪತಿ, ಪ್ರಹ್ಲಾದ ಜೋಷಿ ಹೇಳಿದರು.

> ಪೊಲೀಸರು ಕೌಂಟರ್ ಒಳಗಿದ್ದರೆ ಕಿಸೆಗಳ್ಳರಿಗೆ ಅನುಕೂಲವಾಗುತ್ತದೆ. ಹಾಗಾಗಿ ಪೊಲೀಸರು ನಿಲ್ದಾಣದಲ್ಲಿ ಅಲ್ಲಲ್ಲಿ ಗಸ್ತು ತಿರುಗುತ್ತಿರುತ್ತಾರೆ. ಹಾಗಾಗಿ ಇತ್ತೀಚಿನ ದಿನಗಳಲ್ಲಿ ಕಳ್ಳತನ ಪ್ರಕರಣ ವರದಿಯಾಗಿಲ್ಲ. -ಹನುಮಂತಪ್ಪ ತಳವಾರ, ಸಬ್ ಇನ್ಸ್‌ಪೆಕ್ಟರ್

> ಉಪಯೋಗವಿಲ್ಲವೆಂದಾದರೆ ಕೌಂಟರ್‌ಗಳನ್ನು ನಿರ್ಮಿಸುವ ಅಗತ್ಯ ಇರಲಿಲ್ಲ. ಅನಗತ್ಯವಾಗಿ ಸರ್ಕಾರದ ಹಣ ಖರ್ಚು ಮಾಡಲಾಗಿದೆ.
> -ಈಶ್ವರಪ್ಪ ಬಲಕುಂದಿ, ಪ್ರಯಾಣಿಕ

### ನಿಲ್ದಾಣದ ಒಳ ಹೊರಗೆ ಅವ್ಯವಸ್ಥೆ

**ಕುಷ್ಟಗಿ ಬಸ್ ನಿಲ್ದಾಣದ ಒಳ ಮತ್ತು ಹೊರ ಆವರಣದಲ್ಲಿ ಅವ್ಯವಸ್ಥೆ ಕಣ್ಣಿಗೆ ರಾಚುತ್ತಿದೆ. ಘಟಕದ ಮುಂದೆ ಬಹಳಷ್ಟು ಪ್ರಮಾಣದಲ್ಲಿ ತ್ಯಾಜ್ಯ ಸಂಗ್ರಹವಾಗಿದ್ದು ಸಕಾಲದಲ್ಲಿ ವಿಲೇವಾರಿಯಾಗುವುದಿಲ್ಲ. ಮೂತ್ರಾಲಯ ಶೌಚಾಲಯದ ಬಳಿಯ ಚರಂಡಿಗಳು ಕಟ್ಟಿಕೊಂಡಿದ್ದು ಅವುಗಳಲ್ಲಿನ ಕೊಳಚೆ ಕೊಪ್ಪಳ ಮಾರ್ಗದ ಗೇಟ್ ಬಳಿ ಹರಿಯುತ್ತಿರುತ್ತದೆ. ಕ್ಯಾಂಟಿನ್ ಬಳಿ ರಸ್ತೆಗೆ ಅಡ್ಡಲಾಗಿ ಗುಂಡಿ ತೆಗೆದು ಹಾಗೆ ಬಿಟ್ಟಿದ್ದು ವಾಹನಗಳ ಸಂಚಾರಕ್ಕೆ ಬಹಳಷ್ಟು ಅಡ್ಡಿಯಾಗಿದೆ. ನಿಲ್ದಾಣದ ಬಳಿ ಬೈಕ್ ಸ್ಟ್ಯಾಂಡ್ ಇದ್ದು ವಾಹನಗಳನ್ನು ಅಡ್ಡಾದಿಡ್ಡಿಯಾಗಿ ನಿಲ್ಲಿಸಲಾಗಿರುತ್ತದೆ. ಶುಲ್ಕ ವಸೂಲಿ ಮಾಡುವವರು ನಿಲ್ದಾಣದಲ್ಲೇ ಅಡ್ಡಲಾಗಿ ಬೊಂಬುಗಳನ್ನು ಕಟ್ಟಿದ್ದು ಮಹಿಳೆಯರು ಮಕ್ಕಳು ವೃದ್ಧರು ಒಳಗೆ ಬರುವುದಕ್ಕೆ ಪರದಾಡುತ್ತಿದ್ದಾರೆ. ಈ ಎಲ್ಲಾ ಸಮಸ್ಯೆ ಕಣ್ಣಿಗೆ ಕಾಣುತ್ತಿದ್ದರೂ ಘಟಕದ ಅಧಿಕಾರಿಗಳು ನಿರ್ಲಕ್ಷ್ಯವಹಿಸಿದ್ದಾರೆ ಎಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದರು.**

# ಮದ್ಯ ಮಾರಾಟ ಮುಕ್ತ ಗ್ರಾಪಂ ಮುಂದೆ ಮಹಿಳೆಯರ ಪ್ರತಿಭಟನೆ


ಉದಯವಾಹಿನಿ ಚಿತ್ರ

> ಗ್ರಾಮದ ಯಾವುದೇ ಅಂಗಡಿಗಳಲ್ಲಿ ಮದ್ಯ ಮಾರಾಟ ಮಾಡಬಾರದು, ಅಕ್ರಮ ಮದ್ಯ ಮಾರಾಟ ಮಾಡುವವರು ಮೇಲೆ ಕಾನೂನು ಕ್ರಮ ಕೈಗೊಳ್ಳಬೇಕು ಅಕ್ರಮ ಮದ್ಯ ಸೇವನೆಯಿಂದ ಮೃತ ಪಟ್ಟ ಕುಟುಂಬಗಳಿಗೆ ಪರಿಹಾರ ವಿತರಿಸಬೇಕು ಅಕ್ರಮ ಮದ್ಯ ಸರಬರಾಜು ಮಾಡುತ್ತಿರುವ ಮಧ್ಯದ ಅಂಗಡಿ ಮಾಲೀಕರ ಮೇಲೆ ಕಾನೂನು ಕ್ರಮ ಕೈಗೊಳ್ಳಬೇಕು, ಸ್ಥಳಿಯ ಗ್ರಾಮ ಪಂಚಾಯಿತಿ ಅಧಿಕಾರಿಗಳು ಅಕ್ರಮ ಮದ್ಯ ಮಾರಾಟದ ಬಗ್ಗೆ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಬೇಕು.
> -ದುರಗಪ್ಪ ನಡುಲಮನಿ, ಜಿಲ್ಲಾ ಮಾದಿಗ ದಂಡೋರ ಸಮಿತಿ ಪ್ರ.ಕಾರ್ಯದರ್ಶಿ

• ಉದಯವಾಹಿನಿ ಯಲಬುರ್ಗಾ

ಅಕ್ರಮ ಮದ್ಯ ಮಾರಾಟ ತಡೆಯುವಂತೆ ಒತ್ತಾಯಿಸಿ ತುಮ್ಮರಗುದ್ದಿ ಗ್ರಾಮಸ್ಥರು ಗ್ರಾಮ ಪಂಚಾಯಿತಿ ಕಾರ್ಯಾಲಯದ ಮುಂದೆ ಗ್ರಾಮದ ಮಹಿಳೆಯರು ಮತ್ತು ಕರ್ನಾಟಕ ರಕ್ಷಣಾ ವೇದಿಕೆ ಮುಖಾಂತರ ಪ್ರತಿಭಟನೆ ನಡೆಸಿದರು ಗ್ರಾಮಗಳಲ್ಲಿ ಅಕ್ರಮವಾಗಿ ಮದ್ಯ ಮಾರಾಟವಾಗುತ್ತಿದ್ದರೂ ಅಧಿಕಾರಿಗಳು ಯಾವುದೇ ಕ್ರಮ ಕೈಗೊಂಡಿಲ್ಲ. ಅಧಿಕಾರಿಗಳ ನಡೆ ನೋಡಿದರೆ ಅಕ್ರಮ ಮದ್ಯ ಮಾರಾಟದಲ್ಲಿ ಅವರು ಶಾಮೀಲಾಗಿರುವಂತೆ ಕಾಣುತ್ತದೆ ಎಂದು ಕರ್ನಾಟಕ ರಕ್ಷಣಾ ವೇದಿಕೆ ಹೆಚ್ ಶಿವರಾಮೇಗೌಡ ಬಣದ ತಾಲ್ಲೂಕ ಅಧ್ಯಕ್ಷ ರಾಜಶೇಖರ ಶಾಗೋಟಿ ಆರೋಪಿಸಿದ್ದಾರೆ.

ಗ್ರಾಮದಲ್ಲಿ ಕಳೆದ 20 ವರ್ಷಗಳಿಂದ ಅಕ್ರಮ ಮದ್ಯ ಮಾರಾಟ ನಡೆಯುತ್ತಾ ಬಂದಿದೆ ಮಧ್ಯರಾತ್ರಿ 12 ರಿಂದ ಬೆಳಗಾಗುವದ ರೋಳಗೆ ಸಣ್ಣ ಪುಟ್ಟ ಬೀಡಾ ಅಂಗಡಿಗಳಿಗೆ ಸರಬರಾಜು ಮಾಡುತ್ತಿದ್ದಾರೆ ಕುಡಿತದಿಂದ ಅನೇಕ ಜನ ಯುವಕರು ಬಲಿಯಾಗಿದ್ದಾರೆ ಮತ್ತು ಮನೆಯಲ್ಲಿ ದಿನ ನಿತ್ಯ ಕೌಟುಂಬಿಕ ಕಲಹಕ್ಕೆ ಕಾರಣ ವಾಗುತ್ತಿದ್ದು ಇದರಿಂದ ಅನೇಕ ಜನ ಮಹಿಳೆಯರ ಮಾನಸಿಕ ನೆಮ್ಮದಿ ಹಾಳಾಗುತ್ತದೆ, ಅನೇಕ ಬಾರಿ ಸಂಬಂಧ ಪಟ್ಟ ಅಧಿಕಾರಿಗಳಿಗೆ ಮನವಿ ಸಲ್ಲಿಸಿದಾಗ 2 ಅಥವಾ 3 ದಿನ ಮಾತ್ರ ಸ್ಥಗಿತಗೊಳಿಸಿ ಪುನಹ ಮಾರಾಟ ಮಾಡುತ್ತಾ ಬಂದಿದ್ದಾರೆ ಇದಕ್ಕೆ ಮೇಲಾಧಿಕಾರಿಗಳ ಕುಮ್ಮಕ್ಕು ಇರಬಹುದು ಎಂದು ತಿಳಿದು ಬರುತ್ತದೆ ಆದ್ದರಿಂದ ಕೂಡಲೆ ಮಧ್ಯೆ ಮಾರಾಟ ಮುಕ್ತ ಗ್ರಾಮವನ್ನಾಗಿ ಮಾಡಬೇಕೆಂದು ಆಗ್ರಹಿಸಿದರು.

ಅಕ್ರಮ ಮದ್ಯ ಮಾರಾಟ ನಿಲ್ಲಿಸದೇ ಹೋದರೆ ಗ್ರಾಮದಲ್ಲಿ ಮುಂದಾಗುವ ಅನಾಹುತಗಳಿಗೆ ಅಬಕಾರಿ ಇಲಾಖೆ ಕಾರಣವಾಗುತ್ತದೆ ಎಂದು ಎಚ್ಚರಿಕೆ ನೀಡಿ ಅಬಕಾರಿ ಅಬಕಾರಿ ನಿರೀಕ್ಷಕ ರವಿಕುಮಾರ ಪಾಟೀಲ್ ನೀರಿಕ್ಷಕರಾದ ನೀಲಾ ಗಲಿಗಲಿ, ಹಾಗೂ ತಾಲ್ಲೂಕ ಪಂಚಾಯತ ಇಇಒ ನೀಲಗಂಗಾ , ಸಿಪಿಐ ಮೌನೇಶ ಮಾಲಿ ಪಾಟೀಲ್ ರವರಿಗೆ ಮನವಿ ಸಲ್ಲಿಸಿದರು.

ಮನವಿ ಸ್ವೀಕರಿಸಿದ ಸಿಪಿಐ ಮಾನೇಶ್ವರ ಮಾಲಿಪಾಟೀಲ್, ಗ್ರಾಮದಲ್ಲಿ ಅಕ್ರಮವಾಗಿ ಮದ್ಯ ಮಾರಾಟ ಮಾಡಿದ್ದು ಕಂಡುಬಂದರೆ ಮುಲಾಜಿಲ್ಲದೆ ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು ನಂತರ ಪ್ರತಿಭಟನೆ ಹಿಂಪಡೆಯಲಾಯಿತು.

ಗ್ರಾಪಂ ಮಾಜಿ ಸದಸ್ಯ ಕಳಕನಗೌಡ ಪಾಟೀಲ್, ಗ್ರಾಪಂ ಪಿಡಿಓ ರವಿಕುಮಾರ್ ಲಿಂಗಣವರ್,ಅಬಕಾರಿ ನೀರಿಕ್ಷಕರಾದ ನೀಲಾ ಗಲಿಗಲಿ,ಆನಂದ,ಪಿಎಸ್ಐ ವಿಜಯ ಪ್ರತಾಪ್, ಕರವೇ ಕಾರ್ಯಧ್ಯಕ್ಷ ಶಿವರಾಜ ಚಿಕ್ಕೊಪ್ಪ, ಕಲ್ಲಿನಾಥ,ಮುಖಂಡರಾದ ದೇವಪ್ಪ ಪರಂಗಿ ಭಾಗವಹಿಸಿದ್ದರು.

# ಸಿಲಿಂಡರ್ ಬ್ಲಾಸ್ಟ್ : ನಡುಗಿದ ಜಿಲ್ಲೆಯ ಜನ ಮೈ ಕೊರೆಯುವ ಚಳಿಯಲ್ಲಿ ಮನ ಕಲುಕುವ ಘಟನೆ

• ಉದಯ ವಾಹಿನಿ ಕಾರಟಗಿ

ಸಿಲಿಂಡರ್‌ನಿಂದ ಅನೀಲ ಸೋರಿಕೆಯಾಗಿ ಬ್ಲಾಸ್ಟ್ ಆಗಿ ಮನೆಯೇ ಮಗುಚಿ ಬಿದ್ದು ಕುಟುಂಬದ ಮೂರು ಜನರಿಗೆ ಹಾಗೂ ಓಣಿಯ ಇತರರಿಗೆ ಗಂಭೀರ ಗಾಯಗಳಾದ ಘಟನೆ ಶುಕ್ರವಾರ ಗಂಗಾವತಿ ತಾಲ್ಲೂಕಿನ ಹೆಬ್ಬಾಳ ಗ್ರಾಮದಲ್ಲಿ ನಡೆದಿದೆ. ಮುಂಜಾನೆ ಮೈ ಕೊರೆಯುವ ಚಳಿಗೆ ಗ್ರಾಮದ ಜನ ಇನ್ನೂ ನಿದ್ದೆಯಿಂದ ಎದ್ದಿರಲಿಲ್ಲ ಓಣಿಯಲ್ಲಿ ಭಯಾನಕ ಘಟನೆ ನಡೆಯುತ್ತೆ ಅಂತ ಯಾರು ಊಹಿಸಿರಲಿಲ್ಲ. ಆದರೆ ಇಡೀ ಗ್ರಾಮದ ಜನ ಸಿಲಿಂಡರ್ ಬ್ಲಾಸ್ಟ್ ಶಬ್ದಕ್ಕೆ ನಡುಗಿ ಹೋಗಿದ್ದಾರೆ.

ಮನೆಯ ಮಾಲಕಿ ಹುಸೇನಮ್ಮ ಮಗಳು ಹುಲಿಗೆಮ್ಮ ಮಗ ವಿಷ್ಣು ಹಾಗೂ ಓಣಿಯ ಸುರೇಶ್ ದುರ್ಗೇಶ್ ರಾಜು ಎನ್ನುವ ಮೂವರಿಗೆ ಗಂಭೀರ ಗಾಯಗಳಾಗಿ ಆಸ್ಪತ್ರೆ ಸೇರಿದ್ದಾರೆ. ಹೆಬ್ಬಾಳ ಗ್ರಾಮದ ಎಸ್ ಸಿ ಓಣಿಯ ಹುಸೇನಮ್ಮ ಅವರ ಮನೆಯಲ್ಲಿ ಈ ಘಟನೆ ನಡೆದಿದೆ.

ಮನೆಯಲ್ಲಿ ಆಕಸ್ಮಿಕ ಸಿಲಿಂಡರ್ ನಿಂದ ಅನೀಲ ಸೋರಿಕೆ ಆಗಿದೆ ಮನೆಯವರ ಗಮನಕ್ಕೆ ತಡವಾಗಿ ಬಂದಿದೆ, ಅನಿಲ ಸೋರಿಕೆ ಗಮನಕ್ಕೆ ಬಂದ್ ಮಾಡಲು ಹೋಗುವಷ್ಟರಲ್ಲಿ ಸಿಲಿಂಡರ್ ಬ್ಲಾಸ್ಟ್ ಆಗಿದೆ, ಸಿಲಿಂಡರ್ ಸ್ಫೋಟದ ಪರಿಣಾಮ ಮನೆಯ ಗೋಡೆಗಳು ಕುಸಿದಿವೆ, ಮನೆಯ ಹಂಚುಗಳು ಚಲ್ಲಾಪಿಲ್ಲಿಯಾ ಹಾರಿವೆ,


ಉದಯವಾಹಿನಿ ಚಿತ್ರ

ಮನೆಯಲ್ಲಿರುವ ಸಾಮಾನುಗಳು ವಸ್ತುಗಳು ಚಲ್ಲಾಪಿಲ್ಲಿಯಾಗಿವೆ , ಓಣಿಯ ಮೂರು ಜನರಿಗೆ ಗಾಯಗಳಾಗಿವೆ.

ಇದನ್ನೆಲ್ಲಾ ಕಣ್ಣಾರೆ ಕಂಡ ಗ್ರಾಮದ ಜನ ಆತಂಕಕ್ಕೆ ಒಳಗಾದರು. ಕೂಡಲೇ ಆಂಬುಲೆನ್ಸ್ ಕರೆ ಮಾಡಿ ತುರ್ತು ಚಿಕಿತ್ಸೆ ನೀಡಲು ಆಸ್ಪತ್ರೆಗೆ ಗಾಯಾಳುಗಳನ್ನು ಕಳುಹಿಸಲಾಯಿತು. ಗಂಗಾವತಿಯಸಮುದಾಯ ಆಸ್ಪತ್ರೆಯಲ್ಲಿ ಕೆಲವರಿಗೆ ಚಿಕಿತ್ಸೆ ನೀಡಲಾಗುತ್ತಿದೆ ಗಂಭೀರ ಗಾಯಗಳಾದ ಇನ್ನು ಕೆಲವರನ್ನು ಬಳ್ಳಾರಿ ಆಸ್ಪತ್ರೆಗೆ ಕಳುಹಿಸಲಾಗಿದೆ. ಗ್ಯಾಸ್ ಸಿಲಿಂಡರ್ ನಿಂದ ಅನೀಲ ಸೋರಿಕೆಯಾದಾಗ ಪ್ರತಿಯೊಬ್ಬರು ಹೆಚ್ಚರವಹಿಸಬೇಕಾಗಿದೆ.

ಸ್ಥಳೀಯ ಜನಪ್ರತಿನಿಧಿಗಳು ಸಂಘ ಸಂಸ್ಥೆಗಳು ಸೇರಿದಂತೆ ಸಾಮಾಜಿಕ ಹೋರಾಟ ಗಾರ ಶರಣಪ್ಪ ವಣಗೇರಿ ನೊಂದ ಕುಟುಂಬಕ್ಕೆ ಹಾಗೂ ಗಾಯಾಳುಗಳ ಚಿಕಿತ್ಸೆಗೆ ಮುಂದಾಗಬೇಕೆಂದು ಗ್ರಾಮದ ಜನರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

# ಮಹಿಳೆಯರ ಆರ್ಥಿಕ ಪ್ರಗತಿಗೆ ಸಂಜೀವಿನಿ ಬಲ: ಪಿ ಡಿ ಓ

• ಉದಯವಾಹಿನಿ ಯಲಬುರ್ಗಾ

ಸರ್ಕಾರದ ವತಿಯಿಂದ ರಚಿಸಲಾಗಿರುವ ಸಂಜೀವಿನಿ ಒಕ್ಕೂಟಗಳು ಮಹಿಳೆಯರನ್ನು ಆರ್ಥಿಕವಾಗಿ ಸಬಲರನ್ನಾಗಿಸುವಲ್ಲಿ ಯಶಸ್ವಿಯಾಗಿವೆ ಎಂದು ಅಭಿವೃದ್ಧಿ ಅಧಿಕಾರಿಗಳು ವೀರಭದ್ರ ಗೌಡ ಮುಲಿಮನಿ ಅವರು ಹೇಳಿದರು.

ತಾಲ್ಲೂಕಿನ ಮುಧೋಳ ಗ್ರಾಮದಲ್ಲಿ ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಹಾಗೂ ಜೀವನೋಪಾಯ ಇಲಾಖೆ ಸಂಜೀವಿನಿ ರಾಷ್ಟ್ರೀಯ ಗ್ರಾಮೀಣದ ಅಭಿಯಾನದಡಿಯಲ್ಲಿ ಹಮ್ಮಿಕೊಂಡಿದ್ದ ಶ್ರೀ ತ್ರೀಲಿಂಗ ಬಸವೇಶ್ವರ ಜಾತ್ರಾ ಮಹೋತ್ಸವದ ಪ್ರಯುಕ್ತವಾಗಿ ಸಂಜೀವಿನಿ ಮಹಿಳೆಯರಿಂದ ಸಂಜೀವಿನಿ ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನದಡಿ ಸ್ವಸಹಾಯ ಸಂಘದ ಸದಸ್ಯೆಯರಿಗೆ ಏರ್ಪಡಿಸಲಾದ ಉದ್ಯೋಗ ಸಂಜೀವಿನಿ ಕಾರ್ಯಕ್ರಮಕ್ಕೆ ಅವರು ಚಾಲನೆ ನೀಡಿ ಮಾತನಾಡಿ ಮಹಿಳೆಯರಲ್ಲಿ ಕೌಶಲ ಅಭಿವೃದ್ಧಿಗೊಳಿಸಿ ಅವರನ್ನು ಆರ್ಥಿಕವಾಗಿ ಪ್ರಗತಿ ಶೀಲರನ್ನಾಗಿಸುವ ಸಲುವಾಗಿ ರಾಜ್ಯದೆಲ್ಲೆಡೆ ಸಂಜೀವಿನಿ ಒಕ್ಕೂಟಗಳನ್ನು ರಚಿಸಲಾಗಿದ್ದು, ಪ್ರತಿ ಗ್ರಾಮ ಪಂಚಾಯಿತಿ ಮಟ್ಟದಲ್ಲೂ ಸ್ವಸಹಾಯ


ಉದಯವಾಹಿನಿ ಚಿತ್ರ

ಸಂಘಗಳ ಸಂಜೀವಿನಿ ಒಕ್ಕೂಟಗಳಿವೆ. ಕಿರು ಉದ್ಯಮಗಳನ್ನು ನಡೆಸುವುದಲ್ಲದೇ, ತಾವು ಉತ್ಪಾದಿಸುವ ವಸ್ತುಗಳಿಗೆ ಮಾರುಕಟ್ಟೆಯನ್ನು ಒದಗಿಸಿ ಕೊಡುವ ಕೆಲಸವನ್ನೂ ಸಂಜೀವಿನಿ ಒಕ್ಕೂಟ ಮಾಡುತ್ತಿದೆ ಎಂದರು. ಎನ್ ಆರ್ ಎಲ್ ಎಮ್ ತಾಲ್ಲೂಕ ಆಯೋಜಕರು ಉದಯ ಕುಮಾರ್. ಒಕ್ಕೂಟ ದ ಅಧ್ಯಕ್ಷರು ಶಾಂತ ಹಲಗೇರಿ. ಈರಮ್ಮ ಮಂಡಲಗೇರಿ. ಬಿ ಆರ್‌ಪಿಇಪಿ ಶಿಲ್ಪಾ ಉಳ್ಳಾಗಡ್ಡಿ. ಯಮನೂರಪ್ಪ ರೋಣದ. ಮಹಿಳಾ ಒಕ್ಕೂಟದ ಸರ್ವ ಸದಸ್ಯರು. ಎಮ್ ಬಿ ಕೆ. ಮತ್ತು ಎಲ್ ಸಿ ಆರ್ ಪಿ. ಹಾಗೂ ಕೃಷಿ ಸಖಿ. ಪಶು ಸಖಿ ವಿವಿಧ ಗ್ರಾಮಗಳಿಂದ ಆಗಮಿಸಿದ ಸಂಜೀವಿನಿ ಸ್ವ ಸಹಾಯ ಸಂಘದ ಮಹಿಳೆಯರು ಭಾಗವಹಿದ್ದರು.

# ಪಡಿತರ ಸಾಗಣೆ ಲಾರಿಗಳಿಗೆ ಜಿಪಿಎಸ್ ಅಳವಡಿಸಿ

• ಉದಯ ವಾಹಿನಿ ಕಡೂರು

ಪಡಿತರ ಅಕ್ಕಿಯನ್ನು ಅಕ್ರಮವಾಗಿ ಸಾಗಿಸುವ ಹಗರಣ ತಪ್ಪಿಸಲು, ಪಡಿತರ ಸಾಗಿಸುವ ಲಾರಿಗಳಿಗೆ ಜಿಪಿಎಸ್ ಅಳವಡಿಸಬೇಕು ಎಂದು ನ್ಯಾಯಬೆಲೆ ಅಂಗಡಿ ಮಾಲೀಕರ ಸಂಘದ ರಾಜ್ಯಾಧ್ಯಕ್ಷ ಕೆ.ಕೃಷ್ಣಪ್ಪ ಒತ್ತಾಯಿಸಿದರು.

ಅಕ್ಕಿ ಹಗರಣ ಕುರಿತು ಸರ್ಕಾರ ಸೂಕ್ತ ತನಿಖೆ ಮಾಡಿಸಲಿ, ನ್ಯಾಯಬೆಲೆ ಅಂಗಡಿಗಳಲ್ಲಿ ದಾಸ್ತಾನು ಲೋಪವಿರುವ ಕಡೆಗಳಲ್ಲಿ ಪತ್ತೆ ಹಚ್ಚಿ ಕ್ರಮ ವಹಿಸಲಿ. ನ್ಯಾಯಬೆಲೆ ಅಂಗಡಿಗಳಿಗೆ ಪ್ರತಿ ತಿಂಗಳೂ ಕಮಿಷನ್ ಹಣ ಪಾವತಿ ಮಾಡಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕ್ರಮ ವಹಿಸಬೇಕು. ಇದರ ಸಲುವಾಗಿ ಮುಖ್ಯಮಂತ್ರಿ ಹಾಗೂ ಆಹಾರ ಸಚಿವರನ್ನು ಭೇಟಿ ಮಾಡಲಾಗಿದೆ. ಕೇಂದ್ರ ಸರ್ಕಾರದ ಎನ್‌ಎಫ್‌ಎಸ್‌ಎ ಕಮಿಷನ್ ಸಹ ಬಂದಿರುವುದಿಲ್ಲ, ಇದಕ್ಕಾಗಿ ಅಧಿಕಾರಿಗಳಲ್ಲಿ ಮನವಿ ಮಾಡಲಾಗಿದೆ.

ಪ್ರತಿ ತಿಂಗಳ ಐದರ ಒಳಗೆ ಬಿಲ್‌ಗಳು ಆಯಾ ಜಿಲ್ಲಾಧಿಕಾರಿ ಕಚೇರಿಗೆ ಬರಬೇಕಿದೆ. ತಹಶೀಲ್ದಾರ್ ಕಚೇರಿಯಿಂದ ಬಿಲ್‌ಗಳನ್ನು ಸರಿಯಾದ ಸಮಯಕ್ಕೆ ಕಳುಹಿಸಬೇಕು ಎಂದರು. ಹಲವಾರು ವರ್ಷಗಳಿಂದ ಸಮರ್ಪಕವಾದ ತೂಕದಲ್ಲಿ ನ್ಯಾಯಬೆಲೆ ಅಂಗಡಿಗಳಿಗೆ ಗೋದಾಮುಗಳ ಮೂಲಕ ಅಕ್ಕಿ ವಿತರಿಸುತ್ತಿಲ್ಲ, ಕೊರತೆಯಾದರೆ ಹೊಣೆ ಯಾರು? ಸಮರ್ಪಕವಾದ ರೀತಿಯಲ್ಲಿ ತೂಕ ಕೊಡಿಸಲು ಆಹಾರ ಇಲಾಖೆ ಅಧಿಕಾರಿಗಳು ಕ್ರಮ ವಹಿಸಬೇಕಿದೆ. ಅಕ್ರಮಗಳಿಗೆ ಕಡಿವಾಣ ಹಾಕಲು ನ್ಯಾಯಬೆಲೆ ಅಂಗಡಿಗಳಿಗೆ ಸಿಸಿ ಟಿ.ವಿ ಕ್ಯಾಮೆರಾ ಹಾಗೂ ಅಕ್ಕಿ ತುಂಬಿದ ಲಾರಿಗಳಿಗೆ ಜಿಪಿಎಸ್ ಅಳವಡಿಸಿದಾಗ ಮಾತ್ರ ದುರ್ಬಳಕೆ ಕಡಿಮೆಯಾಗಲಿದೆ ಎಂದು ನುಡಿದರು.


ಉದಯವಾಹಿನಿ ಚಿತ್ರ

**ಅಕ್ಕಿ ಹಗರಣ ಕುರಿತು ಸರ್ಕಾರ ಸೂಕ್ತ ತನಿಖೆ ಮಾಡಿಸಲಿ**

ಪಡಿತರ ಅಂಗಡಿಯವರು ಪಡಿತರದಾರರ ಕುಟುಂಬದ ಸದಸ್ಯರ ಮಾಹಿತಿ ಸಂಗ್ರಹಿಸಲು ನಡೆಸಿದ ಇ-ಕೈವೈಸಿ ಹಣವು ವರ್ಷಗಳೇ ಉರುಳಿದರೂ ಈವರೆಗೂ ಬಿಡುಗಡೆಯಾಗಿಲ್ಲ. ರಾಜ್ಯದಲ್ಲಿ ಈಗಾಗಲೇ ಸುಮಾರು 3-4 ಲಕ್ಷ ಬಿಪಿಎಲ್ ಪಡಿತರ ಕಾರ್ಡುಗಳು ರದ್ದಾಗಿವೆ. ಎಷ್ಟೋ ಅರ್ಹರು ಈಗಲೂ ಬಿಪಿಎಲ್ ಪಟ್ಟಿಯಿಂದ ಹೊರಗೆ ಇದ್ದು, ನಿಜವಾದ ಬಡವರಿಗೆ ಬಿಪಿಎಲ್ ಕಾರ್ಡ್ ದೊರಕಬೇಕಿದೆ.

ಶ್ರೀಮಂತರ ಕಾರ್ಡ್‌ಗಳನ್ನು ರದ್ದು ಮಾಡಿ ಯಾರ ಅಭ್ಯಂತರವೂ ಇಲ್ಲ. ಈಗಾಗಲೇ ರದ್ದಾಗಿರುವ ಪಡಿತರ ಕಾರ್ಡ್‌ಗಳನ್ನು ಅರ್ಹರನ್ನು ಗುರುತಿಸಿ ನೀಡಲು ಮುಂದಾಗಬೇಕು. ಸ್ಥಳೀಯ ಸಂಸ್ಥೆಗಳ ಚುನಾವಣೆಗಳು ಸಮೀಪಿಸುತ್ತಿದ್ದು, ಕೊಡುವ ಅಕ್ಕಿಯನ್ನು ಕಡಿಮೆ ಮಾಡಬೇಡಿ. ಪ್ರಿಂಟರ್‌ಗಳನ್ನು ಅಳವಡಿಸಲು ನ್ಯಾಯಬೆಲೆ ಅಂಗಡಿಗಳಿಗೆ ಅಧಿಕಾರಿಗಳು ಒತ್ತಾಯಿಸಬಾರದು ಎಂದರು.

# ಟನ್ ಕಬ್ಬಿಗೆ ರೂ. 3500 ಬೆಲೆ ನಿಗದಿಗೆ ಒತ್ತಾಯ

• ಉದಯವಾಹಿನಿ ಕಲಬುರಗಿ

ಸರ್ಕಾರವು ಸಕ್ಕರೆ ಕಾರ್ಖಾನೆ ಮಾಲೀಕರ ಗುಲಾಮರಂತೆ ವರ್ತಿಸುತ್ತಿದೆ ಹೊರತು ರೈತರ ಹಿತ ಕಾಯುತ್ತಿಲ್ಲ ಎಂದು ಕಲಬುರಗಿ ಜಿಲ್ಲೆಯ ಹಾಲ ಸುಲ್ತಾನಪೂರದ ಗ್ರಾಮದ ರೈತ ಮುಖಂಡರು ಬೆಳಗಾವಿಯ ವಿಧಾನಸೌಧ ಎದುರುಗಡೆ ಆಕ್ರೋಶ ವ್ಯಕ್ತಪಡಿಸಿದರು. ಬೆಳಗಾವಿಯ ಅಧಿವೇಶನದ ಸಂದರ್ಭದಲ್ಲಿ ಹೋರಾಟದಲ್ಲಿ ಭಾಗವಹಿಸಿ ಮಾತನಾಡಿದ ರೈತರು, ಜನಪ್ರತಿನಿಧಿಗಳು ಸ್ವಂತ ಸಕ್ಕರೆ ಕಾರ್ಖಾನೆಗಳನ್ನು ಹೊಂದಿದ್ದು ಕಬ್ಬು ಬೆಳೆಗಾರರ ಕಷ್ಟ, ಅವರ ಕಷ್ಟ ಗೊತ್ತಾಗುತ್ತಿಲ್ಲ ಎಂದು ಜನಪ್ರತಿನಿಧಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಪಕ್ಕದ ಮಹಾರಾಷ್ಟ್ರದಲ್ಲಿ ಟನ್ ಕಬ್ಬಿಗೆ ರೂ.3500 ಬೆಲೆ ಕೊಡುತ್ತಿದ್ದು, ಅವರಿಗೆ ಸಾಧ್ಯವಾಗಿರುವಾಗ ಕರ್ನಾಟಕದ ಸಕ್ಕರೆ ಕಾರ್ಖಾನೆಯವರಿಗೆ ಏನಾಗಿದೆ. ಒಂದು ಟನ್ ಕಬ್ಬಿನಿಂದ ಲಕ್ಷಾಂತರ ಹಣವನ್ನು ಲಾಭ ಮಾಡಿಕೊಳ್ಳುವರು, ಸರ್ಕಾರದ ಬೊಕ್ಕಸಕ್ಕೆ ತೆರಿಗೆ ಸೇರುವುದು. ಆದರೆ ರೈತ ಮಾತ್ರ ತನ್ನ ಕಷ್ಟಕ್ಕೆ ತಕ್ಕಂತೆ ಬೆಲೆ ದೊರೆಯದೆ ಕಷ್ಟದಲ್ಲಿ ಬೀದಿಗೆ ಬರಬೇಕಾಗಿದೆ


ಉದಯವಾಹಿನಿ ಚಿತ್ರ

ಎಂದರು. ದೇಶದಲ್ಲಿ ಶೇ 75 ರೈತರಿದ್ದು ನಮ್ಮ ಮತದ ಶಕ್ತಿಯಿಂದ ಶಾಸಕರು, ಸಚಿವರು, ಪ್ರಧಾನಿಯಾಗುತ್ತಿದ್ದು ಮತ್ತು ಸರ್ಕಾರವು ಅಸ್ತಿತ್ವಕ್ಕೆ ಬರುತ್ತದೆ. ಆದರೆ ದೇಶಕ್ಕೆ ಅನ್ನ ಹಾಕುವ ರೈತರ ಬಗ್ಗೆ ಯಾರಿಗೂ ಕಾಳಜಿ ಇಲ್ಲ. ಚುನಾವಣೆ ಪ್ರಣಾಳಿಕೆಯಲ್ಲಿ ಮಾತ್ರ ರೈತರ ಪರವಾದ ದೊಡ್ಡ ಭರವಸೆ ತೋರಿಸಿ, ಅಧಿಕಾರ ಬಂದ ಮೇಲೆ ರೈತರು ಇವರ ಕಣ್ಣಿಗೆ ಕಾಣುವುದಿಲ್ಲ ಎಂದು ಅವರು ದೂರಿದರು.ಆದರೆ ರೈತರಿಗೆ ಕಬ್ಬಿಗೆ ಬೆಲೆ ನಿಗದಿ ಮಾಡಬೇಕು ಎಂದರು. ರೈತರು ಬೀದಿಗೆ ಇಳಿದರು ಸರ್ಕಾರ ಸ್ಪಂದಿಸುತ್ತಿಲ್ಲ ಎಂದು ಅವರು ಆಕ್ರೋಶ ಹೊರ ಹಾಕಿದರು.

# ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ರಾಜಕೀಯವಾಗಿ ಬೆಳೆಯಲು ಮೀಸಲಾತಿ ಅವಶ್ಯಕ

## ಎಲ್ಲಾ ರಾಜಕೀಯ ಪಕ್ಷಗಳು ಚುನಾವಣಾ ಸಮಯ ಕೋಲಿ ಕಬ್ಬಲಿಗ ಸಮಾಜಕ್ಕೆ ಕೊಟ್ಟ ಮಾತು ಪರಿಹರಿಸದೆ ಅನ್ಯಾಯ: ನಾಟೀಕಾರ

• ಉದಯವಾಹಿನಿ ಚಿಂಚೋಳಿ

ರಾಜಕೀಯ ಎಲ್ಲಾ ಪಕ್ಷಗಳು ಕೋಲಿ ಕಬ್ಬಲಿಗ ಸಮಾಜಕ್ಕೆ ಚುನಾವಣಾ ಸಂದರ್ಭದಲ್ಲಿ ಎಸ್.ಟಿ ಪಟ್ಟಿಗೆ ಸೇರಿಸುತ್ತೇವೆಂದು ಸುಳ್ಳು ಹೇಳಿ ಸಮಾಜದ ಮತಗಳು ಪಡೆದು ತದನಂತರ ನಮ್ಮ ಸಮಾಜಕ್ಕೆ ಸತತವಾಗಿ ಅನ್ಯಾಯ ಮಾಡುತ್ತಾ ಬಂದಿವೆ ಎಂದು ಅಫಜಲಪುರ ಶಿವಕುಮಾರ ನಾಟೀಕಾರ ಆಕ್ರೋಶ ವ್ಯಕ್ತಪಡಿಸಿದರು.

ಪಟ್ಟಣದ ಚಂದಾಪೂರದ ಅಂಬಿಗರ ಚೌಡಯ್ಯ ಭವನದಲ್ಲಿ ತಾಲ್ಲೂಕಾ ಕೋಲಿ ಕಬ್ಬಲಿಗ ಸಮಾಜದಿಂದ ಹಮ್ಮಿಕೊಂಡಿದ್ದ ಎಸ್ಟಿಗಾಗಿ ಕಲಬುರ್ಗಿಯಲ್ಲಿ 29 ರಂದು ನಡೆಯಲ್ಲಿರುವ ಬೃಹತ್ ಹೋರಾಟ ಕುರಿತು ಪೂರ್ವಭಾವಿ ಸಭೆ ಮತ್ತು ಕರ್ನಾಟಕ ಸರ್ಕಾರದ ಜವಾಹರ ಬಾಲಭವನ ಸೂಸೈಟಿಯ ಉಪಾಧ್ಯಕ್ಷರಾಗಿ ನಾಮನಿರ್ದೇಶನವಾದ ಅನೀಲ ದೇವೀಂದ್ರಪ್ಪ ಜಮಾದಾರಗೆ ಅಭಿನಂದನಾ ಸಮಾರಂಭದಲ್ಲಿ ಮಾತನಾಡಿದ ಅವರು, ಇದೆ 29ರಂದು ಕಲಬುರ್ಗಿಯಲ್ಲಿ ಕೋಲಿ ಕಬ್ಬಲಿಗ ತಳವಾರ ಸಮಾಜಕ್ಕೆ ಎಸ್.ಟಿ.ಪ್ರಮಾಣಪತ್ರ ನೀಡುವಂತೆ ಒತ್ತಾಯಿಸಿ ಬೃಹತ್ ಪ್ರತಿಭಟನೆ ಹಮ್ಮಿಕೊಂಡಿದ್ದು ಸಮಾಜದ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಯಶಸ್ವಿಗೊಳಿಸಬೇಕು. ನಮ್ಮ ಸಮಾಜಕ್ಕೆ ಕೆಲ ವರ್ಷಗಳ ಹಿಂದೆ ಯನಾಗುಂದಿಯಲ್ಲಿ ಬೃಹತ್ ಹೋರಾಟ ನಡೆಸಿ ಗಂಗಾಮತ ಸಮಾಜ ಎಸ್‌ಟಿಗೆ ಸೇರಿಸುವಂತೆ ಭನವಿ ಸಲ್ಲಿಕೆ ಮಾಡಿದ್ದು ದೊಡ್ಡ ತಪ್ಪಾಗಿದೆ,ಈಗಲಾದರೂ ಸಮಾಜದ ಬಾಂಧವರು ಎಲ್ಲರೂ ಒಗ್ಗಟ್ಟಾಗಿದರೆ ಶಕ್ತಿ ಹೆಚ್ಚುತ್ತದೆ ಕೇಂದ್ರ, ರಾಜ್ಯ ಸರ್ಕಾರಗಳ ಮೇಲೆ ಒತ್ತಡ ಹಾಕಿದರೆ ನಮ್ಮ ಹಕ್ಕು ನಮಗೆ ಸಿಗುವುದರಲ್ಲಿ ಯಾವುದೇ ಸಂಶಯವಿಲ್ಲ,ತಳವಾರ ಸಮಾಜಕ್ಕೆ ರಾಜ್ಯಾದ್ಯಂತ ಎಸ್.ಟಿ ಪ್ರಮಾಣಪತ್ರ ವಿತರಣೆ ಮಾಡುತ್ತಿದ್ದು ಕಲಬುರ್ಗಿ ಯಾದಗಿರಿ ಜಿಲ್ಲೆಗಳಲ್ಲಿ ಕೊಡುತ್ತಿಲ್ಲ ಅದಕ್ಕಾಗಿ ಈಗಾಗಲೇ ಸಮಾಜದ ಎಂಎಲ್ಸಿ ಶಾಸಕರು ಸಿಎಂ ಮೇಲೆ ಒತ್ತಡ ಹಾಕುತ್ತಿದ್ದಾರೆ.


ಉದಯವಾಹಿನಿ ಚಿತ್ರ

> ಡಿ.29ರಂದು ಕಲಬುರ್ಗಿಯಲ್ಲಿ ಬೃಹತ್ ಪ್ರತಿಭಟನೆ ಹಮ್ಮಿಕೊಂಡಿದ್ದು ಕೋಲಿ ಕಬ್ಬಲಿಗ ಅಂಬಿಗ ಬೆಸ್ತ ಬಾರಿಕ ಪರ್ಯಾಯ ಪದಗಳನ್ನು ರಾಜ್ಯ ಸರ್ಕಾರವು ಎಸ್.ಟಿ ಪಟ್ಟಿಗೆ ಸೇರಿಸುವಂತೆ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಬೇಕು,ಮತ್ತು ಕೇಂದ್ರ ಸರ್ಕಾರವು ಕೋಲಿ ಸಮಾಜಕ್ಕೆ ಮತ್ತು ಪರ್ಯಾಯ ಪದಗಳಿಗೆ ಎಸ್ ಟಿ ಪಟ್ಟಿಗೆ ಸೇರಿಸಬೇಕು,ಕಲಬುರ್ಗಿ ಯಾದಗಿರಿ ಜಿಲ್ಲೆಗಳಲ್ಲಿ ತಳವಾರ ಸಮಾಜಕ್ಕೆ ಎಸ್ ಟಿ.ಪ್ರಮಾಣಪತ್ರ ವಿತರಿಸಬೇಕೆಂದು ಹಲವಾರು ಬೇಡಿಕೆಗಳನ್ನು ಇಟ್ಟಕೊಂಡು ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಸಮಾಜದ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಪ್ರತಿಭಟನೆ ಯಶಸ್ವಿಗೊಳಿಸಬೇಕು.
> - ಶಿವಕುಮಾರ ನಾಟೀಕಾರ, ಕೋಲಿ ಸಮಾಜ ಮುಖಂಡ.

ಕಲಬುರ್ಗಿ ಜಿಲ್ಲೆಯಲ್ಲಿ 9ಕ್ಷೇತ್ರದಲ್ಲಿ 6-7 ಮತಕ್ಷೇತ್ರದಲ್ಲಿ ಕೋಲಿ ಕಬ್ಬಲಿಗ ಸಮಾಜ ಮತಗಳು ಯಾರೇ ಶಾಸಕರಾಗಲಿ ಗೆಲುವಿಗೆ ಮಹತ್ವ ಪಡೆಯಲಿವೆ,ಅನೀಲ ಜಮಾದಾರಗೆ ಕೋಲಿ ಸಮಾಜದಿಂದ ಬಾಲಭವನ ಉಪಾಧ್ಯಕ್ಷ ಮಾಡಿದ್ದು ಸಂತಸ ತಂದಿದೆ ಎಂದರು.

**ಶಿವಕುಮಾರ ನಾಟೀಕಾರ ಆಕ್ರೋಶ**

ಕೃಷ್ಣಕಾಡಾ ಮಾಜಿ ಅಧ್ಯಕ್ಷ ಶರಣಪ್ಪ ತಳವಾರ ಮಾತನಾಡಿ ರಾಜ್ಯ ಸಿದ್ದರಾಮಯ್ಯ ಸರ್ಕಾರ ಕೋಲಿ ಕಬ್ಬಲಿಗ ಅಂಬಿಗ ಬೆಸ್ತ ಬಾರಿಕ ಉಪಜಾತಿಗಳು ಎಸ್.ಟಿ ಪಟ್ಟಿಗೆ ಸೇರಿಸಲು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಬೇಕು. ಕೋಲಿ ಕಬ್ಬಲಿಗ ಬೇಸ್ತ ಬಾರಿಕ ಅಂಬಿಗ ಸಮಾಜದವರು ಕರ್ನಾಟಕದಲ್ಲಿ ಅತ್ಯಂತ ಹಿಂದುಳಿದಿವೆ, ಸಾಮಾಜಿಕ,ಆರ್ಥಿಕ, ಶೈಕ್ಷಣಿಕ, ರಾಜಕೀಯವಾಗಿ ಬೆಳೆಯಲು ಮೀಸಲಾತಿ ಅವಶ್ಯಕವಾಗಿದೆ ಮುಂದಿನ ಪೀಳಿಗೆಗೆ ಅನುಕೂಲವಾಗಲಿದೆ ಮೀಸಲಾತಿ ಕೊಟ್ಟಿದರೆ ಸರಿ ಇಲ್ಲಾದಿದ್ದರೆ ಬರುವ ದಿನಗಳಲ್ಲಿ ಬೃಹತ್ ಹೋರಾಟಗಳು ಮಾಡಲಾಗುವುದು ಸಮಾಜದ ಬಾಂಧವರು ಸದಾ ಬೆಂಬಲ ನೀಡಬೇಕು ಆಗ ನಮ್ಮ ಹಕ್ಕು ನಮಗೆ ಸಿಗಲು ಸಾಧ್ಯ, ಅನೀಲ ದೇವೀಂದ್ರಪ್ಪ ಜಮಾದಾರಗೆ ಗುರುತಿಸಲು 29ವರ್ಷ ಹಿಡಿದಿದೆ ಇವರನ್ನು ಎಂದೂ ಶಾಸಕ ಸಂಸದ ಮಾಡಬೇಕಿತ್ತು ಈಗ ಮಾಡಿದ್ದಕ್ಕಾಗಿ ಹೈಕಮಾಂಡ್‌ಗೆ ಧನ್ಯವಾದ ಸಲ್ಲಿಸುತ್ತೇನೆ ಎಂದರು.

ಕೋಲಿ ಸಮಾಜ ರಾಜ್ಯ ಪ್ರಧಾನ ಕಾರ್ಯದರ್ಶಿ ಲಕ್ಷ್ಮಣ ಆವುಂಟಿ,ಜಿಲ್ಲಾಧ್ಯಕ್ಷ ರವಿರಾಜ ಕೊರವಿ,ಶೋಭಾ ಬಾಣಿ,ಶಾಂತಪ್ಪ ಪಾಟೀಲ,ರೇಖಾ ಬಸವಕಲ್ಯಾಣ,ಸುರೇಶ ಭಂಟ್ನಾ,ಗಿರಿರಾಜ ನಾಟೀಕಾರ ಮಾತನಾಡಿದರು.

ಈ ಸಂದರ್ಭದಲ್ಲಿ ನರಸಿಂಹಮ್ಮು ಸವಾರಿ, ಮಲ್ಲಿಕಾರ್ಜುನ ಕೋಟಪಲ್ಲಿ, ಸುರೇಶ ಹುಡಗಿ, ನಾಮದೇವ ಪಾಟೀಲ, ವೈಜನಾಥ ದಾದಿ,ಮಲ್ಲಿಕಾರ್ಜುನ ರಾಮತೀರ್ಥ, ರಮೇಶ ವಾರಕರ, ಹಣಮಂತ ಗೌರಿ, ಬಸವರಾಜ ಸೈದಾಪುರ,ಶರಣು ನಾಟೀಕಾರ, ರವಿಕಾಂತ ಹೂಸಬಾವಿ,ಕಾಶಿನಾಥ ನಾಟೀಕಾರ, ಭಗವಂತ ಬೆಣ್ಣೂರ,ಸೇರಿದಂತೆ ಅನೇಕರಿದ್ದರು.

## ಮಿನಿ ನ್ಯೂಸ್

### ಮೆಕ್ಕೆಜೋಳ ಖರೀದಿ ಕೇಂದ್ರ ಪುನರ್ ಆರಂಭಕ್ಕೆ ಆಗ್ರಹ: ತಹಶೀಲ್ದಾರ್‌ಗೆ ಮನವಿ

• ಉದಯವಾಹಿನಿ ನರಗುಂದ

ಮೆಕ್ಕೆಜೋಳ ಖರೀದಿ ಕೇಂದ್ರ ಪುನರ್ ಆರಂಭಿಸಬೇಕೆಂದು ಆಗ್ರಹಿಸಿ ರೈತ ಸಂಘ ಹಾಗೂ ಹಸಿರು ಸೇನೆ ಸದಸ್ಯರು ತಹಶೀಲ್ದಾರ್ ಅವರಿಗೆ ಮನವಿ ಸಲ್ಲಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ರೈತ ಸಂಘ ಹಾಗೂ ಹಸಿರು ಸೇನೆ ಜಿಲ್ಲಾ ಘಟಕದ ಅಧ್ಯಕ್ಷ ಬಸವರಾಜ ಸಾಬಳೆ ಅವರು, ತಾಲ್ಲೂಕಿನಲ್ಲಿ ಐನೂರಕ್ಕೂ ಹೆಚ್ಚು ರೈತರು ಮೆಕ್ಕೆಜೋಳ ಬೆಳೆದಿದ್ದಾರೆ. ಆದರೆ ಸರ್ಕಾರ ಬೆಂಬಲ ಬೆಲೆ ಯೋಜನೆಯಡಿ ಕೇವಲ 190 ರೈತರ ಹೆಸರನ್ನು ನೊಂದಣಿ ಮಾಡಿಕೊಂಡು ನರಗುಂದ ತಾಲ್ಲೂಕಿನ ಕೋಟಾ ಮುಗಿದ ಪರಿಣಾಮ ನೊಂದಣಿ ಸಾಫ್ಟ್‌ವೇರ್ ಬಂದ್ ಆಗಿದೆ ಎಂದು ಸಂಬಂಧಿಸಿದ ಅಧಿಕಾರಿಗಳು ಹೇಳುತ್ತಾರೆ. ಜೊತೆಗೆ ಖರೀದಿ ಕೇಂದ್ರವು ಬಂದ್ ಆಗಿದೆ. ಹೀಗಾದರೆ ಉಳಿದ ರೈತರ ಪಾಡೇನು ಎಂದು ಆಕ್ರೋಶ ವ್ಯಕ್ತಪಡಿಸಿದರು.

ಆದ್ದರಿಂದ ಕೂಡಲೇ ಖರೀದಿ ಕೇಂದ್ರ ಪುನರ್ ಆರಂಭಿಸುವಂತೆ ಸಾಬಳೆ ಆಗ್ರಹಿಸಿದರು. ಸದಸ್ಯ ಚನ್ನು ನಂದಿ ಮಾತನಾಡಿ ಮುಂಗಾರು ಸಂದರ್ಭದಲ್ಲಿ ಅತಿವೃಷ್ಟಿಯಿಂದ ಬೆಳೆ ಹಾನಿ ಸಂಭವಿಸಿದೆ. ಪರಿಹಾರ ಸಮರ್ಪಕವಾಗಿ ನೀಡಿಲ್ಲ. ಆದ್ದರಿಂದ ಕೂಡಲೇ ಪರಿಹಾರ ನೀಡಬೇಕು. ಬೆಳೆ ವಿಮೆ ಬಿಡುಗಡೆ ಮಾಡಬೇಕು. ರಾಷ್ಟ್ರೀಕೃತ ಬ್ಯಾಂಕ್‌ಗಳ ಸಾಲ ಮನ್ನಾ ಮಾಡಬೇಕು ಎಂದು ಆಗ್ರಹಿಸಿದರು.

### ರೈತರಿಗೆ ವಂಚನೆ ಆರೋಪ

• ಉದಯವಾಹಿನಿ ಮೂಡಿಗೆರೆ

ಮಳೆಯಿಂದ ಸಂಕಷ್ಟದಲ್ಲಿರುವ ರೈತರಿಗೆ ಬೆಳೆವಿಮೆ ಯೋಜನೆಯಲ್ಲಿ ಹಣ ಪಾವತಿಸದೇ ವಂಚಿಸಲಾಗಿದೆ ಎಂದು ರಾಜ್ಯ ರೈತ ಸಂಘ ಗ್ರೀನ್ ಆರ್ಮಿ ಇಂಡಿಯಾದ ಜಿಲ್ಲಾ ಕಾರ್ಯಾಧ್ಯಕ್ಷ ಬಿ.ಸಿ. ದಯಾಕರ್ ಆರೋಪಿಸಿದರು. ಪಟ್ಟಣದಲ್ಲಿ ಬೆಳೆವಿಮೆ ವಂಚನೆಯ ಬಗ್ಗೆ ಕ್ರಮಕೈಗೊಳ್ಳುವಂತೆ ಒತ್ತಾಯಿಸಿ, ತಹಶೀಲ್ದಾರ್ ಮೂಲಕ ರಾಜ್ಯಪಾಲರಿಗೆ ಮನವಿ ಸಲ್ಲಿಸಿದ ಬಳಿಕ ಅವರು ಮಾತನಾಡಿದರು.

ವಿಮಾ ಕಂಪನಿಗೆ ಲಾಭ ಮಾಡಿಕೊಡುವ ದೃಷ್ಟಿಯಿಂದ ರಾಜ್ಯ ಸರ್ಕಾರವು ಬೆಳೆವಿಮೆ ಪರಿಹಾರ ನೀಡುವ ಮಾರ್ಗಸೂಚಿ ಮಾನದಂಡ ಬದಲಾವಣೆ ಮಾಡಿದೆ. ಇದರಿಂದ ಸಂಕಷ್ಟದಲ್ಲಿರುವ ರೈತರಿಗೆ ಬೆಳೆವಿಮೆ ಯೋಜನೆಯಲ್ಲಿ ಹಣ ಪಾವತಿಸದೇ ವಂಚಿಸಲಾಗಿದೆ. ಈ ಬಾರಿ ಅತಿಯಾದ ಮಳೆಯಿಂದ ಶೇ 80ರಷ್ಟು ಕಾಫಿ, ಅಡಿಕೆ, ಕಾಳುಮೆಣಸು, ಏಲಕ್ಕಿ, ಶುಂಠಿ ಇತರೆ ಬೆಳೆಗಳು ನಾಶವಾಗಿವೆ. ಇದರಿಂದ ಆರ್ಥಿಕ ಸಂಕಷ್ಟ ನಿವಾರಿಸಿಕೊಳ್ಳಲು ಜಿಲ್ಲೆಯಲ್ಲಿ 39,550 ರೈತರು ಬೆಳೆವಿಮೆ ಪಾವತಿಸಿದ್ದಾರೆ. ಆದರೆ, 9,000 ರೈತರಿಗೆ ವಿಮೆ ಕಟ್ಟಿದ ಹಣಕ್ಕಿಂತ ಕಡಿಮೆ ಹಣ ಪಾವತಿಸಿದ್ದು, ಉಳಿದ ರೈತರನ್ನು ಕೈ ಬಿಡಲಾಗಿದೆ. ಕೂಡಲೇ ರಾಜ್ಯಮಟ್ಟದ ನೈಸರ್ಗಿಕ ವಿಕೋಪ ನಿರ್ವಹಣಾ ಕೇಂದ್ರ, ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಕೇಂದ್ರಗಳು, ಜನಪ್ರತಿನಿಧಿಗಳು ಈ ಬಗ್ಗೆ ಗಮನ ಹರಿಸಿ ರೈತರಿಗೆ ಆದ ಅನ್ಯಾಯ ಹಾಗೂ ಬೆಳೆಯ ಆರ್ಥಿಕ ನಷ್ಟವನ್ನು ಭರಿಸಿಕೊಡಲು ಕೂಡಲೇ ಕ್ರಮ ಕೈಗೊಳ್ಳಬೇಕು. ಇಲ್ಲವಾದರೆ ಮುಂದಿನ ದಿನಗಳಲ್ಲಿ ರೈತ ಸಂಘಟನೆಯಿಂದ ಪ್ರತಿಭಟನೆ ನಡೆಸಲಾಗುವುದು ಎಂದು ಎಚ್ಚರಿಕೆ ನೀಡಿದರು.

### ಪತ್ರ ಬರಹಗಾರರ ಅನಿರ್ದಿಷ್ಟಾವಧಿ ಮುಷ್ಕರ

• ಉದಯವಾಹಿನಿ ರಾಣೆಬೆನ್ನೂರು

ಹೊರ ರಾಜ್ಯಗಳಲ್ಲಿ ಇರುವಂತೆ ನಮ್ಮ ರಾಜ್ಯದಲ್ಲೂ ಪತ್ರ ಬರಹಗಾರರಿಗೆ ಪತ್ಯೇಕ ಲಾಗಿನ್ ಕೊಡಬೇಕು. ನೋಂದಣಿ ಆಗುವ ಎಲ್ಲಾ ದಸ್ತಾವೇಜುಗಳಿಗೆ ಕಡ್ಡಾಯವಾಗಿ ಪತ್ರ ಬರಹಗಾರರ ಬಿಕ್ಕಲಂ ಕಡ್ಡಾಯಗೊಳಿಸಬೇಕು. ದಸ್ತು ಬರಹಗಾರರ ಸೇವಾ ಶುಲ್ಕ ಹೆಚ್ಚಳ ಮಾಡುವುದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸಬೇಕೆಂದು ಆಗ್ರಹಿಸಿ ನಗರದ ಮಿನಿ ವಿಧಾನಸೌಧದ ಎದುರುಗಡೆ ಕರ್ನಾಟಕ ರಾಜ್ಯ ನೋಂದಣಿ ಮತ್ತು ಮುದ್ರಾಂಕ ಇಲಾಖೆಯಿಂದ ಪರವಾನಗಿ ಪಡೆದ ಪತ್ರ ಬರಹಗಾರರ ಒಕ್ಕೂಟದ ತಾಲ್ಲೂಕು ಘಟಕದ ಪತ್ರ ಬರಹಗಾರರ ಸಂಘದ ಪದಾಧಿಕಾರಿಗಳು ಮತ್ತು ಸದಸ್ಯರು ಗುರುವಾರ ಅನಿರ್ದಿಷ್ಟಾವಧಿ ಮುಷ್ಕರ ನಡೆಸಿದರು.

ಒಕ್ಕೂಟದ ರಾಜ್ಯ ಘಟಕದ ಉಪಾಧ್ಯಕ್ಷ ಬಸವರಾಜ ಲಕ್ಷೇಶ್ವರ ಮಾತನಾಡಿ, ಉಪನೋಂದಣಿ ಕಚೇರಿಗಳಲ್ಲಿ ಅನಧಿಕೃತ ವ್ಯಕ್ತಿಗಳು ಬರುವುದನ್ನು ತಡೆಗಟ್ಟುವುದು, ಎಲ್ಲಾ ಅಧಿಕೃತ ಬರಹಗಾರರಿಗೆ ಗುರುತಿನ ಚೀಟಿ ನೀಡಬೇಕು. ಕಾವೇರಿ 2.0 ತಂತ್ರಾಂಶಗಳಲ್ಲಿನ ನ್ಯೂನತೆಗಳನ್ನು ಸರಿಪಡಿಸಬೇಕೆಂದು ಆಗ್ರಹಿಸಿ ಶಾಂತಿಯುತ ಮುಷ್ಕರ ಹಮ್ಮಿಕೊಂಡಿದ್ದೇವೆ' ಎಂದರು.

### ಆಹಾರ ಕ್ರಮದಿಂದ ಮಕ್ಕಳ ಮೇಲೆ ಪರಿಣಾಮ

• ಉದಯವಾಹಿನಿ ಹಾಸನ

ಇಂದಿನ ಆಹಾರ ಕ್ರಮ ನೇರವಾಗಿ ಮಕ್ಕಳ ದೈಹಿಕ ಮತ್ತು ಮಾನಸಿಕ ಆರೋಗ್ಯದ ಮೇಲೆ ಪರಿಣಾಮ ಬೀರುತ್ತದೆ' ಎಂದು ಫೆವಾರ್ಡ ಹಾಸನ ಅಧ್ಯಕ್ಷೆ ಕಲಾವತಿ ಮಧುಸೂದನ ಹೇಳಿದರು.

ಹಾಸನ ಜಿಲ್ಲಾ ಸ್ವಯಂ ಸೇವಾ ಸಂಸ್ಥೆಗಳ ಒಕ್ಕೂಟ, ಐಆರ್‌ಡಿ, ವಿಜಯಪುರದ ಸ್ಪಂದನ ಸಂಸ್ಥೆ, ಫೆವಾರ್ಡ ಕರ್ನಾಟಕ ವತಿಯಿಂದ ಆಲೂರಿನ ಹರ್ಷಿತ ಸಂಸ್ಥೆಯ ನೇತೃತ್ವದಲ್ಲಿ ನಗರದ ಕುವೆಂಪು ನಗರ ಕೃಷ್ಣ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಯಲ್ಲಿ ಆಯೋಜಿಸಿದ್ದ ರಕ್ತಹೀನತೆ ತಡೆಗಟ್ಟುವ ಅರಿವು ಹಾಗೂ ಆರೋಗ್ಯ ತಪಾಸಣೆ ಶಿಬಿರದಲ್ಲಿ ಅವರು ಮಾತನಾಡಿದರು.

ಸ್ವಯಂ ಸೇವಾ ಸಂಸ್ಥೆಗಳು ಸಾಮಾಜಿಕ ಅಭಿವೃದ್ಧಿಗಾಗಿ ಸೇವೆ ಸಲ್ಲಿಸುತ್ತಿದ್ದು, ಪ್ರಸ್ತುತ ಆಹಾರ ಕ್ರಮದ ವ್ಯತ್ಯಾಸದಿಂದ ರಕ್ತ ಹೀನತೆ, ಅಪೌಷ್ಟಿಕತೆ ಉಂಟಾಗಿ ಮಕ್ಕಳು ನಿಶಕ್ತಿಯಿಂದ ಬಳಲುವಂತಾಗಿದೆ. ಕೋಪ, ದುಃಖ, ಖಿನ್ನತೆ, ಭಯ, ಆಲಸ್ಯಗಳಿಗೆ ಒಳಗಾಗಿ ವ್ಯಾಸಂಗದತ್ತ ಗಮನ ಹರಿಸಲು ತೊಡಕಾಗುತ್ತಿದೆ ಎಂದರು.

ನಿತ್ಯ ಸೇವಿಸುವ ರಾಸಾಯನಿಕ ಯುಕ್ತ ಆಹಾರದಿಂದ ಆರೋಗ್ಯದಲ್ಲಿ ವ್ಯತ್ಯಾಸವಾಗುತ್ತಿದ್ದು, ಸರ್ಕಾರ ಮತ್ತು ಸಂಘ ಸಂಸ್ಥೆಗಳು ರಕ್ತಹೀನತೆ ಮುಕ್ತ ಅಭಿಯಾನದ ಮೂಲಕ ಆರೋಗ್ಯಕರ ಸಮಾಜವನ್ನಾಗಿಸುವ ನಿಟ್ಟಿನಲ್ಲಿ ಹಲವಾರು ಕ್ರಮಗಳನ್ನು ಕೈಗೊಂಡಿವೆ. ಈ ಹಿನ್ನೆಲೆಯಲ್ಲಿ ರಕ್ತಹೀನತೆ ತಪಾಸಣೆ ಮತ್ತು ಚಿಕಿತ್ಸೆ ನೀಡುವ ಮೂಲಕ ಮಕ್ಕಳ ಉತ್ತಮ ಭವಿಷ್ಯಕ್ಕಾಗಿ ಜಿಲ್ಲೆಯಾದ್ಯಂತ ಕಾರ್ಯಕ್ರಮ ಆಯೋಜಿಲಾಗುತ್ತಿದೆ' ಎಂದು ತಿಳಿಸಿದರು. ಶ್ರೀಕಾಂತ ವಿದ್ಯಾ ಸಂಸ್ಥೆ ರಮಾಕಾಂತ್, ಆರೋಗ್ಯದ ಜಾಗೃತಿ ಕುರಿತು ಮಾತನಾಡಿದರು. ಪ್ರಚೋದನ ಸಂಸ್ಥೆಯವರು ಮಕ್ಕಳ ಹಕ್ಕುಗಳ ಕುರಿತು ಮಾಹಿತಿ ಹಂಚಿಕೊಂಡರು. ಜನ ಪ್ರಯತ್ನ ಸಂಸ್ಥೆ ಜಯರಾಜ್, ಗೌರವಾಧ್ಯಕ್ಷ ಗ್ಯಾರಂಟಿ ರಾಮಣ್ಣ, ಆರೋಗ್ಯ ಇಲಾಖೆ ಲತಾ ಮಾತನಾಡಿದರು.



ಉದಯವಾಹಿನಿ ಚಿತ್ರ

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಬೆಳಿಗ್ಗೆ | 09:00 ರಿಂದ 10:30 |
| ಗುಳಿಕ ಕಾಲ | ಬೆಳಿಗ್ಗೆ | 06:00 ರಿಂದ 07:30 |
| ಯಮಗಂಡ ಕಾಲ | ಮಧ್ಯಾಹ್ನ | 01:30 ರಿಂದ 03:00 |

**ಮೇಷ** ನಿಮ್ಮ ಅಧಿಕ ಚೈತನ್ಯವನ್ನು ಇಂದು ಚೆನ್ನಾಗಿ ಬಳಸಿಕೊಳ್ಳಲು ಪ್ರಯತ್ನಿಸಿ. ನೀವು ವಿಪರೀತವಾಗಿ ಖರ್ಚು ಮಾಡುವುದನ್ನು ನಿಲ್ಲಿಸಿದಾಗ ಮಾತ್ರ ನಿಮ್ಮ ಹಣವು ನಿಮ್ಮ ಕೆಲಸಕ್ಕೆ ಬರುತ್ತದೆ.

**ವೃಷಭ** ವಯಸ್ಸಾದವರು ತಮ್ಮ ಆರೋಗ್ಯವನ್ನು ನೋಡಿಕೊಳ್ಳಬೇಕು. ಇಂದು ಮನೆಯಿಂದ ಹೊರಗೆ ಹಿರಿಯರ ಆಶೀರ್ವಾದವನ್ನು ತೆಗೆದುಕೊಂಡು ಹೋಗಿ, ಇದರಿಂದ ನೀವು ಹಣದ ಲಾಭವನ್ನು ಪಡೆಯಬಹುದು.

**ಮಿಥುನ** ನಿಮ್ಮ ಸಹೋದರನಿಗೆ ವಿಷಯಗಳನ್ನು ನಿಯಂತ್ರಣದಲ್ಲಿರಿಸಿಕೊಳ್ಳಲು ಸಹಾಯ ಮಾಡಿ. ವ್ಯಾಜ್ಯಗಳನ್ನು ಅನಗತ್ಯವಾಗಿ ಹೆಚ್ಚಿಸದೇ ಅವುಗಳನ್ನು ಸೌಹಾರ್ದತೆಯಿಂದ ಪರಿಹರಿಸಲು ಪ್ರಯತ್ನಿಸಿ.

**ಕರ್ಕಾಟಕ** ಪ್ರತಿ ವ್ಯಕ್ತಿಯನ್ನೂ ಆಲಿಸಿ ನಿಮ್ಮ ಸಮಸ್ಯೆಗಳಿಗೆ ಪರಿಹಾರ ದೊರಕಬಹುದು. ರಾತ್ರಿಯ ವೇಳೆಯಲ್ಲಿ ಇಂದು ನೀವು ಹಣದ ಪ್ರಯೋಜನವನ್ನು ಪಡೆಯುವ ಪೂರ್ತಿ ಸಾಧ್ಯತೆ ಇದೆ.

**ಸಿಂಹ** ಪ್ರತಿಯೊಬ್ಬರೂ ನಿಮ್ಮ ಸ್ನೇಹಿತರಾಗಯಸುತ್ತಾರೆ, ನಿಮಗೆ ಇದರಿಂದ ಸಂತೋಷವೆನಿಸುತ್ತದೆ. ಕೆಲವು ಪ್ರವಾಸೀ ತಾಣಗಳಿಗೆ ಭೇಟಿ ನೀಡುವ ಮೂಲಕ ನಿಮ್ಮ ಪ್ರೇಮ ಜೀವನವನ್ನು ಉಜ್ವಲಗೊಳಿಸಬಹುದು.

**ಕನ್ಯಾ** ಸ್ನೇಹಿತರ ಅಥವಾ ಒಬ್ಬ ಪರಿಚಯಸ್ಥರ ಸ್ವಾರ್ಥದ ವರ್ತನೆ ನಿಮ್ಮ ಮಾನಸಿಕ ಶಾಂತಿಗೆ ತೊಂದರೆ ತರಬಹುದು. ಆರ್ಥಿಕ ಜೀವನದಲ್ಲಿ ಇಂದು ಸಂತೋಷ ಉಳಿದಿರುತ್ತದೆ.

**ತುಲಾ** ನೀವು ಅತಿಯಾದ ಒತ್ತಡವನ್ನು ಅನುಭವಿಸುತ್ತಿದ್ದೀರೆಂದೆನಿಸಿದರೆ ಮಕ್ಕಳೊಂದಿಗೆ ಹೆಚ್ಚು ಸಮಯ ಕಳೆಯಿರಿ. ಅವರ ಬೆಚ್ಚಗಿನ ಅಪ್ಪುಗೆಯೂ ನಿಮ್ಮ ಸಮಸ್ಯೆಗಳನ್ನು ಮಾಯವಾಗಿಸಬಲ್ಲದು.

**ವೃಶ್ಚಿಕ** ವಿಶೇಷವಾಗಿ ಹೊರಗಿಟ್ಟ ಆಹಾರ ತಿನ್ನುವಾಗ ವಿಶೇಷ ಮುನ್ನೆಚ್ಚರಿಕೆ ತೆಗೆದುಕೊಳ್ಳಬೇಕು. ಆದರೆ ಅನಗತ್ಯ ಒತ್ತಡ ಕೇವಲ ನಿಮಗೆ ಮಾನಸಿಕ ಉದ್ವೇಗ ಉಂಟುಮಾಡುತ್ತದೆ.

**ಧನಸ್ಸು** ಈ ರಾಶಿಚಕ್ರದ ಜನರು ಇಂದು ನಿಮ್ಮ ಬಿಡುವಿನ ವೇಳೆಯಲ್ಲಿ ಆಧ್ಯಾತ್ಮಿಕ ಪುಸ್ತಕಗಳ ಅಧ್ಯಯನ ಮಾಡಬೇಕು. ಇದನ್ನು ಮಾಡಿ ನೀವು ನಿಮ್ಮ ಅನೇಕ ಸಮಸ್ಯೆಗಳನ್ನು ಪರಿಹರಿಸಬಹುದು.

**ಮಕರ** ತಾತ್ಕಾಲಿಕವಾದ ಉದ್ವೇಗದಲ್ಲಿ ನಿರ್ಧಾರ ಕೈಗೊಳ್ಳಬೇಡಿ ಇದು ನಿಮ್ಮ ಮಕ್ಕಳ ಹಿತಾಸಕ್ತಿಗೆ ಹಾನಿ ಮಾಡಬಹುದು. ರಾತ್ರಿಯ ವೇಳೆಯಲ್ಲಿ ನೀವು ಹಣದ ಪ್ರಯೋಜನವನ್ನು ಪಡೆಯುವ ಪೂರ್ತಿ ಸಾಧ್ಯತೆ ಇದೆ.

**ಕುಂಭ** ನೀವು ಸುತ್ತಲಿರುವವರು ನಿಮಗೆ ಬೆಂಬಲ ನೀಡುವುದರಿಂದ ನೀವು ಸಂತೋಷವಾಗಿರುವಿರಿ. ಹಣ ನಿಮ್ಮ ಕೈಯಲ್ಲಿ ಉಳಿಯುದಿಲ್ಲ. ಹಣವನ್ನು ಉಳಿಸುವಲ್ಲಿ ಅನೇಕ ತೊಂದರೆಗಳನ್ನು ಎದುರಿಸಬೇಕಾಗುತ್ತದೆ.

**ಮೀನ** ಕೆಲವು ಮಾನಸಿಕ ಒತ್ತಡಗಳ ಹೊರತಾಗಿಯೂ ಆರೋಗ್ಯ ಚೆನ್ನಾಗಿರುತ್ತದೆ. ಸ್ವಲ್ಪ ಹೆಚ್ಚು ಹಣ ಮಾಡಲು ನಿಮ್ಮ ನವೀನ ಕಲ್ಪನೆಯನ್ನು ಬಳಸಿ. ಸ್ನೇಹಿತರ ಸಂಗ ಆರಾಮ ಒದಗಿಸುತ್ತದೆ.

### ಕಳೆದ ವರ್ಷ ಇದೇ ಅವಧಿಗೆ ಹೋಲಿಕೆ ಮಾಡಿದಲ್ಲಿ 10,479 ಬಾಕ್ಸ್ ಬಿಯರ್ ಮಾರಾಟ

# ಅಬಕಾರಿ ಇಲಾಖೆಗೆ 'ಚಳಿ' ಬಿಡಿಸಿದ ಬಿಯರ್

• ಉದಯವಾಹಿನಿ ಗದಗ



ಉದಯವಾಹಿನಿ ಚಿತ್ರ

ರಾಜ್ಯದ ಬೊಕ್ಕಸ ತುಂಬಿಸುವ ಅಬಕಾರಿ ಆದಾಯ ನಿಧಾನಕ್ಕೆ ಕ್ಷೀಣವಾಗುತ್ತಿದೆ. ಗದಗ ಜಿಲ್ಲೆಯಲ್ಲೂ ಈ ಬಾರಿ ಬಿಯರ್ ಮಾರಾಟದಲ್ಲಿ ಗಣನೀಯ ಇಳಿಕೆಯಾಗಿದೆ.

ಜಿಲ್ಲೆಯಲ್ಲಿ 2025 ನವೆಂಬರ್ ಅಂತ್ಯದ ವರೆಗೆ ಒಟ್ಟು 27,874 ಬಿಯರ್ ಬಾಕ್ಸ್ ಮಾರಾಟವಾಗಿದೆ. ಆದರೆ ಕಳೆದ ವರ್ಷ ಇದೇ ಅವಧಿಗೆ ಹೋಲಿಕೆ ಮಾಡಿದಲ್ಲಿ 10,479 ಬಾಕ್ಸ್ ಬಿಯರ್ ಮಾರಾಟ ಕಡಿಮೆಯಾಗಿದೆ.

**ಮಾರಾಟ ಕುಸಿತ:** ಅಬಕಾರಿ ಸಚಿವ ಆರ್.ಬಿ.ತಿಮ್ಮಾಪುರ ಮಾಹಿತಿ ನೀಡಿದಂತೆ, ರಾಜ್ಯದಲ್ಲಿ ಸಪ್ಟೆಂಬರ್ ಅಂತ್ಯದ ವರೆಗೆ ಒಟ್ಟು 195.27 ಲಕ್ಷ ಬಾಕ್ಸ್ ಬೀಯರ್ ಮಾರಾಟವಾಗಿದೆ. ಕಳೆದ ವರ್ಷಕ್ಕಿಂತ ಶೇ.19.55 ರಷ್ಟು ಕುಸಿತ ಕಂಡಿದೆ.

**ಬೆಲೆ ಹೆಚ್ಚಳವೂ ಕಾರಣ:** ರಾಜ್ಯ ಸರಕಾರಕ್ಕೆ ಬರುವ ಆದಾಯದಲ್ಲಿ ಅಬಕಾರಿ ಇಲಾಖೆ ಸಿಂಹಪಾಲನ್ನು ಹೊಂದಿದ್ದು, ಇದು ಅಕ್ಷಯ ಪಾತ್ರೆ ಇದ್ದಂತೆ. ಹಾಗಾಗಿ ಮದ್ಯಪಾನದ ಮೇಲೆ ಎಷ್ಟೇ ಬೆಲೆ ಏರಿಸಿದರೂ ಮದ್ಯಪ್ರಿಯರು ಕುಡಿಯುವುದನ್ನು ಬಿಡುವುದಿಲ್ಲ ಎಂಬ ಖಾತರಿಯಿಂದ ಕರ್ನಾಟಕದಲ್ಲಿ ಬಿಯರ್ ಮೇಲಿನ ಅಬಕಾರಿ ಸುಂಕವನ್ನು ಕನಿಷ್ಠ ನಾಲ್ಕು ಬಾರಿ ಹೆಚ್ಚಿಸಲಾಗಿದೆ.

ಮಾರಾಟದಲ್ಲಿ ಗಣನೀಯ ಇಳಿಕೆ

**ಆದಾಯಕ್ಕಿಲ್ಲ ನಷ್ಟ**

**ಪ್ರಸ್ತುತ ಜಿಲ್ಲೆಯಲ್ಲಿ ಮದ್ಯ ಮಾರಾಟ ಪ್ರಮಾಣ ಇಳಿಕೆಯಾದರೂ ಅಬಕಾರಿ ಸುಂಕ ಏರಿಕೆಯಿಂದ ಆದಾಯದಲ್ಲಿ ಯಾವುದೇ ವ್ಯತ್ಯಾಸ ಆಗಿಲ್ಲ. ಕಡಿಮೆ ಮದ್ಯ ಮಾರಾಟ ಮಾಡಿಯೂ ಸರಕಾರ ಬೊಕ್ಕಸ ತುಂಬಿಕೊಳ್ಳುತ್ತಿದೆ ಎನ್ನುತ್ತಾರೆ ಪ್ರಜ್ಞಾವಂತರು.**

ಪ್ರಮುಖವಾಗಿ 2023ರ ಜುಲೈ, 2025ರ ಜನವರಿ, ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ಸುಂಕ ಹೆಚ್ಚಿಸಲಾಗಿದೆ. ಇದು ಸಹ ಮದ್ಯ ಮಾರಾಟ ಇಳಿಕೆಗೆ ಕಾರಣವಾಗಿದೆ. ಜತೆಗೆ ಈ ಬಾರಿ ನವೆಂಬರ್ ಅಂತ್ಯದವರೆಗೂ ಅಕಾಲಿಕ ಮಳೆ ಕಾಡಿದ್ದು, ವಿಪರೀತ ಚಳಿ ಆರಂಭವಾಗಿದ್ದು ಸಹ ಬಿಯರ್ ಮಾರಾಟ ಕಡಿಮೆಯಾಗಲು ಕಾರಣವಾಗಿದೆ.

ಜಿಲ್ಲೆಯಲ್ಲಿ ಕಳೆದ ವರ್ಷಕ್ಕೆ ಹೋಲಿಕೆ ಮಾಡಿದರೆ ಈ ಬಾರಿ ಬಿಯರ್ ಮಾರಾಟದಲ್ಲಿ ಕುಸಿತವಾಗಿದೆ. ಜಿಲ್ಲೆಯಲ್ಲಿ ವಾಡಿಕೆಗಿಂತ ಹೆಚ್ಚು ಮಳೆಯಾಗಿದ್ದು, ಮತ್ತು ವಿಪರೀತ ಚಳಿ ಕಾರಣದಿಂದ ಬಿಯರ್ ಮಾರಾಟ ಕುಸಿತ ಕಂಡಿದೆ. ಲಕ್ಷ್ಮೀ ಎಂ.ನಾಯಕ, ಉಪ ಆಯುಕ್ತರು, ಅಬಕಾರಿ ಇಲಾಖೆ, ಗದಗ.

**ಅಗ್ಗದ ಮದ್ಯದ ಮೊರೆ:**

**ಸದ್ಯ ರಾಜ್ಯದಲ್ಲಿನ ಬಿಯರ್ ಬೆಲೆ ನೆರೆಯ ರಾಜ್ಯಗಳಿಗೆ ಹೋಲಿಕೆ ಮಾಡಿದಲ್ಲಿ ಸಾಕಷ್ಟು ದುಬಾರಿಯಾಗಿದೆ. ಅಬಕಾರಿ ಸುಂಕದ ಎಫೆಕ್ಟ್‌ನಿಂದಾಗಿ ಕಳ್ಳ ಮಾರ್ಗದಿಂದ ಅಗ್ಗದ ದರದ ಮದ್ಯವನ್ನು ಗೋವಾ, ಮಹಾರಾಷ್ಟ್ರ ರಾಜ್ಯಗಳಿಂದ ತಂದು ಇಲ್ಲಿ ಮಾರುತ್ತಿರುವವರ ಕಡೆಗೆ ಮದ್ಯಪ್ರಿಯರು ಮೊರೆ ಹೋಗಿದ್ದು, ಇದರಿಂದ ರಾಜ್ಯದ ಬೊಕ್ಕಸಕ್ಕೆ ಚಳಿ ಬಿಟ್ಟಂತಾಗಿದೆ.**

**ನಿರಂತರ ಕುಸಿದ ಮಾರಾಟ**

- ಮೇ 86,952 ಬಾಕ್ಸ ಶೇ.0.48
- ಜೂನ್ 71,926 ಬಾಕ್ಸ್ ಶೇ.9.45
- ಜುಲೈ 73928 ಬಾಕ್ಸ್ ಶೇ.3.42
- ಸೆಪ್ಟೆಂಬರ್ 68,332 ಬಾಕ್ಸ್ ಶೇ.3.65
- ಅಕ್ಟೋಬರ್ 68,332 ಬಾಕ್ಸ್ ಶೇ.3.65
- ನವೆಂಬರ್ 73,796 ಬಾಕ್ಸ್ ಶೇ.7.86

## ತೂಕ ಯಂತ್ರ ಪರಿಶೀಲನೆ

• ಉದಯವಾಹಿನಿ ಬೀದರ್

ತೂಕದಲ್ಲಿ ಪಾರದರ್ಶಕತೆ ಕಾಯ್ದುಕೊಳ್ಳಲು ಭಾಲ್ಕಿ ತಾಲ್ಲೂಕಿನ ಬಾಜೋಳಗಾ ಸಮೀಪದ ಓಂಕಾರ ಗ್ರೂಪ್‌ನ ಗೌರಿ ಸಕ್ಕರೆ ಮತ್ತು ಡಿಸ್ಟಲರಿ ಕಾರ್ಖಾನೆಯು ಕಾರ್ಖಾನೆಯ ತೂಕದ ಯಂತ್ರದ ಪರಿಶೀಲನೆ ನಡೆಸಿತು. ಕಾರ್ಖಾನೆಯ ಮಾಲೀಕ ಬಾಬುರಾವ್ ಬೋತ್ರೆ ಪಾಟೀಲ ಅವರ ಆದೇಶದಂತೆ ರೈತರು, ಕಬ್ಬು ಕಟಾವು, ಸಾಗಣೆ ಗುತ್ತಿಗೆದಾರರು, ವಾಹನಗಳ ಚಾಲಕರು ಹಾಗೂ ಕಾರ್ಖಾನೆ ಸಿಬ್ಬಂದಿ ಸಮ್ಮುಖದಲ್ಲಿ ತೂಕದ ಯಂತ್ರದಲ್ಲಿ ಯಾವುದೇ ದೋಷ ಇಲ್ಲದಿರುವುದನ್ನು ಖಚಿತಪಡಿಸಲಾಯಿತು.

ಕಾರ್ಖಾನೆ ಎಲ್ಲಾ ವಿಚಾರಗಳಲ್ಲಿ ಪಾರದರ್ಶಕತೆ ಕಾಯ್ದುಕೊಂಡು ಬಂದಿದೆ. ತೂಕದ ಬಗ್ಗೆ ಯಾವುದೇ ಸಂದೇಹ ಇರಬಾರದು, ತೂಕದಲ್ಲಿ ರೈತರಿಗೆ ಮೋಸ ಆಗಬಾರದು ಎಂಬ ಕಾರಣಕ್ಕಾಗಿ ಕಾರ್ಖಾನೆಯ ಅಧ್ಯಕ್ಷರ ಆದೇಶದ ಮೇರೆಗೆ ಎಲ್ಲರ ಸಮ್ಮುಖದಲ್ಲಿ ತೂಕದ ಯಂತ್ರದ ತಪಾಸಣೆ ಮಾಡಲಾಗಿದೆ. ತೂಕದಲ್ಲಿ ಯಾವುದೇ ಏರು ಪೇರು ಅಥವಾ ದೋಷ ಕಂಡು ಬಂದಿಲ್ಲ ಎಂದು ಕಾರ್ಖಾನೆಯ ಸಿಬ್ಬಂದಿ ತಿಳಿಸಿದರು.

## ವಾಲ್ಮೀಕಿ ಜಾತ್ರೆ ಸಿಎಂಗೆ ಆಹ್ವಾನ



ಉದಯವಾಹಿನಿ ಚಿತ್ರ

• ಉದಯವಾಹಿನಿ ಬಳ್ಳಾರಿ

ರಾಜನಹಳ್ಳಿ ವಾಲ್ಮೀಕಿ ಗುರುಪೀಠದ ಪ್ರಸನ್ನಾನಂದ ಶ್ರೀಗಳ ನೇತೃತ್ವದಲ್ಲಿ ವಾಲ್ಮೀಕಿ ಸಮುದಾಯದ ಸಚಿವರು ಹಾಗೂ ಶಾಸಕರ ನಿಯೋಗವು ಬೆಳಗಾವಿಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯರನ್ನು ಭೇಟಿ ಮಾಡಿ, ವಾಲ್ಮೀಕಿ ಜಾತ್ರೆಯ ಬಗ್ಗೆ, ಸಮುದಾಯದ ಸರ್ಕಾರಿ ಯೋಜನೆಗಳ ಬಗ್ಗೆ ಚರ್ಚೆ ನಡೆಸಿದರು.

## ಸಶಸ್ತ್ರ ಪಡೆಗಳ ಧ್ವಜ ಖರೀದಿಸಿ ಸೈನಿಕರಿಗೆ ಬೆಂಬಲಿಸಿ:ಜಿಲ್ಲಾಧಿಕಾರಿ ಡಾ. ಆನಂದ

• ಉದಯವಾಹಿನಿ ವಿಜಯಪುರ

ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ ವತಿಯಿಂದ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ಡಾ.ಆನಂದ.ಕೆ ಅವರು, 2025-26ನೇ ಸಾಲಿನ ಸಶಸ್ತ್ರ ಪಡೆಗಳ ಧ್ವಜ ಸಾಂಕೇತಿಕವಾಗಿ ಬಿಡುಗಡೆಗೊಳಿಸಿ, ನಂತರ ಸಾಂಕೇತಿಕವಾಗಿ ಧ್ವಜ ಸ್ವೀಕರಿಸಿ, ದೇಣಿಗೆ ನೀಡುವುದರ ಮೂಲಕ ಸಾರ್ವಜನಿಕರಿಗೆ ಧ್ವಜಗಳನ್ನು ಮಾರಾಟ ಮಾಡಿ ನಿಧಿ ಸಂಗ್ರಹಿಸುವ ಕಾರ್ಯಕ್ಕೆ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ಧ್ವಜ ನಿಧಿ ಸಂಗ್ರಹದ ಈ ನಿಧಿಯನ್ನು ಯುದ್ಧ ಸಂತ್ರಸ್ತರಿಗೆ, ಮಾಜಿ ಸೈನಿಕರು ಅವರ ಅವಲಂಬಿತರ ಸಲುವಾಗಿ ಹಮ್ಮಿಕೊಂಡ ವಿವಿಧ ಕಲ್ಯಾಣ ಮತ್ತು ಕ್ಷೇಮಾಭಿವೃದ್ಧಿ ಕಾರ್ಯಕ್ರಮಗಳಿಗೆ ವಿನಿಯೋಗಿಸಲಾಗುತ್ತಿದೆ. ಸಾರ್ವಜನಿಕರು ಧ್ವಜ ಖರೀದಿಸುವ ಮೂಲಕ ದೇಶದ ಸೈನಿಕರಿಗೆ ಬೆಂಬಲಿಸಬೇಕು ಎಂದು ಅವರು ಹೇಳಿದರು. ಜಿಲ್ಲೆಯು 2025ನೇ ಸಾಲಿನ ಸಶಸ್ತ್ರ ಪಡೆಗಳ ಧ್ವಜ ನಿಧಿಗೆ ನಿಗದಿಪಡಿಸಲಾದ ಗುರಿ ಸಾಧಿಸಿರುವುದರಿಂದ ಈ ನಿಧಿಯು ಮಾಜಿ ಸೈನಿಕರು ಮತ್ತು ಅವರ ಅವಲಂಬಿತರ ಕಲ್ಯಾಣ ಕಾರ್ಯಕ್ರಮಗಳಿಗೆ ಅಮೂಲ್ಯ ನೆರವು ನೀಡಲಿದ್ದು, ಜಿಲ್ಲೆಯ ಈ ಕೊಡುಗೆಯನ್ನು ಪ್ರಶಂಸಿಸುವ ಉದ್ದೇಶದಿಂದ ಪ್ರಶಸ್ತಿ ಸಂದಿರುವುದು ಹೆಮ್ಮೆ ಮೂಡಿಸುತ್ತಿದೆ ಎಂದರು.

## ಪ್ರತಿಭಾ ಕಾರಂಜಿ ಕಲೋತ್ಸವದಿಂದ ಸಾಂಸ್ಕೃತಿಕ ಪ್ರತಿಭೆಗಳು ಅನಾವರಣ : ಪ್ರಿಯ ರಾಮನಗೌಡ

• ಉದಯವಾಹಿನಿ ಕೆಂಭಾವಿ



ಉದಯವಾಹಿನಿ ಚಿತ್ರ

ಕಲೋತ್ಸವ ಹಾಗೂ ಪ್ರತಿಭಾ ಕಾರಂಜಿ ಉದ್ದೇಶವು ಶಾಲಾ ವಿದ್ಯಾರ್ಥಿಗಳಲ್ಲಿರುವ ಕಲಾತ್ಮಕ, ಸಾಹಿತ್ಯಿಕ ಹಾಗೂ ಸಾಂಸ್ಕೃತಿಕ ಪ್ರತಿಭೆಗಳನ್ನು ಗುರುತಿಸುವುದು ಮತ್ತು ಅನಾವರಣಗೊಳಿಸುವುದು ಎಂದು ಪುರಸಭೆ ಅಧ್ಯಕ್ಷೆ ಪ್ರಿಯಾ ರಾಮನಗೌಡ ಹೇಳಿದರು.

ಕೆಂಭಾವಿ ಪಟ್ಟಣದ ಕನ್ಯಾ ಹಿರಿಯ ಪ್ರಾಥಮಿಕ ಶಾಲೆ ಹಾಗೂ ಕರ್ನಾಟಕ ಸರ್ಕಾರ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಉಪನಿರ್ದೇಶಕರ ಕಾರ್ಯಾಲಯ ಯಾದಗಿರಿ ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಕ್ಷೇತ್ರ ಸಮನ್ವಯಾಧಿಕಾರಿಗಳ ಕಾರ್ಯಾಲಯ ಸುರಪುರ ಇವುಗಳ ಸಂಯುಕ್ತ ಆಶ್ರಯದಲ್ಲಿ 2025-26 ನೆಯ ಸಾಲಿನ ಕೆಂಭಾವಿ ಕ್ಲಸ್ಟರ್ ಮಟ್ಟದ ಪ್ರತಿಭಾ ಕಾರಂಜಿ/ಕಲೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದವರು. ಕರ್ನಾಟಕ ಶಾಲಾ ಶಿಕ್ಷಣ ಇಲಾಖೆಯ ಈ ಕಾರ್ಯಕ್ರಮವು ಮಕ್ಕಳಲ್ಲಿ ಅಡಗಿರುವ ಪ್ರತಿಭೆಗಳನ್ನು ಗುರುತಿಸಿ, ಬಲಪಡಿಸಿ, ಆತ್ಮವಿಶ್ವಾಸ ಹೆಚ್ಚಿಸುವುದು, ಹಾಗೇ ಮಕ್ಕಳಲ್ಲಿ ಭಯ-ನಾಚಿಕೆಯನ್ನು ದೂರ ಮಾಡುವುದು ಮತ್ತು ಜಾನಪದ ಕಲೆ-ಸಂಸ್ಕೃತಿಯನ್ನು ಉಳಿಸುವುದು ಮುಖ್ಯ ಗುರಿ. ಇದು ಸ್ಪರ್ಧಾತ್ಮಕ ಮನೋಭಾವವನ್ನು ಬೆಳಸಿ, ಸರ್ವತೋಮುಖ ವ್ಯಕ್ತಿತ್ವ ಅಭಿವೃದ್ಧಿಗೆ ಸಹಾಯ ಮಾಡುತ್ತದೆ. ಎಂದು ಹೇಳಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಸಿಆರ್ ಪಿ ಬಂದೇನವಾಜ ನಾಲತವಾಡ. ಈ ಕಾರ್ಯಕ್ರಮವು ಮಕ್ಕಳಲ್ಲಿನ ಅಡಗಿರುವ ಪ್ರತಿಭೆಗಳನ್ನು ಪ್ರದರ್ಶಿಸಲು, ಆತ್ಮವಿಶ್ವಾಸ ಹೆಚ್ಚಿಸಲು ಮತ್ತು ಜಾನಪದ ಕಲೆ-ಸಂಸ್ಕೃತಿಯನ್ನು ಉಳಿಸಲು ಸಹಾಯ ಮಾಡುತ್ತದೆ.

**ಪ್ರತಿಭಾ ಕಾರಂಜಿ ಕಲಾ ಪ್ರತಿಭೋತ್ಸವವು ಕರ್ನಾಟಕ ರಾಜ್ಯದ ಶಾಲಾ ಶಿಕ್ಷಣ ಇಲಾಖೆಯ ಪ್ರಮುಖವ ಕಾರ್ಯಕ್ರಮವಾಗಿದ್ದು, ಪ್ರಾಥಮಿಕ ಹಾಗೂ ಪ್ರೌಢ ಶಾಲಾ ವಿದ್ಯಾರ್ಥಿಗಳ ಕಲಾತ್ಮಕ, ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಪ್ರತಿಭೆಗಳನ್ನು ಗುರುತಿಸಿ ಹೊರತರಲು ವೇದಿಕೆಯಾಗಿದೆ. -ನಾಲತವಾಡ**

2002ರಿಂದ ನಡೆಯುತ್ತಿರುವ ಕಾರ್ಯಕ್ರಮ ಸಾಂಸ್ಕೃತಿಕ ವೇದಿಕೆಯಾಗಿದೆ. ಕಾರ್ಯಕ್ರಮದಲ್ಲಿ ಸ್ಪರ್ಧೆಗಳು ಭಾಷಣ (ಕನ್ನಡ, ಇಂಗ್ಲಿಷ್, ಹಿಂದಿ, ಸಂಸ್ಕೃತ, ಅರೇಬಿಕ್), ಭಕ್ತಿಗೀತೆ, ಜಾನಪದ ಗೀತೆ, ಭಾವಗೀತೆ.ನೃತ್ಯ (ಜಾನಪದ, ಚದ್ಮವೇಷ), ಚಿತ್ರಕಲೆ, ರಂಗೋಲಿ, ಕ್ಲೇ ಮಾಡಲಿಂಗ್, ಗಝುಲ್, ಕವ್ವಾಲಿಗಳು ಶಾಲೆ, ಕ್ಲಸ್ಟರ್, ತಾಲ್ಲೂಕು, ಜಿಲ್ಲಾ ಮತ್ತು ರಾಜ್ಯ ಮಟ್ಟದ ಸ್ಪರ್ಧೆಗಳ ಮೂಲಕ ನಡೆಯುತ್ತದೆ. ವಿಜೇತರಾದವರು ತಾಲ್ಲೂಕು ಜಿಲ್ಲೆಯನ್ನು ಪ್ರತಿನಿಧಿಸುತ್ತಾರೆ ಎಂದರು. ಈ ಸಂದರ್ಭದಲ್ಲಿ ಪುರಸಭೆ ಸದಸ್ಯರಾದ ರವಿಶಂಕರ್ ಸುಣ್ಣ ಕಾಂಗ್ರೆಸ್ ಪಕ್ಷದ ಮುಖಂಡರಾದ ರಾಮನಗೌಡ, ಯುವ ಮುಖಂಡರಾದ ಆದಿತ್ಯ ಗೌಡ ಪೊಲೀಸ್ ಪಾಟೀಲ್, ಪರಶುರಾಮ ಬಳಬಟ್ಟಿ, ಶಿವಪ್ಪ ಕಂಬಾರ, ಸಮನ್ವಯ ಅಧಿಕಾರಿ ಶಿವಪುತ್ರ, ಬಿ ಆರ್ ಪಿ ವೆಂಕಟೇಶ್, ಮುಖ್ಯ ಗುರು ಎಂ ಬಿ ಪಾಟೀಲ, ಮಲ್ಲಿಕಾರ್ಜುನ ಕರಡಕಲ, ರಾಜಹಮ್ಮದ ಹುಳುಬುತ್ತಿ, ಪಟೇಲ್ ಸರ್, ಶಿಕ್ಷಕರು ವಿದ್ಯಾರ್ಥಿಗಳು ಇದ್ದರು.

## ಇಂಗಳೇಶ್ವರದ ಚನ್ನಬಸವೇಶ್ವರರ ಅಂತಿಮ ಯಾತ್ರೆ

• ಉದಯವಾಹಿನಿ ಬಸವನಬಾಗೇವಾಡಿ



ಉದಯವಾಹಿನಿ ಚಿತ್ರ

ತಾಲ್ಲೂಕಿನ ಇಂಗಳೇಶ್ವರ ವಚನಶಿಲಾ ಮಂಟಪದ ನಿರ್ಮಾತೃಗಳೂ ಆಗಿದ್ದ ವಿರಕ್ತಮಠದ ಪೀಠಾಧಿಪತಿ ಚನ್ನಬಸವ ಶ್ರೀಗಳು ತಮ್ಮ 94ನೇ ವಯಸ್ಸಿನಲ್ಲಿ ಬಸವೈಕ್ಯರಾದ ಹಿನ್ನಲೆಯಲ್ಲಿ ಶುಕ್ರವಾರ ಮಧ್ಯಾಹ್ನ 2 ಗಂಟೆಯಿಂದ ಆರಂಭಗೊಂಡ ಅಂತಿಮ ಸಂಸ್ಕಾರದ ಮುನ್ನ ಗ್ರಾಮದ ಪ್ರಮುಖ ಬೀದಿಗಳಲ್ಲಿ ಸಕಲ ವಾದ್ಯ ವೈಭವದೊಂದಿಗೆ ಅಂತಿಮ ಯಾತ್ರೆ ಎರಡು ಗಂಟೆಗಳ ಕಾಲ ಅದ್ದೂರಿಯಾಗಿ ಜರುಗಿತು. ಭಕ್ತರ ಹಣೆಯ ಮೇಲೆ ವಿಭೂತಿ ಧಾರಣೆ ಮಾಡಿದ್ದು, ಶ್ರೀಗಳಿಗೆ ಧನ, ಫೋಟೋ ಹಾಗೂ ಹೂ ಹಣ್ಣುಗಳನ್ನು ಅರ್ಪಿಸುತ್ತಿರುವುದು ಕಂಡು ಬಂದಿತು.

ಮೆರವಣಿಗೆ ಉದ್ದಕ್ಕೂ ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗಿತ್ತು. ನಾಡು ಹಾಗೂ ನೆರೆಯ ರಾಜ್ಯಗಳಿಂದ ಆಗಮಿಸಿದ ಅಪಾರ ಸಂಖ್ಯೆಯ ಭಕ್ತರು ಶ್ರೀಗಳ ಅಚ್ಚು ಮೆಚ್ಚಿನ ಸಜ್ಜಕ ಪಾಯಸ ಹಾಗೂ ಅನ್ನ ಸಾರು ಸವಿದು ಪುನೀತರಾದರು. ಶ್ರೀಗಳ ಸಮಾಧಿ ಮಂದಿರವನ್ನು ವೀಕ್ಷಿಸಲು ಆಗಮಿಸುತ್ತಿದ್ದ ಭಕ್ತರನ್ನು ಆರಕ್ಷಕರು ತಡೆ ಹಿಡಿದ ಹಿನ್ನಲೆಯಲ್ಲಿ ಹೊರಗೆ ನಿಂತೇ ನಮಸ್ಕಾರ ಮಾಡಿ ಹೋಗುತ್ತಿರುವುದು ಕಂಡು ಬಂದಿತು.

ಗುರುವಾರದಿಂದ ಶ್ರೀಗಳ ಅಂತಿಮ ದರ್ಶನ ಸಂದರ್ಭದಲ್ಲಿ ಯಾವುದೇ ಅಹಿತಕರ ಘಟನೆಗಳು ಸಂಭವಿಸಿದಂತೆ ಬಾಗೇವಾಡಿ ಪೊಲೀಸ್ ವಿಭಾಗದಿಂದ ನೂರಕ್ಕೂ ಅಧಿಕ ಆರಕ್ಷಕರು ಹಾಗೂ ಅಧಿಕಾರಿಗಳು ಸೂಕ್ತ ಬಂದೋಬಸ್ತ್ ಮಾಡಿದ್ದರು. ಅಂತಿಮ ಸಂಸ್ಕಾರ ನಡೆಯುವ ವಚನ ಶಿಲಾ ಮಂಟಪದ ಜಾಗೆಯನ್ನು ಜಿಲ್ಲಾಧಿಕಾರಿ, ಪೊಲೀಸ್ ವರಿಷ್ಠ ಅಧಿಕಾರಿ, ತಾಲ್ಲೂಕಾ ದಂಡಾಧಿಕಾರಿ ಸೇರಿದಂತೆ ಅನೇಕ ಅಧಿಕಾರಿಗಳು ಪರಿಶೀಲನೆ ನಡೆಸಿದರು.

## ಮಕ್ಕಳ ಮೇಲೆ ಹಲ್ಲೆ: ತಂದೆ ವಿರುದ್ಧ ದೂರು

• ಉದಯವಾಹಿನಿ ಕುಮಟಾ

ತನ್ನ ವಿಚ್ಛೇದಿತ ಪತಿ ಹಾಗೂ ಆತನ ಜೊತೆ ವಾಸವಾಗಿದ್ದ ಇನ್ನೊಬ್ಬ ಮಹಿಳೆ ತನ್ನ ಇಬ್ಬರು ಮಕ್ಕಳ ಮೇಲೆ ಹಲ್ಲೆ ನಡೆಸಿದ್ದಾರೆ ಎಂದು ತಾಲ್ಲೂಕಿನ ಹೊಲನಗದ್ದೆಯ ನಿವಾಸಿ ಚಿತ್ರಾ ನಾಯ್ಕ ಅವರು ಕುಮಟಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ. ಪಟ್ಟಣದ ವಿವೇಕನಗರ ನಿವಾಸಿ ವಿಜಯ್ ನಾಯ್ಕ ಹಾಗೂ ದೀಪಾ ನಾಯ್ಕ ಆರೋಪಿಗಳು. ಎಂಟು ತಿಂಗಳ ಹಿಂದೆ ಪತಿಯಿಂದ ವಿಚ್ಛೇದನ ಪಡೆದ ಚಿತ್ರಾ ನಾಯ್ಕ ಅವರು ಪ್ರತ್ಯೇಕವಾಗಿ ವಾಸಿಸುತ್ತಿದ್ದು, ಅವರ ಇಬ್ಬರು ಮಕ್ಕಳಾದ ತುನುಷ್ ನಾಯ್ಕ (6) ಹಾಗು ಹನೀಷಾ ನಾಯ್ಕ (10) ಅವರು ತಮ್ಮ ತಂದೆ ವಿಜಯ್ ಅವರೊಂದಿಗೆ ವಾಸಿಸುತ್ತಿದ್ದರು. ಅವರನ್ನು ನೋಡಲು ವಿವೇಕನಗರದ ವಿಜಯ್ ಅವರ ಮನೆಗೆ ಹೋದಾಗ ಮಕ್ಕಳ ಕೈ, ಕಾಲಿಗೆ ಗಾಯಗಳಾಗಿದ್ದವು. ಹಲ್ಲೆ ಬಗ್ಗೆ ವಿಚಾರಿಸಿದಾಗ ಆರೋಪಿಗಳು ಬೈದಿದ್ದಾರೆ, ದೀಪಾ ನಾಯ್ಕ ಹಲ್ಲೆ ಮಾಡಿದ್ದಾರೆ ಎಂದು ಚಿತ್ರಾ ನಾಯ್ಕ ದೂರಿನಲ್ಲಿ ತಿಳಿಸಿದ್ದಾರೆ.

## ಮಠಾಧೀಶರಿಗೆ ಚನ್ನಬಸವ ಶ್ರೀ ಮಾದರಿಯಾಗಿದ್ದರು: ಸಚಿವ ಶಿವಾನಂದ ಪಾಟೀಲ

• ಉದಯವಾಹಿನಿ ಬಸವನಬಾಗೇವಾಡಿ



ಉದಯವಾಹಿನಿ ಚಿತ್ರ

ರಾಗ, ದ್ವೇಷಗಳಿಲ್ಲದ ಮಂದಹಾಸದ ಇಂಗಳೇಶ್ವರ ವಿರಕ್ತ ಮಠದ ಚನ್ನಬಸವ ಶ್ರೀಗಳು ಆದಿಲ್ ಶಾಹಿ ಗೋಲಗುಂಬಜ ಕಟ್ಟಿದ ಮಾದರಿಯಲ್ಲಿ ವಚನ ಶಿಲಾ ಮಂಟಪ ನಿರ್ಮಿಸಿ ಸಮಾಜಕ್ಕೆ, ಮಠಾಧೀಶರಿಗೆ ಸಾರ್ವಕಾಲಿಕ ಮಾದರಿ ರೀತಿ ಬದುಕಿ ತೋರಿದ ಮಹಾನ್ ಚೇತನವಾಗಿದ್ದರು ಎಂದು ಜವಳಿ, ಕಬ್ಬು ಅಭಿವೃದ್ಧಿ, ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರಾದ ಶಿವಾನಂದ ಪಾಟೀಲ ಬಣ್ಣಿಸಿದರು.

ಶುಕ್ರವಾರ ತಾಲ್ಲೂಕಿನ ಇಂಗಳೇಶ್ವರ ಗ್ರಾಮದಲ್ಲಿ ಬಸವೈಕ್ಯರಾದ ಚನ್ನಬಸವ ಶ್ರೀಗಳ ಭಕ್ತಿ ಶ್ರದ್ಧಾಂಜಲಿ ಸಮಾರಂಭದಲ್ಲಿ ಪಾಲ್ಗೊಂಡು ಮಾತನಾಡಿದ ಸಚಿವರು, ಶ್ರೀಗಳು ತಮ್ಮ ದರ್ಶನಕ್ಕೆ ಬರುತ್ತಿದ್ದ ಯಾವುದೇ ಭಕ್ತರಿದ್ದರೂ ಸಜ್ಜಕ-ತುಪ್ಪ ಪ್ರಸಾದ ಬಡಿಸದೇ ಬಿಡುತ್ತಿರಲಿಲ್ಲ ಭಕ್ತರಿಗೆ ಸ್ವಯಂ ತಾವು ಬಡಿಸಿದ ಪ್ರಸಾದ ಸೇವಿದರೆ ಅವರು ಅತ್ಯಂತ ಸಂತೃಪ್ತತೆ ತೋರುತ್ತಿದ್ದರು. ಹಿಂದೊಮ್ಮೆ ಶ್ರೀಗಳ ದರ್ಶನಕ್ಕೆ ಬಂದಿದ್ದಾಗ ನನಗೆ ಸ್ವಯಂ ತಾವೇ ಪ್ರಸಾದ ಬಡಿಸಿದ್ದರು. ಶ್ರೀಗಳು ನನಗಂತೂ ಸಜ್ಜಕಕ್ಕಿಂತ ತುಪ್ಪವನ್ನೇ ಹೆಚ್ಚಾಗಿ ಬಡಿಸಿ ಮಮತೆಯ ಮಾತೃತ್ವ ತೋರಿದ್ದರು ಎಂದು ಶ್ರೀಗಳಿಂದ ತಾವು ಪಡೆದ ಮಮತಾನುಭವ ವಿವರಿಸಿದರು.

ಬಸವಾದಿ ಶರಣರ ವಚನಗಳನ್ನು ಕಲ್ಲಿನಲ್ಲಿ ಕೆತ್ತಿಸಿ ಷಟಸ್ಥಲ ಮಂಟಪ ರೂಪಿಸುವ ಚನ್ನಬಸವ ಶ್ರೀಗಳ ಛಲವಾದ ಸಣ್ಣದೇನಲ್ಲ. ಶ್ರೀಗಳ ಸಂಕಲ್ಪವನ್ನು ಬಹುತೇಕರು ಅಸಾಧ್ಯದ ನಿರ್ಧಾರ ಎಂದಿದ್ದರು. ಸ್ವಯಂ ಅಂದು ಸಚಿವರಾಗಿದ್ದ ಎಂ.ಪಿ.ಪ್ರಕಾಶ ಅವರೂ ಸಾಹಸಕ್ಕೆ ಕೈಹಾಕಿದ್ದೀರಿ ಎಂದಿದ್ದರು. ಭಕ್ತರ ಸಹಕಾರದಿಂದ ಎಲ್ಲವೂ ಸಾಧ್ಯವಿದೆ ಎಂದಿದ್ದ ಶ್ರೀಗಳು, ಸಂಕಲ್ಪ ಸಿದ್ಧ ಮಾಡಿಯೇ ಹೋದರು ಎಂದು ಘಟನೆಗಳನ್ನು ಸ್ಮರಿಸಿದರು.

ಬೃಹತ್ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ, ರಾಜ್ಯ ಮಾರ್ಜಕ ನಿಗಮದ ಅಧ್ಯಕ್ಷ ಸಿ.ಎಸ್. ನಾಡಗೌಡ, ಕಲ್ಮಠದ ಕರೆಸಿದ್ದೇಶ್ವರ ಶಿವಾಚಾರ್ಯರು, ಹುಬ್ಬಳ್ಳಿ ಮೂರುಸಾವಿರ ಮಠದ ಶ್ರೀಗಳು, ನಿಡಸೋಸಿ ಶ್ರೀಗಳು, ಬಸವಲಿಂಗ ಶ್ರೀಗಳು, ಯರನಾಳ ಶ್ರೀಗಳು, ಸಂಗನಬಸವ ಶ್ರೀಗಳು, ಶಿವಪ್ರಕಾಶ ಶ್ರೀಗಳು, ಕಸಾಪ ಜಿಲ್ಲಾಧ್ಯಕ್ಷ ಹಾಸಿಂಪೀರ ವಾಲೀಕಾರ ಸೇರಿದಂತೆ ನಾಡಿನ ಮೂಲೆ ಮೂಲೆಗಳಿಂದ ಆಗಮಿಸಿದ್ದ ಮಠಾಧೀಶರು ವೇದಿಕೆ ಮೇಲಿದ್ದರು.

**ಶರಣರ ಕಾಯ ಅಳಿಯುವುದು ಕೀರ್ತಿ ಉಳಿಯುವುದು. 21 ನೇ ಶತಮಾನದಲ್ಲಿ ವಚನ ಶಿಲಾ ಮಂಟಪ ನಿರ್ಮಿಸಿದ ಶ್ರೀಗಳ ಕಾರ್ಯ ಈ ನಾಡಿಗೆ ಅನನ್ಯವಾಗಿದೆ. ಸಮರ್ಥ ಉತ್ತರಾಧಿಕಾರಿಯಿಂದ ಮತ್ತೇ ಈ ಮಠ ಮಹತ್ತರ ಕೊಡುಗೆ ನೀಡಲಿದೆ, ತಮ್ಮೊಂದಿಗೆ ನಾನಿರುವೆ ಎಂದು ಉತ್ತರಾಧಿಕಾರಿ ಸಿದ್ದಲಿಂಗ ಶ್ರೀಗಳಿಗೆ ಭರವಸೆಯ ಮಾತುಗಳನ್ನಾಡಿದರು. -ಚಿತ್ರದುರ್ಗದ ಮುರುಘಾ ಶರಣರು**

## ಪಡಿತರ ಅಕ್ಕಿ ಕಾಳಸಂತೆಯಲ್ಲಿ ಮಾರಾಟ ತಡೆಯುವಲ್ಲಿ ವಿಫಲ

• ಉದಯವಾಹಿನಿ ಹಗರಿಬೊಮ್ಮನಹಳ್ಳಿ



ಉದಯವಾಹಿನಿ ಚಿತ್ರ

ಸರ್ಕಾರದ ಗ್ಯಾರಂಟಿಗಳಲ್ಲಿ ಒಂದಾದ ಅನ್ನ ಭಾಗ್ಯ ಯೋಜನೆಯ ಪಡಿತರ ಅಕ್ಕಿ ಕಾಳ ಸಂತೆಯಲ್ಲಿ ಮಾರಾಟ ವಾಗುತ್ತಿದ್ದರೂ, ತಡೆಗಟ್ಟುವಲ್ಲಿ ಅಧಿಕಾರಿಗಳು ವಿಫಲರಾಗಿದ್ದಾರೆ ಎಂದು ಗ್ಯಾರೆಂಟಿ ಸಮಿತಿಯ ಜಿಲ್ಲಾ ಉಪಾಧ್ಯಕ್ಷ ಹೆಚ್. ಜಂದಿಸಾಬ್ ಬೇಸರ ವ್ಯಕ್ತಪಡಿಸಿದರು.

ಪಟ್ಟಣದ ತಾಲ್ಲೂಕು ಪಂಚಾಯಿತಿ ಸಭಾಂಗಣದಲ್ಲಿ ನಡೆದ ಪಂಚ ಗ್ಯಾರಂಟಿ ಯೋಜನೆಯ ಪ್ರಗತಿಪರಿಶೀಲನಾ ಸಭೆಯಲ್ಲಿ ಭಾಗವಹಿಸಿ ಅವರು ಮಾತನಾಡಿದರು. ತಾಲ್ಲೂಕಿನ ಎಲ್ಲಾ ನ್ಯಾಯಬೆಲೆ ಅಂಗಡಿಗಳು ಪಡಿತರ ಅಕ್ಕಿಯನ್ನು ತಿಂಗಳ ಪೂರ್ತಿ ವಿತರಿಸಬೇಕು. ಭಾಗ್ಯಜ್ಯೋತಿ ಮನೆಗಳಿಗೆ 58 ಯೂನಿಟ್ ಮಾತ್ರ ವಿದ್ಯುತ್ ಒದಗಿಸುವುದು ಸೂಕ್ತವಲ್ಲ ಎಂದರು. ಗ್ಯಾರಂಟಿ ಸಮಿತಿಯ ತಾಲ್ಲೂಕು ಅಧ್ಯಕ್ಷ ಗುರುಬಸವರಾಜ್ ಸೊನ್ನದ್ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ ಶಕ್ತಿ ಯೋಜನೆಗೆ ಬಸವಗಳ ಕೊರತೆ ಇದೆ ಎಂದು ಆರೋಪಿಸುವ ಕೆಲವರಿಗೆ 2013 ರಿಂದ ಇದುವರೆಗೂ 57 ಹೊಸ ಬಸ್ಸುಗಳು ಕಲ್ಪಿಸಲಾಗಿದೆ. ಸಭೆಗೆ ಮಾಹಿತಿ ಇಲ್ಲದೆ ಮಾತನಾಡುತ್ತಿರುವುದು ತರವಲ್ಲ. ಐದು ಗ್ಯಾರಂಟಿ ಇಲಾಖೆಯವರು ತಮ್ಮ ಇಲಾಖೆಯಲ್ಲಿ ಯಾವುದೇ ಕಾರ್ಯಕ್ರಮ ನಡೆದರು ಅದರ ಬಗ್ಗೆ ಗ್ಯಾರಂಟಿ ಸಮಿತಿಯ ಸದಸ್ಯರಿಗೆ ಮಾಹಿತಿ ಹಾಗೂ ಆಹ್ವಾನ ನೀಡಬೇಕು. ಗೃಹಲಕ್ಷ್ಮಿ ಯೋಜನೆಯಡಿ ತಾಲ್ಲೂಕಿನಲ್ಲಿ ಆಗಸ್ಟ್ ವರಿಗೆ ಮಾಸಿಕ 7.5ಕೋಟಿ ರೂ.ಯಂತೆ ಒಟ್ಟು 168 ಕೋಟಿ ರೂ. ನೀಡಲಾಗಿದೆ ಎಂದರು. ಗ್ಯಾರಂಟಿ ಜಿಲ್ಲಾ ಸದಸ್ಯ ಪರಶುರಾಮ್ ಮಾತನಾಡಿ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ಸರಿಯಾದ ಸಮಯಕ್ಕೆ ಬಸ್ ಸಂಚಾರ ನಡೆಸಬೇಕು ಎಂದು ಸೂಚಿಸಿದರು. ಸಾರಿಗೆ ಘಟಕದಲ್ಲಿ 19 ಸಿಬ್ಬಂದಿಗಳು ಕೊರತೆಯಾಗಿದ್ದು. ಮಾರ್ಗ ನಿರ್ವಹಣೆಯಲ್ಲಿ ತೊಡಕಾಗಿದ್ದು. ಸಮರ್ಪಕ ಸೇವೆ ಒದಗಿಸಲಾಗಿದೆ ಎಂದು ಘಟಕದ ಅಧಿಕಾರಿ ಸಂತೋಷ್ ನಾಯ್ಕ್ ತಿಳಿಸಿದರು.

ಕಳೆದ ಸಭೆಯಲ್ಲಿ ಸಮಗ್ರ ಮಾಹಿತಿಯನ್ನು ತೆಗೆದುಕೊಂಡು ಬರಲು ಆಹಾರ ಇಲಾಖೆ ಅಧಿಕಾರಿಗಳಿಗೆ ತಿಳಿಸಲಾಗಿತ್ತು ಆದರೆ ಅವರು ಗೈರು ಹಾಜರಿಯಾಗಿದ್ದಾರೆ ಅವರಿಗೆ ನೋಟಿಸ್ ನೀಡುವಂತೆ ತಾಲ್ಲೂಕ್ ಸಮಿತಿಯ ಎಸ್ ಎ. ಸಂತೋಷ್,,ಜಿ ಗಿರೀಶ್ ಸೂಚಿಸಿದರು. ಯುವ ನಿಧಿ ಅಧಿಕಾರಿ ಹಟ್ಟೆಪ್ಪ ಮಾಹಿತಿಯ ವರದಿ ಸಲ್ಲಿಸಿದರು. ತಾ ಪಂ ಇ ಒ ಪಿ.ವಿಶ್ವನಾಥ್ ಮಾತನಾಡಿ ಸರ್ಕಾರದ ಐದು ಗ್ಯಾರಂಟಿಗಳು ಬಡ ಜನರಿಗೆ ಅನುಕೂಲವಾಗಿವೆ. 5 ಗ್ಯಾರಂಟಿಗೆ ಅಧಿಕಾರಿಗಳು ಸಮಗ್ರ ಮಾಹಿತಿ ನೀಡಿರುವುದು ಸಂತೋಷ. ಆದರೆ ಕೆಲವೊಂದು ಬಾರಿ ಸಣ್ಣ ಪುಟ್ಟ ತಪ್ಪುಗಳು ಆಗುತ್ತವೆ. ಅವುಗಳ ನ್ಯೂನ್ಯತೆಗಳನ್ನು ತಿದ್ದಿಕೊಂಡು ಹೋಗಬೇಕು ಎಂದರು.

# ನಗರದ 4 ದಿಕ್ಕಿನಲ್ಲಿ ಸ್ಯಾಟ್ ಲೈಟ್ ಬಸ್ ನಿಲ್ದಾಣ: ಅರುಣಕುಮಾರ ಪಾಟೀಲ

### ಗುಲ್ಬರ್ಗ ವಿಶ್ವವಿದ್ಯಾಲಯ, ಕೆಎಂಎಫ್, ಆಳಂದ ರಸ್ತೆ ಕೃಷಿ ಕಾಲೇಜು, ಜೇವರ್ಗಿ ರಸ್ತೆಯ ಬೀಜ ನಿಗಮದ ಬಳಿ ಜಾಗ ಗುರುತಿಸಿ ಇಲಾಖೆಗಳಿಗೆ ಪ್ರಸ್ತಾವನೆ


• ಉದಯವಾಹಿನಿ ಕಲಬುರಗಿ

ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ನೌಕರರು ಅನಾರೋಗ್ಯ, ಆಕಸ್ಮಿಕ ಮತ್ತು ಅಪಘಾತಗಳಿಂದಾಗಿ ಮೃತಪಟ್ಟಲ್ಲಿ ಆಂತರಿಕ ವಿಮಾ ಗುಂಪು ಯೋಜನೆ ಅಡಿ ಪರಿಹಾರ ಒದಗಿಸಲಾಗುತ್ತಿದ್ದು, 22 ಜನರಿಗೆ ತಲಾ 10 ಲಕ್ಷ ರೂ. ಪರಿಹಾರ, 18 ಜನರಿಗೆ ಅನುಕಂಪ ಆಧಾರಿತ ಉದ್ಯೋಗ ಒದಗಿಸಲಾಗಿದೆ ಎಂದು ಕೆಕೆಆರ್‌ಟಿಸಿ ಸಂಸ್ಥೆಯ ಅಧ್ಯಕ್ಷ ಅರುಣಕುಮಾರ ಎಂ.ವೈ. ಪಾಟೀಲ್ ಹೇಳಿದರು.

ವಿಮಾ ಗುಂಪು ಯೋಜನೆ ಅಡಿ ಪರಿಹಾರ

ನಗರದ ಸಂಸ್ಥೆ ಕೇಂದ್ರ ಕಚೇರಿಯಲ್ಲಿ ಅನುಕಂಪ ಆಧಾರಿತ ಉದ್ಯೋಗ ಪಡೆದವರಿಗೆ ಆದೇಶ ಪತ್ರ ನೀಡಿ ಮಾತನಾಡಿದ ಅವರು, 22 ಪ್ರಕರಣಗಳಲ್ಲಿ ತಲಾ 10 ಲಕ್ಷ ರೂ. ಹೀಗೆ 2.20 ಕೋಟಿ ರೂ. ಪರಿಹಾರ ಚೆಕ್ ವಿತರಿಸಲಾಗಿದೆ. ಇದರಲ್ಲಿ ನೌಕರರ ವಿಮಾ ವಂತಿಗೆ 200 ರೂ, ಆಡಳಿತ ವರ್ಗದ ವಿಮಾ ವಂತಿಗೆ 210 ರೂ. ಭರಿಸಲಾಗುತ್ತಿದೆ. ಜನವರಿಯಿಂದ ನೌಕರರ ವಿಮಾ ವಂತಿಗೆ 300 ರೂ. ಮತ್ತು ಆಡಳಿತ ವರ್ಗದ ವಿಮಾ ವಂತಿಗೆ 210 ರೂ. ನಿಗದಿಪಡಿಸಿ ವಿಮೆ ಪರಿಹಾರ 12.50 ಲಕ್ಷ ರೂ. ಬರುವಂತೆ ಯೋಜನೆ ರೂಪಿಸಲಾಗಿದೆ. ಉಳಿದ ನಿಗಮಗಳಿಗೆ ಹೋಲಿಸಿದರೆ ನಮ್ಮ ಸಂಸ್ಥೆ ಹೆಚ್ಚಿನ ಪರಿಹಾರ ಬರುವಂತೆ ಯೋಜನೆ ರೂಪಿಸಿದೆ ಎಂದು ತಿಳಿಸಿದರು.

ಕಲಬುರಗಿ ಜಿಲ್ಲೆಯ ನಾಲ್ವರು, ಕೊಪ್ಪಳದ ಇಬ್ಬರು, ಬೀದರ್‌ನ ಒಂಬತ್ತು, ರಾಯಚೂರಿನ ಒಬ್ಬರು ಮತ್ತು -ವಿಜಯಪುರ ಜಿಲ್ಲೆಯ ಇಬ್ಬರಿಗೆ ಅರ್ಹತೆ ಆಧರಿಸಿ ಅನುಕಂಪ ಆಧಾರದಲ್ಲಿ ನೌಕರಿ ನೀಡಲಾಗಿದೆ. ಸೇವಾ ಅವಧಿಯಲ್ಲಿ ಮೃತಪಟ್ಟ ನೌಕರರ ಅವಲಂಬಿತರು, ಸಲ್ಲಿಸಿರುವ ಅರ್ಜಿ ಅರ್ಜಿ, ದಿನಾಂಕ ಜೇಷ್ಠತೆ ಆಧರಿಸಿ ಕೋರುವ ಹುದ್ದೆಗಳಿಗೆ ಕಾಲಕಾಲಕ್ಕೆ ಖಾಲಿ ಸ್ಥಾನಗಳ ಅನುಗುಣ ಪದವೃಂದ ಮತ್ತು ನೇಮಕಾತಿ ಮತ್ತು ಅನುಕಂಪ ಆಧಾರದ ನೇಮಕಾತಿ ನೀತಿ-2018 ಮತ್ತು ಸಂಬಂಧಿಸಿದಂತೆ ಸುತ್ತೋಲೆ ಅನ್ವಯ ವಿಭಾಗ ಮಟ್ಟದಲ್ಲಿ ನೇಮಕ ಮಾಡಿಕೊಳ್ಳಲಾಗುತ್ತಿದೆ ಎಂದು ಹೇಳಿದರು.



ಉದಯವಾಹಿನಿ ಚಿತ್ರ

**ನಾಲ್ಕು ದಿಕ್ಕಿಗೆ ಸ್ಯಾಟ್‌ಲೈಟ್ ಬಸ್ ನಿಲ್ದಾಣ:** ಕಲಬುರಗಿ ನಗರದ ನಾಲ್ಕೂ ದಿಕ್ಕಿಗೆ ಒಂದರಂತೆ ನಾಲ್ಕು ಹೊಸ ಸ್ಯಾಟ್ ಲೈಟ್ ಬಸ್ ನಿಲ್ದಾಣಗಳು ತಲೆ ಎತ್ತಲಿವೆ. ಗುಲ್ಬರ್ಗ ವಿಶ್ವವಿದ್ಯಾಲಯ, ಕೆಎಂಎಫ್, ಆಳಂದ ರಸ್ತೆ ಕೃಷಿ ಕಾಲೇಜು, ಜೇವರ್ಗಿ ರಸ್ತೆಯ ಬೀಜ ನಿಗಮದ ಬಳಿ ಜಾಗ ಗುರುತಿಸಿ ಸಂಬಂಧಿತ ಇಲಾಖೆಗಳಿಗೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಶೀಘ್ರದಲ್ಲಿ ಜಾಗ ಪಡೆದುಕೊಂಡು ನಿಲ್ದಾಣ ನಿರ್ಮಾಣ ಕಾರ್ಯ ಶುರು ಮಾಡಲು ಯೋಜಿಸಲಾಗಿದೆ ಎಂದು ಅರುಣಕುಮಾರ ಹೇಳಿದರು.

**ಶೀಘ್ರದಲ್ಲೇ ಹೆಚ್ಚುವರಿಯಾಗಿ 400 ಬಸ್ ಸೇರ್ಪಡೆ**

**ನಿಗಮಕ್ಕೆ ಹೆಚ್ಚುವರಿ 400 ಹೊಸ ಬಸ್ ಸೇರ್ಪಡೆ ಕ್ರಿಯೆ ಪ್ರಗತಿಯಲ್ಲಿದ್ದು, ಶೀಘ್ರದಲ್ಲಿ ಬಸ್‌ಗಳ ಕೊರತೆ ನೀಗಲಿದೆ. ಹೊಸ ಬಸ್ ಖರೀದಿಸಿದ ನಂತರ ಬೇಡಿಕೆಗೆ ಅನುಗುಣ ಓಡಾಡಲಿವೆ. ನಗರ ಸಾರಿಗೆ' (ಸಿಟಿ ಬಸ್) 123 ಬಸ್ ಖರೀದಿಸಲಾಗಿದೆ. ನಿಲ್ದಾಣಗಳಲ್ಲಿ ಸ್ವಚ್ಛತೆ ಕೊರತೆ ಕಾಡುತ್ತಿರುವುದು ಗಮನಕ್ಕೆ ಬಂದಿದೆ. ಈ ಕೆಲಸಕ್ಕೆ ಏಜೆನ್ಸಿ ನಿಗದಿ ಮಾಡಲಾಗುತ್ತಿದೆ. ಜತೆಗೆ ಸ್ವಚ್ಛತೆಗಾಗಿ ನಿಯಮಾವಳಿ ಬಿಗಿಗೊಳಿಸಲಾಗುತ್ತಿದೆ. ಜತೆಗೆ ನಿಲ್ದಾಣಗಳಲ್ಲಿನ ಸ್ಟ್ಯಾಂಡ್ ಇನ್ ಚಾರ್ಜ್‌ಗೆ ಒಂದಿಷ್ಟು ಜವಾಬ್ದಾರಿ ವಹಿಸಲಾಗುತ್ತಿದೆ ಎಂದು ನಿಗಮದ ಅಧ್ಯಕ್ಷ ಅರುಣಕುಮಾರ ಪಾಟೀಲ್ ತಿಳಿಸಿದರು.**

**ಇದಕ್ಕೂ ಮೊದಲು ನೌಕರರ ವೇತನದಲ್ಲಿ 100 ರೂ. ವಂತಿಗೆ, ಆಡಳಿತ ವರ್ಗ 50 ರೂ. ಭರಿಸುತ್ತಿದ್ದು, ಪರಿಹಾರ ಮೊತ್ತ 3 ಲಕ್ಷ ರೂ. ಬರುತ್ತಿತ್ತು. ಇದೀಗ ಕಷ್ಟದ ಕಾಲದಲ್ಲಿ ನೌಕರರ ಕುಟುಂಬಕ್ಕೆ ಹೆಚ್ಚಿನ ಪರಿಹಾರ ದೊರೆಯುವಂತೆ ಮಾಡಲು ವಿಮಾ ವಂತಿಗೆ ಹೆಚ್ಚಿಸಿ ಹೆಚ್ಚಿನ ಪರಿಹಾರ ದೊರಕಿಸಿಕೊಡಲು ಯೋಜಿಸಲಾಗಿದೆ. ಡಾ. ಬಿ.ಸುಶೀಲಾ,ಎಂಡಿ**

ಉಭಯ ದೇಶಗಳು ರಾಜತಾಂತ್ರಿಕ ಮಾರ್ಗವನ್ನು ಅನುಸರಿಸದಿದ್ದರೆ ಪರಿಸ್ಥಿತಿ ಕೈಮೀರಿ ಹೋಗಬಹುದು: ಟ್ರಂಪ್

# ರಷ್ಯಾ-ಉಕ್ರೇನ್ ಯುದ್ಧ 3ನೇ ಮಹಾಯುದ್ಧಕ್ಕೆ ನಾಂದಿ ಹಾಡುತ್ತೆ

**ವಾಷಿಂಗ್ಟನ್:** ರಷ್ಯಾ ಹಾಗೂ ಉಕ್ರೇನ್ ನಡುವಿನ ಸುಧೀರ್ಘ ಯುದ್ದವನ್ನು ಕೊನೆಗಾಣಿಸಲು ನಾನಾ ಚರ್ಚೆ, ಶಾಂತಿ ಮಾತುಕತೆಗಳ ಕಸರತ್ತು ಮಾಡಿ ಇನ್ನೇನೂ ಶಾಂತಿ ಒಪ್ಪಂದ ಕೊನೆ ಹಂತದಲ್ಲಿದೆ ಎನ್ನುವಷ್ಟರಲ್ಲಿ ಇದು ಸಹ ವಿಫಲವಾಗುವಂತಿದೆ.ಇದು ಅಮೆರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಪಿತ್ತನೆತ್ತಿಗೇರುವಂತೆ ಮಾಡಿದ್ದು, ಈ ಯುದ್ಧ ಮೂರನೇ ಮಹಾಯುದ್ಧ ಸೃಷ್ಟಿಸಲು ಕಾರಣವಾಗಬಹುದು ಎಂದು ಎಚ್ಚರಿಕೆ ನೀಡಿದ್ದಾರೆ.

ಈ ಕುರಿತು ಶ್ವೇತಭವನದಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಟ್ರಂಪ್ ಯುದ್ದವನ್ನು ನಿಲ್ಲಿಸುವ ತನ್ನ ಉದ್ದೇಶ ಹಾಗೂ ಪ್ರಯತ್ನಗಳನ್ನು ಪುನರುಚ್ಚರಿಸುತ್ತಾ ಈ ಯುದ್ಧವನ್ನು ತಕ್ಷಣವೇ ನಿಲ್ಲಿಸಲು ಪ್ರಯತ್ನಿಸುತ್ತಿದ್ದೇನೆ ಉಭಯ ದೇಶಗಳು ರಾಜತಾಂತ್ರಿಕ ಮಾರ್ಗವನ್ನು ಅನುಸರಿಸದಿದ್ದರೆ ಪರಿಸ್ಥಿತಿ ಕೈಮೀರಿ ಹೋಗಬಹುದು,ಈಗಾಗಲೇ ಕಳೆದ ತಿಂಗಳು ಸುಮಾರು 25,000 ಸೈನಿಕರು ಈ ಯುದ್ಧದಲ್ಲಿ ಮೃತಪಟ್ಟಿದ್ದಾರೆ. ಪರಿಸ್ಥಿತಿ ಮುಂದುವರೆದರೆ ಇದು ಮೂರನೇ ಮಹಾಯುದ್ದಕ್ಕೆ ನಾಂದಿ ಹಾಡಬಹುದು ಎಂದು ತಿಳಿಸಿದ್ದಾರೆ. ನಾನು ಈ ಕುರಿತು ಈಗಾಗಲೇ ಈ ವಿಷಯದ ಕುರಿತು ತಿಳಿಸಿದ್ದೆ ಎಂದ ಟ್ರಂಪ್ ಎಲ್ಲರೂ ಇಂತಹ ಆಟಗಳನ್ನು ಆಡುತ್ತಿದ್ದಾರೆ. ನಾವು ಮೂರನೇ ವಿಶ್ವ ಯುದ್ಧದಲ್ಲಿ ಕೊನೆಗೊಳ್ಳುತ್ತೇವೆ, ಮತ್ತು ನಾವು ಅದನ್ನು ಸಂಭವಿಸುವುದನ್ನು ನೋಡಲು ಬಯಸುವುದಿಲ್ಲ ಎಂದು ಮೊದಲೇ ನಿಮಗೆ ಹೇಳಿದ್ದೆ ಎಂದು ತಿಳಿಸಿದ್ದಾರೆ.

ಇನ್ನು, ಇತ್ತಿಚೆಗೆ ಝೆಲೆನ್ಸ್ಕಿ ಅವರು ಡಾನ್ ಬಾಸ್ ಪ್ರದೇಶವನ್ನು ರಷ್ಯಾಕ್ಕೆ ಹಸ್ತಾಂತರಿಸುವ ಬಗ್ಗೆ ಉಕ್ರೇನಿಯನ್ನರು ಮತ ಚಲಾಯಿಸಲು ಅವಕಾಶ ನೀಡುವ ಸಾಧ್ಯತೆಯನ್ನು ಪ್ರಸ್ತಾಪಿಸಿದ್ದು, ರಷ್ಯಾದ ಮಿಲಿಟರಿ ಸುಮಾರು ನಾಲ್ಕು ವರ್ಷಗಳ ಆಕ್ರಮಣದಲ್ಲಿ ವಶಪಡಿಸಿಕೊಳ್ಳಲು ವಿಫಲವಾದ ಡೊನೆಟ್ಸ್ಕ್ ಮತ್ತು ಲುಹಾನ್ಸ್ಕ್ ಪ್ರದೇಶಗಳ ಭಾಗಗಳನ್ನು ಒಳಗೊಂಡಿರುವ ಪೂರ್ವ ಪ್ರದೇಶಗಳಿಂದ ಉಕ್ರೇನ್ ತನ್ನ ಪಡೆಗಳನ್ನು ಹಿಂತೆಗೆದುಕೊಳ್ಳಬೇಕು ಎಂದು ರಷ್ಯಾ ಒತ್ತಾಯಿಸುತ್ತಿದೆ.

ಹೀಗೆ ಉಭಯ ದೇಶಗಳ ಪಟ್ಟಿನಿಂದಾಗಿ ಬೇಸತ್ತ ಟ್ರಂಪ್ ಈ ಮಾತುಕತೆಗಳ ಕುರಿತು ಇದು ಯಾವುದೇ ಫಲಿತವನ್ನು ಕಾಣದೇ ಹೀಗೆ ಮುಂದುವರಿದರೆ ಮೂರನೇ ಯುದ್ಧ ಖಚಿತ ಎಂದು ತಮ್ಮ ಯುದ್ದದ ಆತಂಕವನ್ನು ಹೊರಹಾಕಿದ್ದಾರೆ.

- ರಷ್ಯಾ ಹಾಗೂ ಉಕ್ರೇನ್ ನಡುವಿನ ಯುದ್ಧ ಕೊನೆಗಾಣದಿದ್ದರೆ 3ನೇ ಮಹಾಯುದ್ದ ಖಚಿತ ಎಂದ ಟ್ರಂಪ್
- ಕೇವಲ ಒಂದೇ ತಿಂಗಳಲ್ಲಿ 25,000 ಸೈನಿಕರು ಯುದ್ದದಲ್ಲಿ ಸಾವನ್ನಪ್ಪಿದ್ದಾರೆ ಎಂದು ಹೇಳಿಕೆ
- ಪಟ್ಟು ಸಡಲಿದ ಉಭಯ ದೇಶಗಳ ವರ್ತನೆಯಿಂದಾಗಿ ಬೇಸತ್ತ ಟ್ರಂಪ್




### ರಷ್ಯಾ-ಉಕ್ರೇನ್ ಫಲವಿಲ್ಲದ ಮಾತುಕತೆಯಿಂದ ಬೇಸತ್ತ ಟ್ರಂಪ್

ಈ ಕುರಿತು ಮಾತನಾಡಿರುವ ಶ್ವೇತಭವನದ ಮಾಧ್ಯಮ ಕಾರ್ಯದರ್ಶಿ ಕರೋಲಿನ್ ಲೀವಿಟ್ ಕೂಡ ಅಧ್ಯಕ್ಷರು ಮಾಸ್ಕೋ ಮತ್ತು ಕೀವ್ ಎರಡೂ ಕಡೆಯವರೊಂದಿಗೆ ಸಂಧಾನಕ್ಕೆ ನಿಧಾನಗತಿಯ ಪ್ರಗತಿಯ ಬಗ್ಗೆ ತೀವ್ರ ಅಸಮಾಧಾನ ಹೊಂದಿದ್ದಾರೆ. ಟ್ರಂಪ್ ಕೇವಲ ಮಾತುಕತೆಗಳನ್ನು ನಡೆಸಲು ಸಭೆ ಆಯೋಜಿಸುವುದಿಲ್ಲ. ಫಲಿತಾಂಶಗಳನ್ನು ಬಯಸುತ್ತಾರೆ, ಅವರಿಗೆ ಇನ್ನು ಮಾತುಕತೆ ಬೇಡ. ಅವರಿಗೆ ಕ್ರಿಯೆ ಬೇಕು. ಈ ಯುದ್ಧ ಕೊನೆಗೊಳ್ಳಬೇಕೆಂದು ಅವರು ಬಯಸುತ್ತಾರೆ ಎಂದು ಹೇಳಿಕೆ ನೀಡಿದ್ದಾರೆ.

### ಪಟ್ಟು ಸಡಿಲಿಸದ ಉಭಯ ದೇಶಗಳು

ಉಕ್ರೇನ್ ಶಾಂತಿ ಮಾತುಕತೆ ಸಫಲವಾಗಲು ಇತ್ತ ಟ್ರಂಪ್ ನಾನಾ ಕಸರತ್ತು ಮಾಡುತ್ತಿದ್ದರೆ ಪುಟಿನ್ ನನಗೆ ಕೆಲವು ಭೂಪ್ರದೇಶಗಳನ್ನು ಬಿಟ್ಟುಕೊಟ್ಟರೆ ಮಾತ್ರ ಶಾಂತಿ ಸಾಧ್ಯವೆಂದು ಹೇಳುವ ಜೊತೆಜೊತೆಗೆ ಕೆಲ ಬೇಡಿಕೆಗಳನ್ನು ಇಟ್ಟಿದ್ದಾರೆ. ಆದರೆ ವೊಲೊಡಿಮಿರ್ ಝೆಲೆನ್ಸ್ಕಿ ನಾನು ಒಂದಿಂಚೂ ಭೂಭಾಗವನ್ನು ಬಿಟ್ಟುಕೊಡುವುದಿಲ್ಲ ಎಂದು ಪಟ್ಟುಹಿಡಿದಿದ್ದಾರೆ.

## ಅಭಿವೃದ್ಧಿಶೀಲ ರಾಷ್ಟ್ರಗಳ ಸಾಮರ್ಥ್ಯ ವೃದ್ಧಿಗೆ ಭಾರತ ಕರೆ

**ನವದೆಹಲಿ:** ಜಾಗತಿಕ ಪರಿಸರ ಪರಿಹಾರಗಳು ಜನ-ಕೇಂದ್ರಿತ ಮತ್ತು ಸಮಾನತೆಯಲ್ಲಿ ಬೇರೂರಿರಬೇಕು, ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ಪ್ರವೇಶಿಸಬಹುದಾದ ಹಣಕಾಸು, ತಂತ್ರಜ್ಞಾನ ವರ್ಗಾವಣೆ ಮತ್ತು ಸಾಮರ್ಥ್ಯ ವೃದ್ಧಿಗೆ ಕರೆ ನೀಡಬೇಕು ಎಂದು ಭಾರತ ನೈರೋಬಿಯಲ್ಲಿ ನಡೆದ ಯುಎನ್ ಪರಿಸರ ಸಭೆಗೆ ತಿಳಿಸಿದೆ.

ಕೇಂದ್ರ ಪರಿಸರ ಖಾತೆ ರಾಜ್ಯ ಸಚಿವ ಕೀರ್ತಿ ವರ್ಧನ್ ಸಿಂಗ್ ಅವರು, ಯುಎನ್‌ಇಎ-7 ರ ವಿಷಯ ಸ್ಥಿತಿಸ್ಥಾಪಕ ಗ್ರಹಕ್ಕಾಗಿ ಸುಸ್ಥಿರ ಪರಿಹಾರಗಳನ್ನು ಮುಂದುವರಿಸುವುದು ಪ್ರಕೃತಿಯೊಂದಿಗೆ ಸಾಮರಸ್ಯದಿಂದ ಬದುಕಲು ಮತ್ತು ಸಮಗ್ರ, ಹವಾಮಾನ-ಸ್ಥಿತಿಸ್ಥಾಪಕ ಅಭಿವೃದ್ಧಿಯನ್ನು ಅನುಸರಿಸಲು ಭಾರತದ ದೀರ್ಘಕಾಲದ ಬದ್ಧತೆಗೆ ಹೊಂದಿಕೆಯಾಗುತ್ತದೆ ಎಂದು ಹೇಳಿದರು. ಈ ತತ್ವಗಳು ಮಹತ್ವಾಕಾಂಕ್ಷೆಯನ್ನು ಸಕ್ರಿಯಗೊಳಿಸುತ್ತವೆ, ವಿಶ್ವಾಸವನ್ನು ಬೆಳೆಸುತ್ತವೆ ಮತ್ತು ಬಹುಪಕ್ಷೀಯ ಸಹಕಾರವನ್ನು ಬಲಪಡಿಸುತ್ತವೆ ಎಂದು ಅವರು ಹೇಳಿದರು.ಕಳೆದ ದಶಕದಲ್ಲಿ ಭಾರತದ ದೇಶೀಯ ಕ್ರಮಗಳು ನಿರ್ಧರಿತ ರಾಷ್ಟ್ರೀಯ ಪ್ರಯತ್ನಗಳು ಏನನ್ನು ಸಾಧಿಸಬಹುದು ಎಂಬುದನ್ನು ತೋರಿಸುತ್ತವೆ ಎಂದು ಸಚಿವರು ಎತ್ತಿ ತೋರಿಸಿದರು. ಭಾರತವು ಈಗಾಗಲೇ 235 ಗಿಗಾವ್ಯಾಟ್‌ಗಳಷ್ಟು ಪಳೆಯುಳಿಕೆಯೇತರ ಇಂಧನ ಸ್ಥಾಪಿತ ವಿದ್ಯುತ್ ಸಾಮರ್ಥ್ಯವನ್ನು ಸಾಧಿಸಿದೆ, ಇದು ಗುರಿಗಿಂತ ಗಮನಾರ್ಹವಾಗಿ ಮುಂದಿದೆ ಎಂದು ಅವರು ಹೇಳಿದರು.




ಭಾರತದ ಜೀವನಶೈಲಿ ಆಂದೋಲನವಾದ ಮಿಷನ್ ಲೈಫ್ ಅನ್ನು ಅವರು ಒತ್ತಿ ಹೇಳಿದರು, ಇದು ಗಮನವಿಟ್ಟುಕೊಂಡ ಬಳಕೆ ಮತ್ತು ಸುಸ್ಥಿರ ಜೀವನಶೈಲಿಯನ್ನು ಉತ್ತೇಜಿಸುತ್ತದೆ. ದೇಶದ ಏಕ್ ಪೆಡ್ ಮಾ ಕೆ ನಾಮ್ ಅಭಿಯಾನವು ಒಂದು ಸಾಮೂಹಿಕ ಚಳುವಳಿಯಾಗಿ ಮಾರ್ಪಟ್ಟಿದೆ, ಒಬ್ಬರ ತಾಯಿಯನ್ನು ನೋಡಿಕೊಳ್ಳುವುದು ಮತ್ತು ಭೂಮಿಯನ್ನು ಪೋಷಿಸುವ ನಡುವಿನ ಸಮಾನಾಂತರವನ್ನು ಚಿತ್ರಿಸುತ್ತದೆ ಎಂದು ಸಿಂಗ್ ಹೇಳಿದರು. ಕ್ಷೀಣಗೊಂಡ ಭೂದೃಶ್ಯಗಳನ್ನು ಪುನಃಸ್ಥಾಪಿಸಲು ಮತ್ತು ಪರಿಸರ ಸ್ಥಿತಿಸ್ಥಾಪಕತ್ವವನ್ನು ನಿರ್ಮಿಸಲು ಈ ಉಪಕ್ರಮದ ಅಡಿಯಲ್ಲಿ 2.6 ಶತಕೋಟಿಗೂ ಹೆಚ್ಚು ಸಸಿಗಳನ್ನು ನೆಡಲಾಗಿದೆ ಎಂದು ಅವರು ಹೇಳಿದರು.

> ಪರಿಸರ ಪರಿಹಾರಗಳು ಜನರ ಮೇಲೆ ಕೇಂದ್ರೀಕೃತವಾಗಿರಬೇಕು ಮತ್ತು ಜಾಗತಿಕ ಕ್ರಿಯೆಯು ಸಮಾನತೆ, ಸಾಮಾನ್ಯ ಆದರೆ ವಿಭಿನ್ನ ಜವಾಬ್ದಾರಿಗಳು ಮತ್ತು ಸಂಬಂಧಿತ ಸಾಮರ್ಥ್ಯಗಳು ಮತ್ತು ರಾಷ್ಟ್ರೀಯ ಸಂದರ್ಭಗಳಿಗೆ ಗೌರವದ ತತ್ವಗಳಿಂದ ಮಾರ್ಗದರ್ಶಿಸಲ್ಪಡಬೇಕು ಎಂಬ ದೃಢನಿಶ್ಚಯದೊಂದಿಗೆ ಭಾರತ ಯುಎನ್‌ಇಎ 7 ಅನ್ನು ಸಮೀಪಿಸುತ್ತದೆ.
> -ಕೀರ್ತಿ ವರ್ಧನ್ ಸಿಂಗ್

## ಸುರಕ್ಷಿತ ಮನೆಗೆ ಲಾಲೂ ಪುತ್ರಿ ಮನವಿ

**ಪಾಟ್ನಾ:** ಆರ್ ಜೆಡಿ ಮುಖ್ಯಸ್ಥ ಲಾಲು ಪ್ರಸಾದ್ ಯಾದವ್ ಅವರ ಕುಟುಂಬದೊಂದಿಗೆ ಭಿನ್ನಾಭಿಪ್ರಾಯ ಕೇಳಿಬಂದ ಹಿನ್ನೆಲೆಯಲ್ಲಿ ಲಾಲು ಪ್ರಸಾದ್ ಪುತ್ರಿ ರೋಹಿಣಿ ಆಚಾರ್ಯ, ತಮಗೊಂದು ಸುರಕ್ಷಿತ ಮನೆ ಹುಡುಕಿಕೊಡುವಂತೆ ಮುಖ್ಯಮಂತ್ರಿ ನಿತೀಶ್ ಕುಮಾರ್ ಗೆ ಮನವಿ ಮಾಡಿದ್ದಾರೆ.

ಸಿಂಗಾಪುರದಲ್ಲಿ ವಾಸಿಸಿರುವ ರೋಹಿಣಿ, ಡಿಸೆಂಬರ್ 2022ರಲ್ಲಿ ಸಿಂಗಾಪುರ ಆಸ್ಪತ್ರೆಯಲ್ಲಿ ತಂದೆ ಲಾಲು ಪ್ರಸಾದ್ ಯಾದವ್ ಅವರಿಗೆ ತಮ್ಮ ಕಿಡ್ನಿಯನ್ನು ದಾನ ಮಾಡಿದ್ದರು. ಸಾಮಾಜಿಕ ಮಾಧ್ಯಮ ಮಾಹಿತಿ ಹಂಚಿಕೊಂಡ ಅವರು ಮಹಿಳೆಯರಿಗೆ 10,000 ರೂ. ಗಳನ್ನು ವಿತರಿಸಿದ್ದಕ್ಕಾಗಿ ಮತ್ತು ಶಾಲಾ ಬಾಲಕಿಯರಿಗೆ ಸೈಕಲ್‌ಗಳನ್ನು ನೀಡಿದ್ದಕ್ಕಾಗಿ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರನ್ನು ಪರೋಕ್ಷವಾಗಿ ಶ್ಲಾಘಿಸಿದ್ದಾರೆ.

ಈ ಕ್ರಮಗಳು ಅಸಮರ್ಪಕವಾಗಿವೆ ಎಂದು ಹೇಳಿದ ಅವರು ಬಿಹಾರದಲ್ಲಿ, ಆಳವಾಗಿ ಬೇರೂರಿರುವ ಪಿತೃಪ್ರಧಾನ ಮನಸ್ಥಿತಿ ಸಾಮಾಜಿಕ ಮತ್ತು ರಾಜಕೀಯ ಕ್ಷೇತ್ರಗಳಲ್ಲಿ ವ್ಯಾಪಕ ಬದಲಾವಣೆಯ ಅಗತ್ಯವನ್ನು ಸೃಷ್ಟಿಸುತ್ತದೆ ಎಂದು ರೋಹಿಣಿ ಪ್ರತಿಪಾದಿಸಿದ್ದಾರೆ.




ಪ್ರತಿಯೊಬ್ಬ ಮಗಳಿಗೂ ತನ್ನ ಪೋಷಕರ ಮನೆ ಸುರಕ್ಷಿತ ಸ್ಥಳ ಎಂಬ ಭರವಸೆಯೊಂದಿಗೆ ಬೆಳೆಯುವ ಹಕ್ಕಿದೆ, ಅಲ್ಲಿ ಅವಳು ಭಯ, ಅಪರಾಧಿ ಭಾವನೆ, ನಾಚಿಕೆ ಅಥವಾ ಯಾರಿಗೂ ತನ್ನನ್ನು ತಾನು ವಿವರಿಸಿಕೊಳ್ಳಬೇಕಾಗಿಲ್ಲ ಎನ್ನುವ ಸೂಕ್ಷ್ಮವಾಗಿ ವಿಷಯ ಹಂಚಿಕೊಂಡಿದ್ದಾರೆ.

ಈ ಕ್ರಮವನ್ನು ಜಾರಿಗೆ ತರುವುದು ಕೇವಲ ಆಡಳಿತಾತ್ಮಕ ಕರ್ತವ್ಯ ವಲ್ಲ, ಆದರೆ ಭವಿಷ್ಯದ ಶೋಷಣೆ ಮತ್ತು ಕಿರುಕುಳದಿಂದ ಅಸಂಖ್ಯಾತ ಮಹಿಳೆಯರನ್ನು ರಕ್ಷಿಸುವತ್ತ ಒಂದು ಹೆಜ್ಜೆಯಾಗಿದೆ ಎಂದು ಹೇಳಿದ್ದಾರೆ.

## ವಿಮಾನದ ರೆಕ್ಕೆಗೆ ಸಿಲುಕಿದ ಸ್ಕೈಡೈವಿಂಗ್ ಸಾಹಸಿ

**ಸಿಡ್ನಿ:** ಆಸ್ಟ್ರೇಲಿಯಾದ ಸ್ಕೈಡೈವರ್ ಒಬ್ಬರು ಆಕಾಶದಿಂದ ಹಾರುವಾಗ ಪ್ಯಾರಾಚೂಟ್ ವಿಮಾನದ ಬಾಲಕ್ಕೆ ಸಿಲುಕಿ ಅಲ್ಲೆ ಗಾಳಿಯಲ್ಲಿ ಸಾವಿರಾರು ಅಡಿ ಎತ್ತರದಲ್ಲಿ ಗಾಳಿಯಲ್ಲಿ ತೇಲಾಡಿರುವ ರೋಮಾಂಚನಕಾರಿ ಘಟನೆ ನಡೆಸಿದೆ. ಸೆಪ್ಟೆಂಬರ್ ತಿಂಗಳಲ್ಲಿ ಆಸ್ಟ್ರೇಲಿಯಾದ ಕ್ವೀನ್ಸ್‌ಲ್ಯಾಂಡ್‌ನ ಕೇರ್ನ್ಸ್ ನಗರದ ದಕ್ಷಿಣ ಭಾಗ ಸಾಹಸ ಪ್ರದರ್ಶನದ ವೇಳೆ ಈ ಘಟನೆ ನಡೆದಿದ್ದು, ತಡವಾಗಿ ಬೆಳಕಿಗೆ ಬಂದಿದೆ.ಈ ರೋಚಕ ದೃಶ್ಯ ವಿಡಿಯೋವನ್ನು ಆಸ್ಟ್ರೇಲಿಯಾದ ಸಾರಿಗೆ ಸುರಕ್ಷತಾ ಮಂಡಳಿ ಬಿಡುಗಡೆ ಮಾಡಿದ್ದು, ಈ ಸಾಹಸ ಪ್ರದರ್ಶನದಲ್ಲಿ ಸುಮಾರು 16 ಮಂದಿ ಸ್ಕೈಡೈವರ್ ಗಳು 15,000 ಅಡಿ ಎತ್ತರದಿಂದ ಜಿಗಿಯುವ ಸಾಹಸಕ್ಕೆ ಸಿದ್ದರಾಗಿದ್ದರು.

ಸ್ಕೈಡೈವಿಂಗ್ ಮಾಡುವ ರೋಚಕ ಸಾಹಸ ದೃಶ್ಯವನ್ನು ಸೆರೆಹಿಡಿಯಲು ವಿಮಾನದಲ್ಲಿ ಪಕ್ಕದಲ್ಲೇ ಕ್ಯಾಮೆರ ಮ್ಯಾನ್ ಸಹ ಇದ್ದಾರೆ. ಇದರಲ್ಲಿ ಮೊದಲ ಸ್ಕೈಡೈವರ್ ವಿಮಾನದಿಂದ ಹೊರಬರುತ್ತಿದ್ದಂತೆಯೇ ಗೊಂದಲ ಉಂಟಾಗಿದ್ದು. ಈ ಘಟನೆ ನಡೆದಿದೆ. ಈ ವೇಳೆ ಸ್ಕೈಡೈವರ್ ಒಬ್ಬ ಕಿತ್ತಳೆ ಬಣ್ಣದ ರಿಸರ್ವ್ ಪ್ಯಾರಾಚೂಟ್ ವಿಮಾನದ ರೆಕ್ಕೆಗೆ ಸಿಲುಕಿಕೊಂಡಿದೆ. ಇದರಿಂದಾಗಿ, ಆ ಸ್ಕೈಡೈವರ್ ಹಿಂದಕ್ಕೆ ಎಸೆಯಲ್ಪಟ್ಟಿದ್ದು, ಅವರ ಕಾಲುಗಳು ವಿಮಾನಕ್ಕೆ ತಗುಲಿವೆ. ಆಗ ರಿಸರ್ವ್ ಪ್ಯಾರಾಚೂಟ್ ವಿಮಾನದ ಬಾಲದ ಸುತ್ತ ಸುತ್ತಿಕೊಂಡಿದೆ. ಇದರಿಂದಾಗಿ ವಿಮಾನದ ಪಕ್ಕದಲ್ಲಿ ಜಿಗಿಯಲು ಸಿದ್ಧರಾಗಿದ್ದ ಕ್ಯಾಮೆರಾಮ್ಯಾನ್ ಕೂಡ ಕೆಳಗೆ ಬಿದ್ದಿದ್ದಾರೆ. ಸ್ಕೈಡೈವರ್‌ಗೆ ಏನು ನಡೆಯುತ್ತಿದೆ ಎಂದು ಅರಿವಾಗಲು ಕೆಲ ಕ್ಷಣಗಳು ಬೇಕಾದವು.ಇದರಿಂದ ಅವರು ಆಘಾತಕ್ಕೊಳಗಾದಂತೆ ತಮ್ಮ ಹೆಲ್ಮೆಟ್ ಮೇಲೆ ಕೈಯಿಟ್ಟುಕೊಂಡಿದ್ದಾನೆ. ಪ್ಯಾರಾಚೂಟ್ ಕಟ್ ಮಾಡಿ ಗಾಳಿಯಲ್ಲಿ ಜಿಗಿದ ರೋಮಾಂಚನಕಾರಿ ದೃಶ್ಯ ಇದಾದ ಕೆಲ ಕ್ಷಣಗಳಲ್ಲೇ ಗಾಳಿಯಲ್ಲಿ ತೂಗಾಡುತ್ತಿದ್ದಾಗಲೇ, ಆ ಸ್ಕೈಡೈವರ್ ತಮ್ಮ ಬಳಿ ಇದ್ದ ಹುಕ್ ನೈಫ್ ಬಳಸಿ ರಿಸರ್ವ್ ಪ್ಯಾರಾಚೂಟ್‌ನ ಹಗ್ಗಗಳನ್ನು ಕತ್ತರಿಸಿ, ತಮ್ಮನ್ನು ತಾವು ಬಿಡಿಸಿಕೊಂಡಿದ್ದಾರೆ.




## ಮ್ಯಾನ್ಮಾರ್ ಸೇನೆ ನಡೆಸಿದ ವೈಮಾನಿಕ ದಾಳಿಗೆ 34 ಮಂದಿ ಬಲಿ

**ಬ್ಯಾಂಕಾಕ್:** ನಿನ್ನೆ ನಡೆದ ಮ್ಯಾನ್ಮಾರ್ ಸೇನೆಯ ವೈಮಾನಿಕ ದಾಳಿಯಲ್ಲಿ ಪ್ರಮುಖ ಬಂಡುಕೋರ ಸಶಸ್ತ್ರ ಪಡೆ ನಿಯಂತ್ರಿಸುವ ಪ್ರದೇಶದಲ್ಲಿ ಆಸ್ಪತ್ರೆ ನಾಶವಾಗಿದ್ದು, 34 ರೋಗಿಗಳು ಮತ್ತು ವೈದ್ಯಕೀಯ ಸಿಬ್ಬಂದಿ ಸಾವನ್ನಪ್ಪಿದ್ದಾರೆ ಎಂದು ರಕ್ಷಣಾ ಕಾರ್ಯಕರ್ತ ಮತ್ತು ಸ್ವತಂತ್ರ ಮಾಧ್ಯಮ ವರದಿಗಳು ತಿಳಿಸಿವೆ.

ಪಶ್ಚಿಮ ರಾಜ್ಯವಾದ ರಾಖೈನ್‌ನಲ್ಲಿ ಜನಾಂಗೀಯ ಅರಕನ್ ಸೈನ್ಯದ ನಿಯಂತ್ರಣದಲ್ಲಿರುವ ಪ್ರದೇಶವಾದ ಮ್ರೌಕ್-ಯು ಪಟ್ಟಣದಲ್ಲಿರುವ ಜನರಲ್ ಆಸ್ಪತ್ರೆಯ ಮೇಲೆ ನಡೆದ ದಾಳಿಯಲ್ಲಿ ಸುಮಾರು 80 ಜನರು ಗಾಯಗೊಂಡಿದ್ದಾರೆ.2021 ರಲ್ಲಿ ಮ್ಯಾನ್ಮಾರ್ ಸರ್ಕಾರವನ್ನು ವಶಪಡಿಸಿಕೊಂಡ ಮತ್ತು ಅಂದಿನಿಂದ ಜನಾಂಗೀಯ ಸೇನಾಪಡೆಗಳು ಮತ್ತು ಸಶಸ್ತ್ರ ಪ್ರತಿರೋಧ ಪಡೆಗಳ ವಿರುದ್ಧ ಹೋರಾಡುತ್ತಿರುವ ಮಿಲಿಟರಿ, ಈ ಪ್ರದೇಶದಲ್ಲಿ ಯಾವುದೇ ದಾಳಿಯ ಬಗ್ಗೆ ಉಲ್ಲೇಖಿಸಿಲ್ಲ.

ರಾಖೈನ್‌ನಲ್ಲಿನ ರಕ್ಷಣಾ ಸೇವೆಗಳ ಹಿರಿಯ ಅಧಿಕಾರಿ ವಾಯ್ ಹುನ್ ಆಂಗ್, ರಾತ್ರಿ 9.13 ಕ್ಕೆ ಜೆಟ್ ಫೈಟರ್ ಎರಡು ಬಾಂಬ್‌ಗಳನ್ನು ಬೀಳಿಸಿತು, ಒಂದು ಆಸ್ಪತ್ರೆಯ ಚೇತರಿಕೆ ವಾರ್ಡ್‌ಗೆ ಬಡಿದು ಇನ್ನೊಂದು ಆಸ್ಪತ್ರೆಯ ಮುಖ್ಯ ಕಟ್ಟಡದ ಬಳಿ ಇಳಿಯಿತು ಎಂದು ಅಸೋಸಿಯೇಟೆಡ್ ಪ್ರೆಸ್‌ಗೆ ತಿಳಿಸಿದರು.



ಆಸ್ಪತ್ರೆಗೆ ನೆರವು ನೀಡಲು ಆಗಮಿಸಿದ್ದಾಗಿ ಮತ್ತು 17 ಮಹಿಳೆಯರು ಮತ್ತು 17 ಪುರುಷರ ಸಾವುಗಳನ್ನು ದಾಖಲಿಸಿರುವುದಾಗಿ ಅವರು ಹೇಳಿದರು. ಬಾಂಬ್ ದಾಳಿಯಿಂದ ಆಸ್ಪತ್ರೆಯ ಬಹುತೇಕ ಕಟ್ಟಡ ನಾಶವಾಗಿದೆ ಮತ್ತು ಆಸ್ಪತ್ರೆಯ ಬಳಿಯಿರುವ ಟ್ಯಾಕ್ಸಿಗಳು ಮತ್ತು ಮೋಟಾರ್ ಬೈಕ್‌ಗಳು ಸಹ ಹಾನಿಗೊಳಗಾಗಿವೆ ಎಂದು ಅವರು ಹೇಳಿದರು. ಹೆಚ್ಚು ಅಗತ್ಯವಿರುವ ವೈದ್ಯಕೀಯ ಸೇವೆಗಳನ್ನು ಒದಗಿಸಲು ವೈದ್ಯರು ಮ್ರೌಕ್-ಯುನಲ್ಲಿ ಒಟ್ಟುಗೂಡಿದ ನಂತರ ಅದನ್ನು ಮತ್ತೆ ತೆರೆಯಲಾಯಿತು.

> ರಖೈನ್ ಮೂಲದ ಆನ್‌ಲೈನ್ ಮಾಧ್ಯಮವು ಹಾನಿಗೊಳಗಾದ ಕಟ್ಟಡಗಳು ಮತ್ತು ವೈದ್ಯಕೀಯ ಉಪಕರಣಗಳು ಸೇರಿದಂತೆ ಭಗ್ನಾವಶೇಷಗಳನ್ನು ತೋರಿಸುವ ಫೋಟೋಗಳು ಮತ್ತು ವಿಡಿಯೋಗಳನ್ನು ಪೋಸ್ಟ್ ಮಾಡಿದೆ.ರಖೈನ್‌ನಲ್ಲಿನ ಜನರಿಗೆ ಆಸ್ಪತ್ರೆಯು ಆರೋಗ್ಯ ರಕ್ಷಣೆಯ ಪ್ರಮುಖ ಮೂಲವಾಗಿದೆ, ಅಲ್ಲಿ ಮ್ಯಾನ್ಮಾರ್‌ನ ಅಂತರ್ಯುದ್ಧದಿಂದಾಗಿ ಹೆಚ್ಚಿನ ಆಸ್ಪತ್ರೆಗಳು ಮುಚ್ಚಲ್ಪಟ್ಟಿವೆ.
> -ವಾಯ್ ಹುನ್ ಆಂಗ್

## ನ್ಯಾಯಾಧೀಶರ ವಜಾ ವಿಚಾರದಲ್ಲಿ ಅಮಿತ್ ಶಾ- ಉದ್ಧವ್ ಠಾಕ್ರೆ ಜಟಾಪಟಿ

**ಹೊಸದಿಲ್ಲಿ:** ಕೇಂದ್ರ ಗೃಹ ಸಚಿವ ಅಮಿತ್ ಶಾ ಮತ್ತು ಶಿವಸೇನೆ (ಯುಬಿಟಿ) ನಾಯಕ ಉದ್ಧವ್ ಠಾಕ್ರೆ ಅವರ ನಡುವೆ ತೀವ್ರ ರಾಜಕೀಯ ಜಟಾಪಟಿ ಶುರುವಾಗಿದೆ. ಮದ್ರಾಸ್ ಹೈಕೋರ್ಟ್ ನ್ಯಾಯಮೂರ್ತಿ ಜಿ.ಆರ್. ಸ್ವಾಮಿನಾಥನ್ ಅವರ ವಿರುದ್ಧ ಭಾರತ ಬ್ಲಾಕ್ ಮಂಡಿಸಿರುವ ವಜಾ ಮಂಡನೆ ಈ ವಿವಾದಕ್ಕೆ ಕಾರಣವಾಗಿದೆ. ಈ ವಿಚಾರವಾಗಿ ಮಹಾರಾಷ್ಟ್ರದಲ್ಲಿ ರಾಜಕೀಯ ಕೆಸರೆರಚಾಟ ಜೋರಾಗಿದೆ.

ನ್ಯಾಯಮೂರ್ತಿ ಜಿ.ಆರ್. ಸ್ವಾಮಿನಾಥನ್ ಅವರು ದರ್ಗಾ ಸಮೀಪದ ಪವಿತ್ರ ಸ್ಥಳದಲ್ಲಿ ದೀಪ ಬೆಳಗುವ ಸಾಂಪ್ರದಾಯಿಕ ಆಚರಣೆಗೆ ಸಂಬಂಧಿಸಿದಂತೆ ನೀಡಿದ್ದ ಆದೇಶ ವಿವಾದಕ್ಕೆ ಕಾರಣವಾಯಿತು. ಈ ಆದೇಶದ ಹಿನ್ನೆಲೆಯಲ್ಲಿ, ವಿಪಕ್ಷಗಳಾದ ಇಂಡಿಯಾ ಬ್ಲಾಕ್, ನ್ಯಾಯಮೂರ್ತಿ ಸ್ವಾಮಿನಾಥನ್ ಅವರನ್ನು ವಜಾ ಮಾಡುವ ಪ್ರಕ್ರಿಯೆಯನ್ನು ಆರಂಭಿಸಿದೆ.

**ಓಟ್ ಬ್ಯಾಂಕ್ ರಾಜಕೀಯ:** ಇದನ್ನು ಅಮಿತ್ ಶಾ ತೀವ್ರವಾಗಿ ಖಂಡಿಸಿದ್ದಾರೆ. ಸ್ವಾತಂತ್ರ್ಯಾ ನಂತರ ಮೊದಲ ಬಾರಿಗೆ, ಕೇವಲ ಓಟ್ ಬ್ಯಾಂಕ್ ರಾಜಕೀಯ'ಕ್ಕಾಗಿ ಒಬ್ಬ ನ್ಯಾಯಾಧೀಶರು ವಜಾ ಎದುರಿಸುತ್ತಿದ್ದಾರೆ ಎಂದು ಶಾ ಹೇಳಿದ್ದಾರೆ. ಈ ಅಪೀಸ್ಮೆಂಟ್ ತಂತ್ರಕ್ಕೆ ಠಾಕ್ರೆ ಬೆಂಬಲ ನೀಡುತ್ತಿದ್ದಾರೆ ಎಂದು ಅವರು ಆರೋಪಿಸಿದ್ದಾರೆ.

ಇದಕ್ಕೆ ತಕ್ಷಣವೇ ಪ್ರತಿಕ್ರಿಯಿಸಿದ ಉದ್ಧವ್ ಠಾಕ್ರೆ, ಬಿಜೆಪಿಗೆ ಮತ್ತು ಅಮಿತ್ ಶಾ ಅವರಿಗೆ ಹಿಂದುತ್ವದ ಬಗ್ಗೆ ಪಾಠ ಹೇಳುವ ನೈತಿಕ ಹಕ್ಕಿಲ್ಲ ಎಂದು ಗುಡುಗಿದ್ದಾರೆ. ಅಮಿತ್ ಶಾ ಅವರು ಸಚಿವ ಕಿರನ್ ರಿಜಿಜು ಅವರು ಗೋಮಾಂಸದ ಬಗ್ಗೆ ನೀಡಿದ ಹೇಳಿಕೆಗಳ ಬಗ್ಗೆ ರಾಜೀನಾಮೆ ಕೇಳುತ್ತಾರೆಯೇ ಎಂದು ಸವಾಲು ಹಾಕಿದ್ದಾರೆ. ಬಿಜೆಪಿಯ ವಂದೇ ಮಾತರಂ ಬಗ್ಗೆ ಇದ್ದಕ್ಕಿದ್ದಂತೆ ತೋರಿಸುತ್ತಿರುವ ಕಾಳಜಿ ಕೂಡಾ ಗಿಮಿಕ್ ಎಂದಿದ್ದಾರೆ. ಅಲ್ಲದೆ, ಪಾಲ್ಘರ್‌ನಲ್ಲಿ ಸಾಧುಗಳ ಹತ್ಯೆ ಪ್ರಕರಣದಲ್ಲಿ ಬಿಜೆಪಿ ದ್ವಂದ್ವ ನಿಲುವು ಹೊಂದಿದೆ ಎಂದು ಆರೋಪಿಸಿದ್ದಾರೆ.

ಮುಖ್ಯಮಂತ್ರಿ ದೇವೇಂದ್ರ ಫಡ್ನವಿಸ್ ಅವರು ಬಿಜೆಪಿಯ ವಾಗ್ದಾಳಿಯನ್ನು ಮತ್ತಷ್ಟು ತೀಕ್ಷ್ಣಗೊಳಿಸಿದ್ದಾರೆ. ಠಾಕ್ರೆ ತಮ್ಮ ರಾಜಕೀಯ ಆತ್ಮವನ್ನು ಕಳೆದುಕೊಂಡಿದ್ದಾರೆ ಎಂದು ಟ್ವೀಟ್ ಮಾಡಿದ್ದಾರೆ. ನೀವು ಯಾರಾಗಿದ್ದಿರಿ, ಈಗ ಯಾರಾಗಿದ್ದೀರಿ? ಎಂದು ಅವರು ಪ್ರಶ್ನಿಸಿದ್ದಾರೆ. ಈ ವಿವಾದವು ನ್ಯಾಯಾಂಗದ ಸ್ವಾಯತ್ತತೆ ಮತ್ತು ರಾಜಕೀಯ ಪ್ರಭಾವದ ಬಗ್ಗೆ ಪ್ರಶ್ನೆಗಳನ್ನು ಎತ್ತಿದೆ. ಭಾರತ ಬ್ಲಾಕ್, ನ್ಯಾಯಮೂರ್ತಿ ಸ್ವಾಮಿನಾಥನ್ ಅವರ ಆದೇಶವು ಧಾರ್ಮಿಕ ಭಾವನೆಗಳಿಗೆ ಧಕ್ಕೆ ತಂದಿದೆ ಎಂದು ವಾದಿಸಿದೆ. ಆದರೆ, ಬಿಜೆಪಿ ಮತ್ತು ಅದರ ಮಿತ್ರ ಪಕ್ಷಗಳು, ಈ ವಜಾ ಮಂಡನೆಯು ನ್ಯಾಯಾಂಗದ ಮೇಲೆ ರಾಜಕೀಯ ಒತ್ತಡ ತರುವ ಪ್ರಯತ್ನ ಎಂದು ಆರೋಪಿಸಿವೆ. ಈ ಘಟನೆಯು ದೇಶದ ರಾಜಕೀಯ ವಲಯದಲ್ಲಿ ದೊಡ್ಡ ಚರ್ಚೆಗೆ ಕಾರಣವಾಗಿದೆ.

- ಕೇಂದ್ರ ಗೃಹ ಸಚಿವ ಅಮಿತ್ ಶಾ ಮತ್ತು ಉದ್ಧವ್ ಠಾಕ್ರೆ ನಡುವೆ ತೀವ್ರ ವಾಕ್ಸಮರ
- ಮದ್ರಾಸ್ ಹೈಕೋರ್ಟ್ ನ್ಯಾಯಮೂರ್ತಿ ಜಿ.ಆರ್. ಸ್ವಾಮಿನಾಥನ್ ಅವರ ವಿರುದ್ಧ ವಜಾ ಮಂಡನೆ ವಿವಾದ
- ಈ ವಿಚಾರವಾಗಿ ಮಹಾರಾಷ್ಟ್ರದಲ್ಲಿ ರಾಜಕೀಯ ಕೆಸರೆರಚಾಟ



### ಏಕನಾಥ್ ಶಿಂಧೆ ವಾಗ್ದಾಳಿ

ಈ ರಾಜಕೀಯ ಬಿಕ್ಕಟ್ಟು ತಾರಕಕ್ಕೇರಿದ್ದು, ಮಹಾರಾಷ್ಟ್ರ ಉಪಮುಖ್ಯಮಂತ್ರಿ ಏಕನಾಥ್ ಶಿಂಧೆ ಅವರು ಠಾಕ್ರೆ ಅವರನ್ನು ಚಮಡ' ಎಂದು ಕರೆದಿದ್ದಾರೆ. ಧಾರ್ಮಿಕ ಸಂಪ್ರದಾಯವನ್ನು ರಕ್ಷಿಸುವ ನ್ಯಾಯಮೂರ್ತಿಯ ಆದೇಶಕ್ಕೆ ಬೆಂಬಲ ನೀಡಿ, ಈಗ ಮೋದಿ ಅಥವಾ ಶಾ ಅವರ ಹಿಂದುತ್ವವನ್ನು ಟೀಕಿಸುವ ಯಾವುದೇ ಹಕ್ಕನ್ನುಉದ್ಧವ್ ಠಾಕ್ರೆ ಕಳೆದುಕೊಂಡಿದ್ದಾರೆ ಎಂದು ಶಿಂಧೆ ವಾದಿಸಿದ್ದಾರೆ.

### ಮಿನಿ ನ್ಯೂಸ್

#### ಚಾಲಕನ ನಿಯಂತ್ರಣ ತಪ್ಪಿ ಬಸ್ ಪಲ್ಟಿಯಾಗಿ ಒಂಬತ್ತು ಜನ ಸಾವು

• ಉದಯವಾಹಿನಿ ಚಿತ್ತೂರು

ಆಂಧ್ರಪ್ರದೇಶದ ಅಲ್ಲೂರಿ ಸೀತಾರಾಮರಾಜುದ್ ಜಿಲ್ಲೆಯಲ್ಲಿ ಮುಂಜಾನೆ ಬಸ್ಸೊಂದು ಚಾಲಕನ ನಿಯಂತ್ರಣ ತಪ್ಪಿ ಉರುಳಿ ಬಿದ್ದ ಪರಿಣಾಮ ಕನಿಷ್ಠ ಒಂಬತ್ತು ಜನರು ಸಾವನ್ನಪ್ಪಿದ್ದಾರೆ. ಚಿತ್ತೂರಿನಿಂದ ನೆರೆಯ ತೆಲಂಗಾಣಕ್ಕೆ ಹೋಗುತ್ತಿದ್ದ ಬಸ್ ಚಿಂತೂರು-ಮರೇಡುಮಿಲ್ಲಿ ಘಾಟ್ ರಸ್ತೆಯಲ್ಲಿ ಬೆಳಿಗ್ಗೆ 4:30 ರ ಸುಮಾರಿಗೆ ದುರ್ಗಾ ದೇವಸ್ಥಾನದ ಬಳಿ ಅಪಘಾತಕ್ಕೀಡಾಗಿದೆ.ಚಾಲಕ ಮತ್ತು ಕ್ಲೀನರ್ ಸೇರಿದಂತೆ ಒಟ್ಟು 37 ಜನರು ಬಸ್‌ನಲ್ಲಿದ್ದರು, ಅಪಘಾತದಿಂದ ಒಂಬತ್ತು ಜನರು ಸಾವನ್ನಪ್ಪಿದರು ಮತ್ತು 22 ಜನರು ಗಾಯಗೊಂಡಿದ್ದು ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅಮಿತ್ ಬರ್ದಾರ್ ತಿಳಿಸಿದ್ದಾರೆ.

ಬಸ್ ರಸ್ತೆ ಪಕ್ಕದ ಕಣಿವೆಗೆ ಬಿದ್ದಿಲ್ಲ ಮರಗಿಡದ ಪೊದೆಗೆ ಸಿಕ್ಕಿಕೊಂಡಿದೆ.ಭಾರೀ ಮಂಜು ಕವಿದಿದ್ದ ಪರಿಣಾಮ ಬಸ್ ಚಾಲಕನಿಗೆ ರಸ್ತೆ ತಿರುವು ಕಾಣದಿರಬಹುದು ಎಂದು ಅಧಿಕಾರಿ ಮಾಹಿತಿ ನೀಡಿದ್ದಾರೆ. ಚಿತ್ತೂರಿನಿಂದ ತೆಲಂಗಾಣದ ಭದ್ರಾಚಲಂನಲ್ಲಿರುವ ಶ್ರೀ ರಾಮ ದೇವಸ್ಥಾನಕ್ಕೆ ಪ್ರಯಾಣಿಕರು ಹೋಗುತ್ತಿದ್ದರು ಎಂದು ಬರ್ದಾರ್ ಹೇಳಿದ್ದಾರೆ. ಗಾಯಾಳುಗಳಲ್ಲಿ ನಾಲ್ವರು ಗಂಭೀರ ಸ್ಥಿತಿಯಲ್ಲಿದ್ದಾರೆ.6 ಮಂದಿ ಯಾವುದೆ ಗಾಯವಿಲ್ಲದೆ ಪಾರಾಗಿದ್ದಾರೆ. ಮೋತುಗುಡೆಮ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

#### ಮಾಜಿ ಸಚಿವ ಶಿವರಾಜ್ ಪಾಟೀಲ್ ನಿಧನ

**ಲಾತೂರ್:** ಹಿರಿಯ ಕಾಂಗ್ರೆಸ್ ನಾಯಕ ಮತ್ತು ಮಾಜಿ ಕೇಂದ್ರ ಗೃಹ ಸಚಿವ ಶಿವರಾಜ್ ಪಾಟೀಲ್(90) ಅವರು ಬೆಳಿಗ್ಗೆ ನಿಧನರಾಗಿದ್ದಾರೆ. ಅಲ್ಪಕಾಲದ ಅನಾರೋಗ್ಯದ ನಂತರ ಪಾಟೀಲ್ ಅವರು ತಮ್ಮ ತವರೂರಾದ ಮಹಾರಾಷ್ಟ್ರದ ಲಾತೂರ್‌ನಲ್ಲಿರುವ ದೇವ್‌ಘರ್‌ನಲ್ಲಿ ನಿವಾಸದಲ್ಲಿ ನಿಧನರಾಗಿದ್ದಾರೆ ಎಂದು ಕುಟುಂಬ ಮೂಲಗಳು ತಿಳಿಸಿವೆ. ಮೃತರು ಪುತ್ರ ಶೈಲೇಶ್ ಪಾಟೀಲ್, ಸೊಸೆ ಬಿಜೆಪಿ ನಾಯಕಿ ಅರ್ಚನಾ ಮತ್ತು ಇಬ್ಬರು ಮೊಮಕ್ಕಳನ್ನು ಅಗಲಿದ್ದಾರೆ. 1991ರಿಂದ 1996ರವರೆಗೆ ಲೋಕಸಭೆಯ ಸ್ಪೀಕರ್ ಆಗಿದ್ದ ಅವರು 2004ರಿಂದ 2008ರವರೆಗೆ ಯುಪಿಎ ಸರ್ಕಾರದಲ್ಲಿ ಗೃಹಸಚಿವರಾಗಿದ್ದರು. 2010ರಿಂದ 2015ರವರೆಗೆ ಪಂಜಾಬ್ -ಚಂಡೀಗಢ ಕೇಂದ್ರ ಪ್ರದೇಶದ ಆಡಳಿತಾಧಿಕಾರಿಯಾಗಿಯೂ ಸೇವೆ ಸಲ್ಲಿಸಿದ್ದರು.

#### ಈಶಾನ್ಯದಲ್ಲಿ 6.7 ತೀವ್ರತೆಯ ಭೂಕಂಪ, ಸುನಾಮಿ ಭೀತಿ

**ಟೋಕಿಯೊ:** ಜಪಾನ್‌ನಲ್ಲಿ ಮತ್ತೆ ಸುನಾಮಿ ಭೀತಿ ಶುರುವಾಗಿದೆ. ಜಪಾನ್‌ನ ಈಶಾನ್ಯದಲ್ಲಿ 6.7 ತೀವ್ರತೆಯ ಭೂಕಂಪ ಸಂಭವಿಸಿದ ನಂತರ ಸುನಾಮಿ ಎಚ್ಚರಿಕೆ ನೀಡಲಾಗಿದೆ ಎಂದು ಜಪಾನ್ ಹವಾಮಾನ ಸಂಸ್ಥೆ ತಿಳಿಸಿದೆ. ಹಾನಿ ಮತ್ತು ಗಾಯಗಳ ಬಗ್ಗೆ ತಕ್ಷಣಕ್ಕೆ ಸ್ಪಷ್ಟ ಮಾಹಿತಿ ಲಭ್ಯವಾಗಿಲ್ಲ. ಈ ವಾರದ ಆರಂಭದಲ್ಲಿ ಉತ್ತರದಲ್ಲಿ ಸಂಭವಿಸಿದ 7.5 ತೀವ್ರತೆಯ ಭೂಕಂಪದ ನಂತರ ಶುಕ್ರವಾರದ ಭೂಕಂಪ ಸಂಭವಿಸಿದ್ದು, ಇದು ಪೆಸಿಫಿಕ್ ಕರಾವಳಿ ಸಮುದಾಯಗಳಲ್ಲಿ ಗಾಯಗಳು, ಲಘು ಹಾನಿ ಮತ್ತು ಸುನಾಮಿಯನ್ನು ಉಂಟುಮಾಡಿದೆ. ಜಪಾನ್‌ನ ಪ್ರಮುಖ ಹೊನ್ಶು ದ್ವೀಪದ ಉತ್ತರದ ತುದಿಯಲ್ಲಿರುವ ಅಮೋರಿ ಕರಾವಳಿಯಲ್ಲಿ ಸೋಮವಾರ ಸಂಭವಿಸಿದ ಆ ಹಿಂದಿನ ಭೂಕಂಪದಲ್ಲಿ ಕನಿಷ್ಠ 34 ಜನರು ಗಾಯಗೊಂಡಿದ್ದಾರೆ. ಈ ಭೂಕಂಪನದ ಬೆನ್ನಲ್ಲೆ ಸುನಾಮಿ ಎದುರಾಗುವ ಸಾಧ್ಯತೆ ಇರುವುದರಿಂದ ಜನ ಎಚ್ಚರಿಕೆಯಿಂದ ಇರಬೇಕು ಎಂದು ಜಪಾನ್ ಸರ್ಕಾರ ಜನರಿಗೆ ಮನವಿ ಮಾಡಿಕೊಂಡಿದೆ.

#### ಬಾಬರಿ ಮಸೀದಿ ವಿವಾದದ ಬೆನ್ನಲ್ಲೇ ಅಯೋಧ್ಯೆ ಶೈಲಿಯ ರಾಮ ಮಂದಿರ ನಿರ್ಮಾಣಕ್ಕೆ ಸಿದ್ಧತೆ

**ಕೊಲ್ಕತ್ತಾ:** ಪಶ್ಚಿಮ ಬಂಗಾಳದ ವಿಧಾನಸಭಾ ಚುನಾವಣೆಗೆ ಮುನ್ನ ಬಂಗಾಳದಲ್ಲಿ ದೇವಾಲಯ-ಮಸೀದಿ ರಾಜಕೀಯ ಭುಗಿಲೆದ್ದಿದೆ. ಸಾಲ್ಟ್ ಲೇಕ್‌ನಲ್ಲಿ ಅಯೋಧ್ಯಾ ಶೈಲಿಯ ರಾಮ ಮಂದಿರ ಸಂಕೀರ್ಣದ ಯೋಜನೆಗಳನ್ನು ಘೋಷಿಸುವ ಪೋಸ್ಟರ್‌ಗಳು ಕಾಣಿಸಿಕೊಂಡವು. ಇದರಲ್ಲಿ ಶಾಲೆ, ಆಸ್ಪತ್ರೆ, ವೃದ್ಧಾಶ್ರಮ ಮತ್ತು ಇತರ ಕಲ್ಯಾಣ ಸೌಲಭ್ಯಗಳು ಇರಲಿವೆ. ಇದೀಗ ತೀವ್ರ ವಿವಾದಕ್ಕೆ ಕಾರಣವಾಗಿದೆ.

ಸ್ಥಳೀಯ ಬಿಜೆಪಿ ನಾಯಕ ಮತ್ತು ಮಾಜಿ ಸ್ಥಳೀಯ ಘಟಕದ ಅಧ್ಯಕ್ಷ ಸಂಜಯ್ ಪೊಯ್ರಾ ಅವರ ಹೆಸರಲ್ಲಿರುವ ಪೋಸ್ಟರ್‌ಗಳು ಸಿಟಿ ಸೆಂಟರ್, ಕರುಣಾಮೊಯಿ ಮತ್ತು ಬಿಧಾನ್‌ನಗರದ ಹಲವಾರು ಪ್ರಮುಖ ಪ್ರದೇಶಗಳಲ್ಲಿ ಕಾಣಿಸಿಕೊಂಡಿವೆ. 4 ಬಿಘಾಗಳ ಜಮೀನಿನಲ್ಲಿ ಅಯೋಧ್ಯಾ ರಾಮಮಂದಿರದ ರಚನೆಯನ್ನು ಹೋಲುವ ರಾಮ ಮಂದಿರವನ್ನು ನಿರ್ಮಿಸಲಾಗುವುದು ಎಂದು ಘೋಷಿಸಲಾಗಿದೆ. ಈ ಯೋಜನೆಗೆ ತಲಾ 1 ರೂ. ದೇಣಿಗೆ ನೀಡುವಂತೆ ನಿವಾಸಿಗಳನ್ನು ಕೋರಲಾಗಿದೆ. 1992ರ ಬಾಬರಿ ಮಸೀದಿಯ ಧ್ವಂಸದ ವಾರ್ಷಿಕೋತ್ಸವದಂದು ಡಿಸೆಂಬರ್ 6ರಂದು ಮುರ್ಷಿದಾಬಾದ್‌ನ ರೆಜಿನಗರದಲ್ಲಿ ಅಮಾನತುಗೊಂಡ ಟಿಎಂಸಿ ಶಾಸಕ ಹುಮಾಯೂನ್ ಕಬೀರ್ ಅವರು ಅಭೂತಪೂರ್ವ ಭದ್ರತೆಯಲ್ಲಿ ಬಾಬರಿ ಮಸೀದಿ ಶೈಲಿಯ ಮಸೀದಿಗೆ ಅಡಿಪಾಯ ಹಾಕಿದ ಕೆಲವೇ ದಿನಗಳಲ್ಲಿ ಈ ಬೆಳವಣಿಗೆ ಸಂಭವಿಸಿದೆ.

# ಕೆರೆಬಿಯನ್ ಸಮುದ್ರದಲ್ಲಿ ಟ್ರಂಪ್ ಒತ್ತಡದ ನಡುವೆ ಮಡೂರೊಗೆ ಪುಟಿನ್ ಕರೆ

ರಾಷ್ಟ್ರೀಯ ಹಿತಾಸಕ್ತಿ ಮತ್ತು ಸಾರ್ವಭೌಮತ್ವವನ್ನು ರಕ್ಷಿಸುವ ನಿಟ್ಟಿನಲ್ಲಿ ನಿಕೋಲಸ್ ಮಡೂರೊ ಅವರ ಸರ್ಕಾರದ ನೀತಿಗೆ ಬೆಂಬಲ

**ಮಾಸ್ಕೋ:** ಅಮೆರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಕೆರಿಬಿಯನ್ ಸಮುದ್ರದಲ್ಲಿ ವೆನುಜುವೆಲಾದ ಹಡುಗಗಳ ಮೇಲೆ ನಿರಂತರ ದಾಳಿ ನಡೆಸುತ್ತಾ, ಯುದ್ದದ ವಾತವರಣವನ್ನು ಸೃಷ್ಟಿಸುವ ಜೊತೆಗೆ ಅಲ್ಲಿನ ಅಧ್ಯಕ್ಷ ನಿಕೋಲಸ್ ಮಡೂರೊ ಅವರನ್ನು ಅಧಿಕಾರದಿಂದ ಕೆಳಗಿಳಿಸಲು ಪ್ರಯತ್ನಿಸುತ್ತಿರುವಾಗಲೇ ರಷ್ಯಾ ಹಾಗೂ ಬೆಲಾರೂಸ್ ವೆನುಜುವೆಲಾಗೆ ತಮ್ಮ ಬೆಂಬಲವನ್ನು ಸೂಚಿಸಿವೆ.

ರಷ್ಯಾ ಹಾಗೂ ಅಮೆರಿಕಾದ ನಡುವೆ ಈಗಾಗಲೇ ಸಾಕಷ್ಟು ಬಿಕ್ಕಟ್ಟಿನ ನಡುವೆಯೂ ರಷ್ಯಾದ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ವೆನುಜುವೆಲಾದ ಅಧ್ಯಕ್ಷ ಹಾಗೂ ಟ್ರಂಪ್ ಬದ್ದ ಶತ್ರು ಮಡೂರೂಗೆ ಕರೆ ಮಾಡಿ ಮಾತನಾಡುವ ಮೂಲಕ ಟ್ರಂಪ್ ನಲ್ಲಿ ಉರಿಯುತ್ತಿರುವ ಬೆಂಕಿಗೆ ಮತ್ತಷ್ಟು ತುಪ್ಪ ಸುರಿಯುವ ಕೆಲಸ ಮಾಡಿದ್ದಾರೆ.

ಟ್ರಂಪ್ ಅವರು ಮಡೂರೊ ಅವರನ್ನು ಟಾರ್ಗೆಟ್ ಮಾಡುತ್ತಿದ್ದು, ಈಗಾಗಲೇ ಹಲವು ಬಾರಿ ಅವರನ್ನು ಬಂಧಿಸುವ ಮಾತುಗಳನ್ನಾಡಿದ್ದಾರೆ. ಇದರ ಜೊತೆಗೆ ವೆನುಜುವೆಲಾದ ಬೋಟ್ ಗಳಿಂದ ಅಮೆರಿಕಾದಲ್ಲಿ ಅಕ್ರಮವಾಗಿ ಡ್ರಗ್ಸ್ ತಂದು ಸುರಿದು ಇಲ್ಲಿನ ಜನತೆಯನ್ನು ಹಾಳು ಮಾಡುತ್ತಿದ್ದಾರೆ ಎಂದು ಆರೋಪಿಸಿ ಕೆರಬಿಯನ್ ಸಮುದ್ರದಲ್ಲಿನ ಪ್ರತಿದಿನವೂ ಬೋಟ್ ಗಳ ಮೇಲೆ ಟ್ರಂಪ್ ಮಿಲಿಟರಿ ದಾಳಿ ನಡೆಸುತ್ತಿದೆ. ಈ ಮೂಲಕ ಮಡೂರೊಗೆ ಟ್ರಂಪ್ ಹೆಚ್ಚಿಸುತ್ತಿರುವ ಒತ್ತಡದಿಂದಾಗಿ ನ.21 ರಂದು ಟ್ರಂಪ್ ಅವರೊಂದಿಗೆ ಮಾತನಾಡಿದ ಮಡೂರೊ, ತನಗೆ ಮತ್ತು ತನ್ನ ಕುಟುಂಬಕ್ಕೆ ಸಂಪೂರ್ಣ ಕಾನೂನು ಕ್ಷಮಾದಾನ ನೀಡಿದರೆ ವೆನೆಜುವೆಲಾವನ್ನು ತೊರೆಯಲು ಸಿದ್ಧನಿರುವುದಾಗಿ ತಿಳಿಸಿದ್ದರು ಎಂದು ವರದಿಯಾಗಿದೆ.

ಈ ಬೆನ್ನಲ್ಲೇ, ಬೆಲಾರೂಸ್ ಸಹ ವೆನುಜುವೆಲಾಗೆ ಬೆಂಬಲವನ್ನು ಸೂಚಿಸಿದೆ. ಬೆಲಾರಸ್ ಅಧ್ಯಕ್ಷ ಅಲೆಕ್ಸಾಂಡರ್ ಲುಕಾಶೆಂಕೊ ಅವರು ವೆನೆಜುವೆಲಾದಲ್ಲಿನ ರಷ್ಯಾದ ರಾಯಭಾರಿ ಜೀಸಸ್ ರಫೇಲ್ ಸಲಾಜಾರ್ ವೆಲಾಜ್ಕ್ವೆಜ್ ಕೇವಲ 17 ದಿನಗಳಲ್ಲೇ ತಮ್ಮ 2ನೇ ಸಭೆಯನ್ನು ನಡೆಸಿದ್ದು, ಬೆಲಾರೂಸ್ ಮಡೂರೊ ಅವರಿಗೆ ಯಾವಾಗಲೂ ಸ್ವಾಗತ ಕೋರುತ್ತದೆ. ಬಹುಶಃ ಈಗ ಅವರು ತನ್ನ ದೇಶ ತೊರೆದು ಬೆಲಾರೂಸ್‌ಗೆ ಭೇಟಿ ನೀಡುವ ಸಮಯ ಬಂದಿದೆ ಎಂದ ತಿಳಿಸಿದ್ದಾರೆ ಎಂದು ಬೆಲಾರೂಸ್ ಮೂಲದ ಸುದ್ದಿ ಸಂಸ್ಥೆಯೊಂದು ವರದಿ ಮಾಡಿದೆ. ಈಗ ಮತ್ತೆ ಅಧಿಕಾರದಲ್ಲಿರುವ ಟ್ರಂಪ್ ಕೆರಬಿಯನ್ ಸಮುದ್ರದ ಮೂಲಕ ಅಮೆರಿಕಾವನ್ನು ಪ್ರವೇಶಿಸುವ ವೆನುಜುವೆಲಾದ ಬೋಟ್ ಗಳ ಮೇಲೆ ದಾಳಿ ನಡೆಸುತ್ತಿದ್ದಾರೆ. ಕೆರಿಬಿಯನ್ ಪ್ರದೇಶದಲ್ಲಿ ಅಮೆರಿಕಾ ದೊಡ್ಡ ಪ್ರಮಾಣದ ಮಿಲಿಟರಿಯನ್ನು ಸಹ ನಿರ್ಮಿಸುತ್ತಿದ್ದು, ವೆನೆಜುವೆಲಾದ ಮೇಲೆ ಒತ್ತಡವನ್ನು ಹೆಚ್ಚಿಸಿದ್ದಾರೆ. ಇನ್ನು, ಈ ಸಂಘರ್ಷದಲ್ಲಿ ರಷ್ಯಾ ವೆನುಜುವೆಲಾಗೆ ಬೆಂಬಲ ನೀಡುವ ಮೂಲಕ ಅಮೆರಿಕಾವನ್ನು ಕೆರಳಿಸುವಂತಹ ಪ್ರಯತ್ನ ಮಾಡಿದ್ದು, ಇದು ರಷ್ಯಾ ಹಾಗೂ ಉಕ್ರೇನ್ ನಡುವಿನ ಶಾಂತಿ ಮಾತುಕತೆಯ ಮೇಲೆ ಹಾಗೂ ಅಮೆರಿಕಾದ ಜೊತೆಗೆ ರಷ್ಯಾದ ಕಹಿ-ಸಿಹಿ ಸಂಬಂಧದ ಮೇಲೆ ಯಾವ ಪರಿಣಾಮ ಬೀಳಲಿದೆ.

### ನಿಮ್ಮ ಜೊತೆ ನಾವಿದ್ದೇವೆ ಎಂದ ರಷ್ಯಾ


ನಿಕೋಲಸ್ ಮಡೂರೊಗೆ ವ್ಲಾಡಿಮಿರ್ ಪುಟಿನ್ ಕರೆಮಾಡಿ ಮಾತನಾಡಿದ್ದಾರೆ.ಈ ವೇಳೆ ಅಮೆರಿಕಾದಿಂದ ಬಾಹ್ಯ ಒತ್ತಡ ಹೆಚ್ಚುತ್ತಿರುವ ಹಿನ್ನಲೆಯಲ್ಲಿ ರಾಷ್ಟ್ರೀಯ ಹಿತಾಸಕ್ತಿ ಮತ್ತು ಸಾರ್ವಭೌಮತ್ವವನ್ನು ರಕ್ಷಿಸುವ ನಿಟ್ಟನಲ್ಲಿ ನಿಕೋಲಸ್ ಮಡೂರೊ ಅವರ ಸರ್ಕಾರದ ನೀತಿಗೆ ನಾವು ಬೆಂಬಲ ನೀಡುತ್ತೇವೆ ಎಂದು ಆಶ್ವಾಸನೆ ನೀಡದ್ದಾರೆ ಎಂದು ರಾಯಿಟರ್ಸ್ ವರದಿ ಮಾಡಿದೆ. ಇನ್ನು, ರಷ್ಯಾದ ವಿದೇಶಾಂಗ ಸಚಿವಾಲಯದ ವಕ್ತಾರೆ ಮಾರಿಯಾ ಜಖರೋವಾ ಇಡೀ ಪಶ್ಚಿಮ ಗೋಳಾರ್ಧದಲ್ಲಿ ಅನಿರೀಕ್ಷಿತ ಪರಿಣಾಮಗಳನ್ನು ಬೀರುವ ಬೆದರಿಕೆ ಒಡ್ಡೂವಂತಹ ಪೂರ್ಣ ಪ್ರಮಾಣದ ಸಂಘರ್ಷಕ್ಕೆ ಮತ್ತಷ್ಟು ಇಳಿಯುವುದನ್ನು ತಡೆಯಲು ಶ್ವೇತಭವನವು ನಿರ್ವಹಿಸುತ್ತದೆ ಎಂದು ನಾವು ಭಾವಿಸುತ್ತೇವೆ ಎಂದು ಮಾಧ್ಯಮಗಳಿಗೆ ತಿಳಿಸಿದ್ದರು.



- ವೆನುಜುವೆಲಾದ ಮೇಲೆ ಟ್ರಂಪ್ ಒತ್ತಡ ಬೆನ್ನಲ್ಲೆ, ಮಡೂರೊಗೆ ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಕರೆ
- ಬಾಹ್ಯ ಒತ್ತಡದ ನಡುವೆ ವೆನುಜುವೆಲಾದ ಸಾರ್ವಭೌಮತ್ವ ಕಾಪಾಡುವಲ್ಲಿ ಮಡೂರೊಗೆ ನಾವು ಬೆಂಬಲ ನೀಡುತ್ತೇವೆ ಎಂದ ಪುಟಿನ್ ಆಶ್ವಾಸನೆ
- ರಷ್ಯಾ ಜೊತೆಗೆ ಮಡೂರೊಗೆ ಬೆಂಬಲ ಸೂಚಿಸಿದ ಬೆಲಾರೂಸ್

### ಹೆಚ್ಚಿದ ಅಮೆರಿಕಾ ಮಿಲಿಟರಿ ಶಕ್ತಿ

ಟ್ರಂಪ್ ಮೊದಲ ಬಾರಿ ಅಧ್ಯಕ್ಷರಾಗಿ ಅಧಿಕಾರಕ್ಕೆ ಬಂದಾಗಿನಿಂದಲೂ ವೆನುಜುವೆಲಾದಲ್ಲಿ ಮಡೂರೊ ಅವರನ್ನು ವೆನೆಜುವೆಲಾದ ಕಾನೂನುಬದ್ಧ ಅಧ್ಯಕ್ಷರಾಗಿ ಗುರುತಿಸುತ್ತಿಲ್ಲ. ಕಳೆದ ವರ್ಷ ನಡೆದ ಚುನಾವಣೆಯಲ್ಲಿ ಮಡೂರೋ ತಾನು ಗೆದ್ದಿರುವುದಾಗಿ ಹೇಳಿಕೊಂಡಿದ್ದರು ಸಹ ಟ್ರಂಪ್ ಹಾಗೂ ಇತರೆ ಯುರೋಪಿಯನ್ ದೇಶಗಳು ಇದು ವಂಚನೆಯಿಂದ ಕೂಡಿದ ಗೆಲುವು ಎಂದು ತಳ್ಳಿಹಾಕಿದ್ದವು.




## ಸಾವಿರದಿಂದ ಹಿಡಿದು 10 ಕೋಟಿ ರೂ. ಶ್ವಾನದವರೆಗೆ

ರಚನಾ ರೈ ಬರೆದ ಪುಸ್ತಕದ ವಿಶೇಷತೆ

ದರ್ಶನ್ ತೂಗುದೀಪ ಅವರ 'ಡೆವಿಲ್' ಚಿತ್ರದ ನಾಯಕಿ ರಚನಾ ರೈ ಶ್ವಾನಪ್ರಿಯೆ. ನಾಯಿಗಳ ಬಗ್ಗೆ ಅಪಾರ ತಿಳುವಳಿಕೆ ಹೊಂದಿರುವ ಇವರು 'ಓ ಮೈ ಡಾಗ್' ಅಂಕಣ ಮತ್ತು ಪುಸ್ತಕ ಬರೆದಿದ್ದಾರೆ. ವಿವಿಧ ತಳಿಗಳ ನಾಯಿಗಳ ಆರೈಕೆ, ಗುಣಲಕ್ಷಣಗಳ ಬಗ್ಗೆ ಮಾಹಿತಿ ನೀಡುವ ಈ ಕೃತಿ ಕನ್ನಡದಲ್ಲಿ ವಿಶಿಷ್ಟ. ಶ್ವಾನ ಪ್ರಿಯರಿಗೆ ಮಾರ್ಗದರ್ಶಿ. ಅನಾಥ ನಾಯಿಗಳ ಆರೈಕೆ ಕೇಂದ್ರ ತೆರೆಯುವ ಕನಸು ಅವರದ್ದು. ದರ್ಶನ್ ತೂಗುದೀಪ ಅವರ ಬಹುನಿರೀಕ್ಷಿತ ಚಿತ್ರ ಡೆವಿಲ್ ಡಿ.11ರಂದು ತೆರೆಕಂಡಿದೆ. ಈ ಚಿತ್ರದ ನಾಯಕ ನಟಿ ರಚನಾ ರೈ (ಶ್ರಾವ್ಯಾ ರೈ) ಅವರ ಕುರಿತಾದ ಆಸಕ್ತಿದಾಯಕವಾದ ವಿಷಯವೊಂದು ಇಲ್ಲಿದೆ. ರಚನಾ ರೈ ಸ್ವಭಾವತಃ ಶ್ವಾನಪ್ರಿಯೆ. ಅವರಿಗೆ ನಾಯಿಗಳ ಕುರಿತಾಗಿ ವಿಶೇಷ ಪ್ರೀತಿ ಹಾಗೂ ಅಕ್ಕರೆ. ಅಷ್ಟೇ ಅಲ್ಲ, ಶ್ವಾನಗಳ ವಿವಿಧ ತಳಿಗಳ ಬಗೆಗೂ ಅವರಿಗೆ ಸಾಕಷ್ಟು ತಿಳುವಳಿಕೆ ಇದೆ. ದಕ್ಷಿಣ ಕನ್ನಡದ ಪುತ್ತೂರಿನಲ್ಲಿ ಪದವಿ ಶಿಕ್ಷಣ ಪಡೆಯುತ್ತಿದ್ದ ಸಂದರ್ಭದಲ್ಲಿ ಅವರು ಹೊಸದಿಗಂತ ಪತ್ರಿಕೆಯಲ್ಲಿ ವೈವಿಧ್ಯಮಯ ತಳಿಗಳ ನಾಯಿಗಳ ಬಗೆಗೆ ಅಂಕಣವೊಂದನ್ನು ಬರೆಯುತ್ತಿದ್ದದ್ದು ವಿಶೇಷ. 'ಓ ಮೈ ಡಾಗ್' ಎಂಬ ಹೆಸರಿನಲ್ಲಿ ಪ್ರಕಟವಾಗುತ್ತಿದ್ದ ಅಂಕಣ ಸುಮಾರು ನಲವತ್ತಕ್ಕಿಂತಲೂ ಅಧಿಕ ತಳಿಗಳ ನಾಯಿಗಳ ಬಗೆಗೆ ಸಮಗ್ರ ಮಾಹಿತಿ ಒದಗಿಸಿಕೊಟ್ಟಿತ್ತೆಂಬುದು ಗಮನಾರ್ಹ. ಈ ಅಂಕಣ ಪ್ರತಿಯೊಂದು ತಳಿಗಳ ಶ್ವಾನಗಳ ಗುಣ ಲಕ್ಷಣ, ಅವುಗಳನ್ನು ಸಾಕಬೇಕಾದ ವಿಧಾನ, ನೋಡಿಕೊಳ್ಳಬೇಕಾದ ರೀತಿ, ವಿಶೇಷತೆಗಳು, ಆ ನಾಯಿಗಳಿಗೆ ಬೇಕಾಗುವ ವಾತಾವರಣಗಳ ಬಗೆಗೆ ಸಂಪೂರ್ಣ ಮಾಹಿತಿಯನ್ನು ಒದಗಿಸಿಕೊಡುತ್ತಾ, ಶ್ವಾನಪ್ರಿಯರಿಗೆ ಮಾರ್ಗದರ್ಶನದ ಕೈಪಿಡಿಯಂತಿತ್ತು. ನಾಲ್ಕೈದು ಸಾವಿರ ರೂಪಾಯಿಗಳಷ್ಟು ಬೆಲೆಬಾಳುವ ನಾಯಿಮರಿಗಳಿಂದ, ಹತ್ತು ಕೋಟಿ ಮೌಲ್ಯ ಹೊಂದಿದ ನಾಯಿಗಳವರೆಗೆ 'ಓ ಮೈ ಡಾಗ್' ಅಂಕಣದಲ್ಲಿ ವಿವರಣೆ ಬಂದಿತ್ತೆಂಬುದು ಉಲ್ಲೇಖಾರ್ಹ. ಈ ಅಂಕಣವೇ ಮುಂದೆ 'ಓ ಮೈ ಡಾಗ್' ಎಂಬ ಹೆಸರಿನಲ್ಲಿ ಪುಸ್ತಕವೊಂದು ಪ್ರಕಟವಾಗುವುದಕ್ಕೂ ಕಾರಣವಾಯಿತು. ಹಾಗಾಗಿ ರಚನಾ ರೈ ಓರ್ವ ಬರಗಾರ್ತಿಯಾಗಿಯೂ ಗುರುತಿಸಿಕೊಂಡಿದ್ದಾರೆ. ರಚನಾ ರೈ ಬರೆದಿರುವ 'ಓ ಮೈ ಡಾಗ್' ಕೃತಿಯಂತಹ ಮತ್ತೊಂದು ಕೃತಿ ಕನ್ನಡದಲ್ಲಿ ಇದುವರೆಗೂ ಬಂದಿಲ್ಲ. ಪ್ರತಿಯೊಂದು ತಳಿಯ ನಾಯಿಯ ಬಗೆಗೆ ಇಷ್ಟೊಂದು ವ್ಯಾಪಕ ಮಾಹಿತಿ ಕೊಟ್ಟ ಈ ಕೃತಿಯನ್ನು ಶ್ವಾನ ಪ್ರಿಯರು ಮಿಸ್ ಮಾಡದೇ ಓದಬೇಕು. ಮುದ್ರಣವಾದ ಮೂರೇ ದಿನಗಳಲ್ಲಿ ಮುದ್ರಿಸಿದ ಅಷ್ಟೂ ಪ್ರತಿಗಳು ಮಾರಾಟವಾಗಿ ಮುಗಿದದ್ದು ಆ ಕೃತಿಯ ಜನಪ್ರಿಯತೆಯನ್ನು ಸೂಚಿಸುತ್ತದೆ.

## ಪಠಾಣ್ 2ಗೆ ಕೈ ಹಾಕಿದ ವೈಆರ್‌ಎಫ್



ಶಾರುಖ್ ಖಾನ್ ಜೊತೆಗೆ 'ಪಠಾಣ್' ಸರಣಿ ಹೀಗೆಯೇ ಸ್ಪೈ ಸಿನಿಮಾಗಳದ್ದೇ ಪ್ರತ್ಯೇಕ ಯೂನಿವರ್ಸ್ ಪ್ರಾರಂಭಿಸಿದೆ ಯಶ್ ರಾಜ್ ಫಿಲಮ್ಸ್ (ವೈಆರ್‌ಎಫ್). ಆದರೆ ವೈಆರ್‌ಎಫ್ ನಿರ್ಮಿಸಿದ ಈ ಹಿಂದಿನ ಸ್ಪೈ ಆಕ್ಷನ್ ಸಿನಿಮಾ 'ವಾರ್ 2' ಫ್ಲಾಪ್ ಆಗಿದೆ. ಆದರೂ ಸಹ ಸ್ಪೈ ಯೂನಿವರ್ಸ್ ಮೇಲೆ ನಂಬಿಕೆ ಕಳೆದುಕೊಂಡಿಲ್ಲ ನಿರ್ಮಾಣ ಸಂಸ್ಥೆ. ಇದೀಗ 'ಪಠಾಣ್ 2' ಸಿನಿಮಾ ನಿರ್ಮಾಣಕ್ಕೆ ಮುಂದಾಗಿದೆ. ಯಶ್ ರಾಜ್ ಫಿಲಮ್ಸ್, ಬಾಲಿವುಡ್‌ನ ಬಹು ದೊಡ್ಡ ನಿರ್ಮಾಣ ಸಂಸ್ಥೆ. ದೊಡ್ಡ ಸ್ಟಾರ್ ನಟರುಗಳೊಟ್ಟಿಗೆ ಭಾರಿ ಬಜೆಟ್‌ನ ಸಿನಿಮಾಗಳನ್ನು ಯಶ್ ರಾಜ್ ಫಿಲಮ್ಸ್ ನಿರ್ಮಿಸುತ್ತಾ ಬಂದಿದೆ. ಸಲ್ಮಾನ್ ಖಾನ್ ಜೊತೆಗೆ 'ಟೈಗರ್' ಸರಣಿ, ಹೃತಿಕ್ ರೋಷನ್ ಜೊತೆಗೆ 'ವಾರ್' ಸರಣಿ, ಶಾರುಖ್ ಖಾನ್ ಜೊತೆಗೆ 'ಪಠಾಣ್' ಸರಣಿ ಹೀಗೆ ಸ್ಪೈ ಸಿನಿಮಾಗಳದ್ದೇ ಪ್ರತ್ಯೇಕ ಯೂನಿವರ್ಸ್ ಪ್ರಾರಂಭಿಸಿದೆ ಯಶ್ ರಾಜ್ ಫಿಲಮ್ಸ್ (ವೈಆರ್ ಎಫ್). ಆದರೆ ವೈಆರ್‌ಎಫ್ ನಿರ್ಮಿಸಿದ ಈ ಹಿಂದಿನ ಸ್ಪೈ ಆಕ್ಷನ್ ಸಿನಿಮಾ 'ವಾರ್ 2' ಫ್ಲಾಪ್ ಆಗಿದೆ. ಆದರೂ ಸಹ ಸ್ಪೈ ಯೂನಿವರ್ಸ್ ಮೇಲೆ ನಂಬಿಕೆ ಕಳೆದುಕೊಂಡಿಲ್ಲ ನಿರ್ಮಾಣ ಸಂಸ್ಥೆ. ಇದೀಗ 'ಪಠಾಣ್ 2' ಸಿನಿಮಾ ನಿರ್ಮಾಣಕ್ಕೆ ಮುಂದಾಗಿದೆ. ಯಶ್ ರಾಜ್ ಫಿಲಮ್ಸ್ ಇದೀಗ 'ಪಠಾಣ್ 2' ಸಿನಿಮಾ ನಿರ್ಮಿಸಲು ಮುಂದಾಗಿದೆ. 'ಪಠಾಣ್' ಸಿನಿಮಾ 2023ರ ಜನವರಿಯಲ್ಲಿ ಬಿಡುಗಡೆ ಆಗಿತ್ತು. ಶಾರುಖ್ ಖಾನ್ ಈ ಸಿನಿಮಾನಲ್ಲಿ ಗೂಢಚಾರಿಯ ಪಾತ್ರದಲ್ಲಿ ನಟಿಸಿದ್ದರು. ದೀಪಿಕಾ ಪಡುಕೋಣೆ ಸಿನಿಮಾದ ನಾಯಕಿ. ಜಾನ್ ಅಬ್ರಹಾಂ ಸಿನಿಮಾದ ವಿಲನ್. ಇನ್ನು ಸಲ್ಮಾನ್ ಖಾನ್ ಅತಿಥಿ ಪಾತ್ರದಲ್ಲಿ ನಟಿಸಿದ್ದರು. ಸಲ್ಮಾನ್ ಖಾನ್‌ರ ಅತಿಥಿ ಪಾತ್ರ ಭಾರಿ ದೊಡ್ಡ ಹಿಟ್ ಆಗಿತ್ತು.



## ಒಂದಲ್ಲ ಎರಡಲ್ಲ 20 ಹಿಟ್

ವೃತ್ತಿ ಜೀವನದ ಯಶಸ್ವಿ ಸಿನಿಮಾ

ನಟ ದರ್ಶನ್ 'ಬಾಕ್ಸ್ ಆಫೀಸ್ ಸುಲ್ತಾನ್' ಎಂದೇ ಖ್ಯಾತರು. ಯಾವುದೇ ಪ್ರಭಾವವಿಲ್ಲದೆ ಚಿತ್ರರಂಗದಲ್ಲಿ ತಮ್ಮನ್ನು ತಾವು ಸಾಬೀತುಪಡಿಸಿಕೊಂಡ ಅವರು, 'ಮೆಜೆಸ್ಟಿಕ್' ಮೂಲಕ 'ದಾಸ'ನಾಗಿ ಹೊರಹೊಮ್ಮಿದರು. 'ಕರಿಯ', 'ಕಲಾಸಿಪಾಳ್ಯ', 'ರಾಬರ್ಟ್', 'ಕಾಟೇರ' ಸೇರಿ 20ಕ್ಕೂ ಹೆಚ್ಚು ಹಿಟ್ ಚಿತ್ರಗಳನ್ನು ನೀಡಿದ್ದಾರೆ. ಅಪಾರ ಅಭಿಮಾನಿ ಬಳಗ ಹೊಂದಿರುವ ದರ್ಶನ್, ನಿರ್ಮಾಪಕರಿಗೆ ಲಾಭ ತಂದುಕೊಡುವ ಗ್ಯಾರಂಟಿ ಸ್ಟಾರ್. ನಟ ದರ್ಶನ್ ಅವರನ್ನು ಬಾಕ್ಸ್ ಆಫೀಸ್ ಸುಲ್ತಾನ ಎಂದು ಕರೆಯಲಾಗುತ್ತದೆ. ವಿಲನ್ ಮಗನಾದರು ಯಾವುದೇ ಪ್ರಭಾವ ಇಲ್ಲದೆ, ತಮ್ಮನ್ನು ತಾವು ಸಾಬೀತು ಮಾಡಿಕೊಂಡರು. ಅವರ ಅಭಿಮಾನಿ ಬಳಗ ತುಂಬಾನೇ ದೊಡ್ಡದಿದೆ. ಅವರು ಕೊಟ್ಟ ಹಿಟ್ಟ ಚಿತ್ರಗಳು ಒಂದರೆಡಲ್ಲ. ಸುಮಾರು 20 ಹಿಟ್ ಚಿತ್ರಗಳನ್ನು ಅವರು ನೀಡಿದ್ದಾರೆ. ಇದರ ಜೊತೆಗೆ ನಿರ್ಮಾಪಕರಿಗೆ ಸಾಧಾರಣ ಲಾಭ ತಂದುಕೊಟ್ಟ ಸಿನಿಮಾಗಳೂ ಇವೆ. ದರ್ಶನ್ ಅವರು ಚಿತ್ರರಂಗಕ್ಕೆ ಕಾಲಿಟ್ಟಿದ್ದು 1997ರಲ್ಲಿ. 'ಮಹಾಭಾರತ'ದಲ್ಲಿ ಅವರು ಮೊದಲ ಬಾರಿಗೆ ನಟಿಸಿದರು. ಆ ಬಳಿಕ ಶಿವರಾಜ್‌ಕುಮಾರ್ ಹಾಗೂ ಅಂಬರೀಷ್ ನಟನೆಯ 'ದೇವರ ಮಗ' ಸಿನಿಮಾ ಮಾಡಿದರು. 2002ರಲ್ಲಿ ಹೀರೋ ಆಗುವ ಅವಕಾಶ ಅವರಿಗೆ ಸಿಕ್ಕಿತು. ಪಿಎನ್ ಸತ್ಯ ನಿರ್ದೇಶನದ 'ಮೆಜೆಸ್ಟಿಕ್' ಸಿನಿಮಾದಲ್ಲಿ ಹೀರೋ ಆದರು. ಈ ಸಿನಿಮಾ ಸೂಪರ್ ಡೂಪರ್ ಹಿಟ್ ಆಯಿತು. ಈ ಚಿತ್ರದ ಮೂಲಕ ದರ್ಶನ್ ಅಪಾರ ಅಭಿಮಾನಿ ಬಳಗವನ್ನು ಸಂಪಾದಿಸಿದರು. ಈ ಸಿನಿಮಾ ಮೂಲಕವೇ ದರ್ಶನ್‌ಗೆ ದಾಸ ಎಂಬ ಹೆಸರು ಬಂತು. 'ಕರಿಯ' ಸಿನಿಮಾದಲ್ಲಿ ನಟಿಸಿದರು.



## ಅಖಂಡ 2 ಲಾಜಿಕ್‌ಲೆಸ್ ಸಿನಿಮಾ

ನಂದಮೂರಿ ಬಾಲಕೃಷ್ಣ ಅವರ ಸಿನಿಮಾ ನೋಡಲು ಹೋಗುವ ಮುನ್ನ ಮೆದುಳು, ಚಿಂತನಾಶಕ್ತಿ, ಫಿಸಿಕ್ಸು, ಕೆಮಿಸ್ಟ್ರಿಗಳನ್ನು ಗುಂಡಿಯಲ್ಲಿ ಹೂತು ಹೋಗಬೇಕು. 'ಅಖಂಡ 2' ಸಿನಿಮಾ ಸಹ ಇದಕ್ಕೆ ಹೊರತಲ್ಲ. ಬಾಲಯ್ಯ ತೆರೆ ಮೇಲೆ ಬಂದರೆಂದರೆ ಸಾಕು ಲಾಜಿಕ್ಕು ಮತ್ತು ಫಿಸಿಕ್ಸು ಎರಡೂ ಹೆದರಿ ಥೀಯೇಟರ್ ಬಿಟ್ಟು ಓಡಿ ಹೋಗುತ್ತವೆ. ಬಾಲಯ್ಯನಿಗಿರುವ ಸ್ಟಾರ್ ಗಿರಿಯ ಮ್ಯಾಜಿಕ್ಕೊಂದನ್ನೇ ನೆಚ್ಚಿಕೊಂಡು ಮಾಡಿರುವ ಸಿನಿಮಾ 'ಅಖಂಡ 2'. 'ಅಖಂಡ 2' ಸಿನಿಮಾ 2021ರಲ್ಲಿ ಬಿಡುಗಡೆ ಆಗಿದ್ದ 'ಅಖಂಡ' ಸಿನಿಮಾದ ಸೀಕ್ವೆಲ್. ಆದರೆ ಆ ಸಿನಿಮಾಕ್ಕೂ, ಈ ಸಿನಿಮಾಕ್ಕೂ ಕತೆಯಲ್ಲಿ ಹೆಚ್ಚಿನ ಲಿಂಕುಗಳಿಲ್ಲ, ಆ ಸಿನಿಮಾದಲ್ಲಿದ್ದ ಮುಖ್ಯ ಪಾತ್ರಗಳು ಇಲ್ಲಿಯೂ ಇವೆ. ವಿಲನ್ನುಗಳು ಬದಲಾಗಿದ್ದಾರೆ. ಒಬ್ಬ ಬಾಲಯ್ಯನ ಆರ್ಭಟವನ್ನೇ ತಡೆದುಕೊಳ್ಳಲು ಕಷ್ಟ, ಅಂತಹದರಲ್ಲಿ 'ಅಖಂಡ 2'ನಲ್ಲಿ ಇಬ್ಬಿಬ್ಬರು ಬಾಲಯ್ಯ ಇದ್ದಾರೆ. ಒಬ್ಬ ಮುರಳಿ ಕೃಷ್ಣ ಹೆಸರಿನ ಶಾಸಕ, ಮತ್ತೊಬ್ಬರು ಅಘೋರಿ ಅಖಂಡ. ಒಂದು ಸಮಯದಲ್ಲಂತೂ ತೆರೆ ಮೇಲೆ ಆರು ಬಾಲಯ್ಯ ಒಟ್ಟಿಗೆ ಕಾಣಿಸಿಕೊಳ್ಳುತ್ತಾರೆ. ಕತೆಯ ಎಳೆ ಇಷ್ಟೆ, ಭಾರತದ ಒಬ್ಬ ರಾಜಕೀಯ ನಾಯಕನ ನೆರವಿನಿಂದ ಮಹಾ ಕುಂಭಮೇಳ ಸಮಯದಲ್ಲಿ ಚೀನಿಯರು ವೈರಸ್ ಒಂದನ್ನು ನದಿಗೆ ಸೇರಿಸುತ್ತಾರೆ. ಅದರಿಂದ ಜನ ಹಾಸಿಗೆ ಹಿಡಿಯುತ್ತಾರೆ. ಈ ನಡುವೆ ಶಾಸಕ ಬಾಲಯ್ಯನ ಪುತ್ರಿ ಜನನಿ, ರಾಮಾಯಣದಿಂದ ಸ್ಫೂರ್ತಿ ಪಡೆದು ವ್ಯಾಕ್ಸಿನ್ ತಯಾರಿಸುತ್ತಾಳೆ. ಆ ವ್ಯಾಕ್ಸಿನ್ ಅನ್ನು ವಶಪಡಿಸಿಕೊಳ್ಳಲು ದುರುಳರು ಯುವತಿಯ ಹಿಂದೆ ಬೀಳುತ್ತಾರೆ. ಇನ್ನೇನು ದುಷ್ಟರು ಆಕೆಯನ್ನು ಮುಗಿಸೇ ಬಿಡುತ್ತಾರೆ ಎನ್ನುವಾಗ ಆಕೆಯ ಅಂಕಲ್ ಅಖಂಡ ನೆರವಿಗೆ ಬರುತ್ತಾರೆ. ಈ ಕತೆ ಹೇಳಲು ಇಬ್ಬರು ಬಾಲಯ್ಯ, ಇಬ್ಬರು ನಾಯಕಿಯರು, ಆರೇಳು ವಿಲನ್‌ಗಳು, ಮೂರು ಹಾಡುಗಳು , ಸುಮಾರು ಆರೇಳು ಫೈಟು, ವಿಪರೀತ ಗ್ರಾಫಿಕ್ಸುಗಳನ್ನು ನಿರ್ದೇಶಕ ಬೊಯಪಾಟಿ ಶ್ರೀನು ಬಳಸಿಕೊಂಡಿದ್ದಾರೆ.



## ಸುದೀಪ್ ಕೊಟ್ಟರು ತೂಕದ ಉತ್ತರ

ಕಿಚ್ಚ ಸುದೀಪ್‌ಗೆ ನಟನೆ ಅಥವಾ ನಿರ್ದೇಶನಕ್ಕಿಂತಲೂ 'ಸಿನಿಮಾ' ಎಂಬುದು ಹೆಚ್ಚು ಇಷ್ಟ. ಅವರು ತಾನು ಚಿತ್ರರಂಗದ ಒಂದು ಬಣ್ಣವಾಗಿರಲು ಬಯಸುತ್ತಾರೆ. ನಿರ್ದೇಶಕನಾಗಲು ಬಂದವರು ಯಶಸ್ವಿ ನಟ. ಚಿತ್ರರಂಗದ ಪ್ರತಿಯೊಂದು ಅಂಶವನ್ನೂ ಆಳವಾಗಿ ಪ್ರೀತಿಸುತ್ತಾರೆ. ಇದು ಅವರ ದೀರ್ಘಕಾಲದ ಯಶಸ್ಸಿನ ಗುಟ್ಟು. ಅವರ ಮುಂಬರುವ 'ಮಾರ್ಕ್' ಚಿತ್ರದ ಬಗ್ಗೆಯೂ ನಿರೀಕ್ಷೆ ಹೆಚ್ಚಿದೆ. ಕಿಚ್ಚ ಸುದೀಪ್ ಅವರು ನಟನೆಯ ಮೂಲಕ ಸಾಕಷ್ಟು ಗಮನ ಸೆಳೆದಿದ್ದಾರೆ ಎಂಬುದು ಗೊತ್ತೇ ಇದೆ. ಅವರು ತಮ್ಮ ವೃತ್ತಿ ಜೀವನದಲ್ಲಿ ಹಲವು ರೀತಿಯ ಪಾತ್ರಗಳನ್ನು ಮಾಡಿದ್ದಾರೆ. 'ಈಗ' ಚಿತ್ರದಲ್ಲಿ ಅವರ ನಟನೆಯ ಬಗ್ಗೆ ಮತ್ತೆ ಹೇಳುವ ಅಗತ್ಯವೇ ಇಲ್ಲ. ಅವರು ನಿರ್ದೇಶನದ ಮೂಲಕವೂ ಫೇಮಸ್ ಆದವರು. ಅವರು ಹಲವು ಸೂಪರ್ ಹಿಟ್ ಚಿತ್ರಗಳನ್ನು ನಟನಾಗಿ ನೀಡಿದ್ದಾರೆ. ಅವರು ಈಗ ನಿರ್ಮಾಪಕ ಕೂಡ ಹೌದು. ಹಾಗಾದರೆ ಸಿನಿಮಾದಲ್ಲಿ ಅವರಿಗೆ ಯಾವುದು ತುಂಬಾ ಹೆಚ್ಚು ಇಷ್ಟಪಡುತ್ತಾರೆ ಇದಕ್ಕೆ ಅವರು ಉತ್ತರ ನೀಡಿದ್ದಾರೆ. ಅವರು ಈ ಮೊದಲು ತಮಿಳು ಸಂದರ್ಶನ ಒಂದರಲ್ಲಿ ಈ ಬಗ್ಗೆ ಮಾತನಾಡಿದ್ದರು. ಸುದೀಪ್ ಅವರು ಚಿತ್ರರಂಗಕ್ಕೆ ಸಾಕಷ್ಟು ಇಷ್ಟಪಟ್ಟು ಬಂದವರು. ನಿರ್ದೇಶನಕನಾಗಲು ಬಂದವರು ನಟನಾದರು. ಅವರಿಗೆ ಚಿತ್ರರಂಗದ ಪ್ರತಿ ವಿಷಯವೂ ಇಷ್ಟ ಎಂದರೂ ತಪ್ಪಾಗಲಿಕ್ಕಿಲ್ಲ. ಈ ಕಾರಣದಿಂದಲೇ ಅವರು ಚಿತ್ರರಂಗದಲ್ಲಿ ಇಷ್ಟು ವರ್ಷಗಳ ಕಾಲ ಇದ್ದ ಬಳಿಕ ಅವರು ಯಶಸ್ಸು ಕಾಣುತ್ತಾ ಇದ್ದಾರೆ. ಅವರು ನಟನೆ, ನಿರ್ದೇಶನ ಎನ್ನದೇ ಇಡೀ ಚಿತ್ರರಂಗವನ್ನು, ಸಿನಿಮಾನ ಇಷ್ಟಪಡುವವರಾಗಿದ್ದಾರೆ.



## ಭಾರತದ ಕ್ರಿಕೆಟಿಗರಿಗೆ ದುಶ್ಚಟಗಳು ಹೆಚ್ಚು

ಭಾರತದ ಕ್ರಿಕೆಟ್ ತಂಡದ ಆಲ್‌ರೌಂಡರ್ ರವೀಂದ್ರ ಜಡೇಜಾ ಅವರ ಪತ್ನಿ ಹಾಗೂ ಗುಜರಾತ್ ಸರ್ಕಾರದ ಸಚಿವೆ ರಿವಾಬಾ ಜಡೇಜಾ ಆಘಾತಕಾರಿ ಹೇಳಿಕೆಯೊಂದನ್ನು ನೀಡುವ ಮೂಲಕ ಸುದ್ದಿಯಲ್ಲಿದ್ದಾರೆ. ವಿದೇಶಿ ಪ್ರವಾಸಗಳ ಸಮಯದಲ್ಲಿ ಕೆಲವು ಭಾರತೀಯ ಕ್ರಿಕೆಟಿಗರು ವಿವಿಧ ದುಶ್ಚಟಗಳಲ್ಲಿ ತೊಡಗುತ್ತಾರೆ ಎಂದು ಆರೋಪಿಸಿ ವಿವಾದಕ್ಕೆ ನಾಂದಿ ಹಾಡಿದ್ದಾರೆ. ಆದರೆ, ನನ್ನ ಪತಿ ಎಂದಿಗೂ ಅಂತಹ ಯಾವುದೇ ದುಶ್ಚಟಗಳಲ್ಲಿ ಇದುವರೆಗೂ ತೊಡಗಿಲ್ಲ ಎಂದು ಅವರು ಸ್ಪಷ್ಟನೆ ನೀಡಿದ್ದಾರೆ.

ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ರಿವಾಬಾ ಜಡೇಜಾ, ಕ್ರಿಕೆಟಿಗರ ಬಗ್ಗೆ ಹೆಚ್ಚು ಜನರಿಗೆ ಗೊತ್ತಿಲ್ಲದ ಅಭ್ಯಾಸಗಳ ಬಗ್ಗೆ ಪ್ರಸ್ತಾಪಿಸಿದ್ದಾರೆ. ಆದರೆ, ಅವರ ಸುತ್ತಮುತ್ತಲಿನ ಪರಿಸರ ಆ ರೀತಿಯಾಗಿದ್ದರೂ ತನ್ನ ಪತಿಗೆ ಅಂತಹ ಯಾವುದೇ ಅಭ್ಯಾಸಗಳಿಲ್ಲ ಎಂದು ಅವರು ರವೀಂದ್ರಾ ಜಡೇಜಾ ಅವರಿಗೆ ಈ ವಿಷಯದಲ್ಲಿ ಕ್ಲೀನ್ ಚಿಟ್ ನೀಡಿದ್ದಾರೆ. ''ನನ್ನ ಪತಿ, ಕ್ರಿಕೆಟಿಗ ರವೀಂದ್ರ ಜಡೇಜಾ ಕ್ರಿಕೆಟ್ ಆಡಲು ಲಂಡನ್, ದುಬೈ ಮತ್ತು ಆಸ್ಟ್ರೇಲಿಯಾದಂತಹ ಹಲವು ದೇಶಗಳಿಗೆ ಪ್ರಯಾಣಿಸಬೇಕಾಗುತ್ತದೆ.

ಆದರೂ, ಇಂದಿಗೂ ಅವರು ಯಾವುದೇ ರೀತಿಯ ದುಶ್ಚಟಗಳನ್ನು ಮಾಡಿಲ್ಲ. ಏಕೆಂದರೆ ಅವರು ತಮ್ಮ ಜವಾಬ್ದಾರಿಗಳನ್ನು ಅರ್ಥಮಾಡಿಕೊಂಡಿದ್ದಾರೆ.


ಕ್ರಿಕೆಟ್ ತಂಡದ ಉಳಿದವರೆಲ್ಲರೂ ದುಶ್ಚಟಗಳನ್ನು ರೂಢಿಸಿಕೊಂಡಿದ್ದಾರೆ. ಆದರೆ ಅವರ ಕುಟುಂಬಗಳಿಂದ ಅದಕ್ಕೆ ಯಾವುದೇ ನಿರ್ಬಂಧವಿಲ್ಲ'' ಎಂದು ರಿವಾಬಾ ಹೇಳಿದ್ದಾರೆ. ಈ ಹೇಳಿಕೆ ತೀವ್ರ ಚರ್ಚೆಗೆ ಕಾರಣವಾಗಿದೆ. ''ಒಮ್ಮೆ ನಾವು ಜೀವನದಲ್ಲಿ ಪ್ರಗತಿ ಸಾಧಿಸಿದ ನಂತರ ನಡೆದುಬಂದ ಹಾದಿಯನ್ನು ಮರೆಯಬಾರದು. ನಮ್ಮ ಸಾಂಸ್ಕೃತಿಕ ಬೇರುಗಳನ್ನು ನೆನಪಿಟ್ಟುಕೊಳ್ಳುವುದು ಬಹಳ ಮುಖ್ಯ'' ಎಂದು ರಿವಾಬಾ ಹೇಳಿದ್ದಾರೆ.

2016ರಲ್ಲಿ ಕ್ರಿಕೆಟಿಗ ಕೆ.ಎಲ್ ರಾಹುಲ್ ವೆಸ್ಟ್ ಇಂಡೀಸ್ ಪ್ರವಾಸದ ಸಮಯದಲ್ಲಿ ಕೈಯಲ್ಲಿ ಬಿಯರ್ ಬಾಟಲಿಯನ್ನು ಹಿಡಿದುಕೊಂಡು ತಮ್ಮ ಸಾಮಾಜಿಕ ಮಾಧ್ಯಮದ ಹ್ಯಾಂಡಲ್‌ಗಳಲ್ಲಿ ಫೋಟೋವನ್ನು ಪೋಸ್ಟ್ ಮಾಡಿದ್ದರು. ಈ ಫೋಟೋ ತಕ್ಷಣವೇ ವೈರಲ್ ಆಯಿತು.

ಇದರಿಂದಾಗಿ ಬಿಸಿಸಿಐ ಆಟಗಾರರು ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡುವಾಗ ಹೆಚ್ಚು ಜಾಗರೂಕರಾಗಿ ಇರಬೇಕೆಂದು ಕ್ರಿಕೆಟಿಗರಿಗೆ ನಿರ್ದೇಶಿಸುವಂತಾಯಿತು. 2024ರ ಆರಂಭದಲ್ಲಿ ಕೇಂದ್ರ ಆರೋಗ್ಯ ಸಚಿವಾಲಯವು ತಂಬಾಕು ಮತ್ತು ಆಲ್ಕೋಹಾಲ್ ಉತ್ಪನ್ನಗಳ ಜಾಹೀರಾತಿನಲ್ಲಿ ಕ್ರೀಡಾಪಟುಗಳು ಭಾಗವಹಿಸುವುದನ್ನು ತಡೆಯುವ ಕ್ರಮಗಳನ್ನು ಜಾರಿಗೆ ತರಲು ಭಾರತೀಯ ಕ್ರೀಡಾ ಪ್ರಾಧಿಕಾರ ಮತ್ತು ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿಗೆ ಸೂಚಿಸಿತ್ತು.

## 7ಕ್ಕೆ ಏಳರಲ್ಲೂ ಸೋಲು

ದಕ್ಷಿಣ ಆಫ್ರಿಕಾ ವಿರುದ್ಧದ 2ನೇ ಟಿ20ಯಲ್ಲಿ ಟೀಂ ಇಂಡಿಯಾ 51 ರನ್‌ಗಳ ಭಾರಿ ಸೋಲು ಕಂಡಿದೆ. 213 ರನ್‌ಗಳ ದೊಡ್ಡ ಗುರಿ ಬೆನ್ನಟ್ಟುವಲ್ಲಿ ಭಾರತ ವಿಫಲವಾಯಿತು. 200+ ಗುರಿಗಳ ಮುಂದೆ ತಂಡ ನಡುಗುತ್ತದೆ ಎಂದು ಅಂಕಿಅಂಶಗಳು ತೋರಿಸುತ್ತವೆ. ಬುಮ್ರಾ ಮತ್ತು ಅರ್ಷದೀಪ್ ದುಬಾರಿಯಾಗಿದ್ದು ಸೋಲಿಗೆ ಕಾರಣವಾಯಿತು.




ಈ ಗೆಲುವಿನೊಂದಿಗೆ ಆಫ್ರಿಕಾ ಭಾರತದ ವಿರುದ್ಧ ಅತಿ ಹೆಚ್ಚು ಟಿ20 ಗೆದ್ದ ದಾಖಲೆ ನಿರ್ಮಿಸಿದೆ. ದಕ್ಷಿಣ ಆಫ್ರಿಕಾ ವಿರುದ್ಧದ ಐದು ಪಂದ್ಯಗಳ ಟಿ20 ಸರಣಿಯ ಎರಡನೇ ಪಂದ್ಯದಲ್ಲಿ ಟೀಂ ಇಂಡಿಯಾ 51 ರನ್‌ಗಳ ಸೋಲು ಕಂಡಿದೆ.

ಚಂಡೀಗಢದ ಮಹಾರಾಜ ಯಾದವೀಂದ್ರ ಅಂತರರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣದಲ್ಲಿ ನಡೆದ ಈ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಆಫ್ರಿಕಾ ತಂಡ 20 ಓವರ್‌ಗಳಲ್ಲಿ ಕೇವಲ 4 ವಿಕೆಟ್‌ಗಳನ್ನು ಕಳೆದುಕೊಂಡು 213 ರನ್ ಕಲೆಹಾಕಿತು. ಇದಕ್ಕೆ ಉತ್ತರವಾಗಿ ಗುರಿ ಬೆನ್ನಟ್ಟಿದ ಭಾರತ ತಂಡವು ಕೇವಲ 162 ರನ್‌ಗಳಿಗೆ ಆಲೌಟ್ ಆಗುವ ಮೂಲಕ ಸೋಲೊಪ್ಪಿಕೊಂಡಿತು. ಈ ಪಂದ್ಯದಲ್ಲಿ ಭಾರತ ತಂಡದ ಬೌಲರ್‌ಗಳಾಗಲಿ ಅಥವಾ ಬ್ಯಾಟ್ಸ್‌ಮನ್‌ಗಳಾಗಲಿ ಗಮನಾರ್ಹ ಪ್ರದರ್ಶನ ನೀಡಲು ಸಾಧ್ಯವಾಗಲಿಲ್ಲ. ಹೀಗಾಗಿ ತಂಡಕ್ಕೆ ಸೋಲಿನ ಆಘಾತ ಎದುರಾಯಿತು.

ಗುರಿ ದೊಡ್ಡದಿದ್ದರೆ ಟೀಂ ಇಂಡಿಯಾಗೆ ನಡುಕ ಟಿ20 ಕ್ರಿಕೆಟ್‌ನಲ್ಲಿ 200 ಕ್ಕೂ ಅಧಿಕ ರನ್‌ಗಳನ್ನು ಬೆನ್ನಟ್ಟುವುದು ಸುಲಭದ ಕೆಲಸವಲ್ಲ. ಆದಾಗ್ಯೂ ಇತ್ತೀಚಿನ ದಿನಗಳಲ್ಲಿ 200 ರನ್‌ಗಳ ಗುರಿ ಕೂಡ ಚಿಕ್ಕದೆಂದು ಕಾಣುತ್ತದೆ. ಅದರಲ್ಲೂ ಬಲಿಷ್ಠ ಬ್ಯಾಟಿಂಗ್ ವಿಭಾಗವನ್ನು ಹೊಂದಿರುವ ತಂಡಕ್ಕೆ ಈ ಗುರಿ ಬೆನ್ನಟ್ಟುವುದು ದೊಡ್ಡ ವಿಷಯವಲ್ಲ. ಆದರೆ 8ನೇ ಕ್ರಮಾಂಕದವರೆಗೂ ಹೊಡಿಬಡಿ ಆಟಗಾರರನ್ನೇ ಹೊಂದಿರುವ ಟೀಂ ಇಂಡಿಯಾಕ್ಕೆ 200 ರನ್‌ಗಳ ಗುರಿ ಎಂದರೆ ನಡುಕ ಶುರುವಾಗುತ್ತದೆ. ಇದು ನಾವು ಹೇಳುತ್ತಿರುವುದಲ್ಲ. ಬದಲಿಗೆ ಅಂಕಿ ಅಂಶಗಳೇ ಟೀಂ ಇಂಡಿಯಾದ ಬಂಡವಾಳವನ್ನು ಬಯಲು ಮಾಡಿವೆ. ವಾಸ್ತವವಾಗಿ, ಭಾರತ ತಂಡವು ಟಿ20 ಅಂತರರಾಷ್ಟ್ರೀಯ ಪಂದ್ಯಗಳಲ್ಲಿ 210+ ರನ್‌ಗಳ ಗುರಿಯನ್ನು ಎಂದಿಗೂ ಯಶಸ್ವಿಯಾಗಿ ಬೆನ್ನಟ್ಟಿಲ್ಲ.

ಟೀಂ ಇಂಡಿಯಾ ಇಲ್ಲಿಯವರೆಗೆ ಏಳು ಬಾರಿ 210+ ರನ್‌ಗಳ ಗುರಿಯನ್ನು ಬೆನ್ನಟ್ಟಿದೆ, ಆದರೆ ಈ ಎಲ್ಲಾ ಸಂದರ್ಭಗಳಲ್ಲಿ ಸೋಲನ್ನು ಎದುರಿಸಿದೆ. ಈ ಅಂಕಿಅಂಶವು ಭಾರತೀಯ ಬ್ಯಾಟಿಂಗ್‌ನ ದೌರ್ಬಲ್ಯವನ್ನು ಎತ್ತಿ ತೋರಿಸುತ್ತದೆ.

ಬುಮ್ರಾ, ಅರ್ಷದೀಪ್ ಗೆಲುವಿನ ಓಟಕ್ಕೆ ಬ್ರೇಕ್ ಈ ಪಂದ್ಯದ ಮತ್ತೊಂದು ಗಮನಾರ್ಹ ವೈಶಿಷ್ಟ್ಯವೆಂದರೆ ಜಸ್ಪ್ರೀತ್ ಬುಮ್ರಾ ಮತ್ತು ಅರ್ಷದೀಪ್ ಸಿಂಗ್‌ರಂತಹ ಟಿ20 ಸ್ಪೆಷಲಿಸ್ಟ್‌ಗಳು ತಂಡದಲಿದ್ದರೂ ಟೀಂ ಇಂಡಿಯಾ ಸೋತಿತು.

## ಸಿಇಒಗೆ ಕ್ರಿಕೆಟ್ ಕೋಡ್ ಕ್ರೇಜ್

ಬ್ಯುಸಿನೆಸ್‌ಮ್ಯಾನ್‌ಗಳು ಬಿಡುವಿನ ವೇಳೆಯಲ್ಲಿ ಏನ್ ಮಾಡ್ತಾರೆ ಸಾಮಾನ್ಯವಾಗಿ ವೀಕೆಂಡ್ ಪ್ರವಾಸ ಹೋಗ್ತಾರೆ, ರಿಸಾರ್ಟ್‌ಗೆ ಹೋಗ್ತಾರೆ, ಅಥವಾ ಇಂಥವೇ ಯಾವುದಾದರೂ ಮೋಜು ಮಸ್ತಿಯಲ್ಲಿ ತೊಡಗುತ್ತಾರೆ. ಮೈಕ್ರೋಸಾಫ್ಟ್ ಸಿಇಒ ಸತ್ಯ ನಾದೆಲ್ಲ ಅವರು ತಮ್ಮ ಬಡುವಿನ ವೇಳೆಯಲ್ಲಿ ಸ್ವಂತವಾಗಿ ಕ್ರಿಕೆಟ್ ಅನಾಲಿಸಿಸ್ ಅಪ್ಲಿಕೇಶನ್‌ಗೆ ಕೋಡಿಂಗ್ ಬರೆಯುತ್ತಿದ್ದಾರಂತೆ. ಅದೂ ಡೀಪ್ ರಿಸರ್ಚ್ ಎಐ ಬಳಸಿ ಈ ಆಪ್ ಅಭಿವೃದ್ಧಿಪಡಿಸುತ್ತಿರುವುದಾಗಿ ಅವರು ಹೇಳಿಕೊಂಡಿದ್ದಾರೆ.

ಕ್ರಿಕೆಟ್ ಅನಾಲಿಸಿಸ್ ಆ್ಯಪ್‌ನಿಂದ ಹೊಸ ಕ್ರಾಂತಿ



ಸತ್ಯ ನಾದೆಲ್ಲಾ ಅವರು ಭಾರತ ಮೂಲದವರಾದ್ದರಿಂದಲೋ ಏನೋ ಅವರಿಗೆ ಕ್ರಿಕೆಟ್ ಎಂದರೆ ಸಿಕ್ಕಾಪಟ್ಟೆ ಪ್ರೀತಿ. ಭಾರತದ ಅನೇಕ ಕ್ರಿಕೆಟಿಗರು ಅವರಿಗೆ ಫೇವರಿಟ್. ಕ್ರಿಕೆಟ್ ಅಭಿಮಾನಿ ಮಾತ್ರವಲ್ಲ, ಸಕ್ರಿಯವಾಗಿ ಈ ಕ್ಷೇತ್ರದಲ್ಲಿ ತೊಡಗಿಸಿಕೊಂಡಿದ್ದಾರೆ. ಬ್ರಿಟನ್‌ನ 100 ಬಾಲ್ ಕ್ರಿಕೆಟ್ ಲೀಗ್‌ನಲ್ಲಿ ಆಡುವ ಲಂಡನ್ ಸ್ಪಿರಿಟ್ ಎನ್ನುವ ತಂಡದ ಶೇ. 49ರಷ್ಟು ಪಾಲುದಾರರು ಅವರು. ಅಮೆರಿಕದ ಎಂಎಲ್‌ಸಿ ಕ್ರಿಕೆಟ್ ಲೀಗ್‌ನಲ್ಲಿ ಆಡುವ ಸಿಯಾಟಲ್ ಆರ್ಕಾಸ್ ಎನ್ನುವ ತಂಡದ ಪಾಲುದಾರರೂ ಹೌದು. ಮೈಕ್ರೋಸಾಫ್ಟ್ ಸಿಇಒ ಅವರಿಗೆ ಕ್ರಿಕೆಟ್ ಮತ್ತು ಕೋಡಿಂಗ್, ಈ ಎರಡು ಸಿ ಎಂದರೆ ಅಚ್ಚುಮೆಚ್ಚು. ಹೀಗಾಗಿ, ಬಿಡುವಿನ ವೇಳೆಯಲ್ಲಿ ಕ್ರಿಕೆಟ್ ವಿಶ್ಲೇಷಣೆ ಮಾಡಬಲ್ಲ ಆಯಪ್ ನಿರ್ಮಿಸಲು ಕೋಡಿಂಗ್ ಬರೆಯುತ್ತಿದ್ದಾರೆ. ಕೃತಕ ಬುದ್ಧಿಮತ್ತೆಯ ರೀಸನಿಂಗ್ ಸಾಮರ್ಥ್ಯ ಬಳಸಿ ಕ್ರಿಕೆಟ್ ಆಟದ ವಿಶ್ಲೇಷಣೆಯನ್ನು ಹೇಗೆ ಮಾಡಬಹುದು ಎಂದು ಅನ್ವೇಷಿಸುವ ಅಥವಾ ಪ್ರಯೋಗ ಮಾಡುವ ಕೆಲಸ ಮಾಡುತ್ತಿದ್ದಾರೆ. ತಮ್ಮ ತಂಡದ ಪ್ಲಾನಿಂಗ್ ಮತ್ತು ಎಕ್ಸಿಕ್ಯೂಶನ್‌ಗೆ ಈ ಅಪ್ಲಿಕೇಶನ್ ಎಷ್ಟರಮಟ್ಟಿಗೆ ಸಹಾಯವಾಗಬಲ್ಲುದು ಎಂಬುದು ಅವರಿಗಿರುವ ಆಸಕ್ತಿ ಮತ್ತು ಕುತೂಹಲ. ಬಹುಶಃ, ಇದು ಮುಂದಿನ ದಿನಗಳಲ್ಲಿ ಕ್ರಿಕೆಟ್ ಕ್ಷೇತ್ರಕ್ಕೆ ಎಐ ನೆರವು ಮತ್ತಷ್ಟು ಹೆಚ್ಚಲು ಕಾರಣವಾಗಬಹುದು. ಮೈಕ್ರೋಸಾಫ್ಟ್ ಸಿಇಒ ಇತ್ತೀಚೆಗೆ ಭಾರತಕ್ಕೆ ಭೇಟಿ ನೀಡಿದ್ದರು. ಭಾರತದಲ್ಲಿ ಮುಂದಿನ ಐದು ವರ್ಷದಲ್ಲಿ 17.5 ಬಿಲಿಯನ್ ಡಾಲರ್ ಹೂಡಿಕೆ ಮಾಡಲಿರುವುದಾಗಿ ಅವರು ಘೋಷಿಸಿದ್ದರು. ಎಐ ಮತ್ತು ಕ್ಲೌಡ್ ಇನ್‌ಫ್ರಾಸ್ಟ್ರಕ್ಚರ್ ಅಭಿವೃದ್ಧಿಪಡಿಸುವ ವಿವಿಧ ಯೋಜನೆಗಳನ್ನು ಮೈಕ್ರೋಸಾಫ್ಟ್ ಕೈಗೊಳ್ಳಲಿದೆ.



## ವೈಭವ್ ಸೂರ್ಯವಂಶಿ ಸಿಡಿಲಬ್ಬರದ ಶತಕ

ದುಬೈನಲ್ಲಿ ಆರಂಭವಾದ U19 ಏಷ್ಯಾಕಪ್‌ನಲ್ಲಿ ಭಾರತ ತಂಡ ಯುಎಇ ವಿರುದ್ಧ ಭರ್ಜರಿ ಬ್ಯಾಟಿಂಗ್ ಪ್ರದರ್ಶಿಸಿದೆ. ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಭಾರತ ಯುವ ಪಡೆ 6 ವಿಕೆಟ್‌ಗೆ 433 ರನ್ ಗಳಿಸಿತು. ಆರಂಭಿಕ ವೈಭವ್ ಸೂರ್ಯವಂಶಿ ಸಿಡಿಲಬ್ಬರದ 171 ರನ್ ಬಾರಿಸಿ ಮಿಂಚಿದರೆ, ಆರನ್ ವರ್ಗೀಸ್ ಮತ್ತು ವಿಹಾನ್ ಮಲ್ಹೋತ್ರಾ ತಲಾ 69 ರನ್ ಗಳಿಸಿ ತಂಡದ ಬೃಹತ್ ಮೊತ್ತಕ್ಕೆ ಕೊಡುಗೆ ನೀಡಿದರು. ದುಬೈನಲ್ಲಿ ಆರಂಭವಾಗಿರುವ 19 ವರ್ಷದೊಳಗಿನವರ ಏಕದಿನ ಏಷ್ಯಾಕಪ್ ಪಂದ್ಯಾವಳಿಯಲ್ಲಿ ಭಾರತ ಹಾಗೂ ಯುಎಇ ತಂಡಗಳು ಮುಖಾಮುಖಿಯಾಗಿವೆ. ಈ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಭಾರತ ಯುವ ಪಡೆ ನಿಗದಿತ 50 ಓವರ್‌ಗಳಲ್ಲಿ 6 ವಿಕೆಟ್ ಕಳೆದುಕೊಂಡು ಬರೋಬ್ಬರಿ 433 ರನ್ ಕಲೆಹಾಕಿದೆ.

ತಂಡವನ್ನು ಈ ಬೃಹತ್ ಮೊತ್ತಕ್ಕೆ ಕೊಂಡೊಯ್ಯುವಲ್ಲಿ ಪ್ರಮುಖ ಪಾತ್ರವಹಿಸಿದ ತಂಡದ ಆರಂಭಿಕ ಬ್ಯಾಟ್ಸ್‌ಮನ್ ವೈಭವ್ ಸೂರ್ಯವಂಶಿ ಸಿಡಿಲಬ್ಬರದ 171 ರನ್‌ಗಳ ಇನ್ನಿಂಗ್ಸ್ ಆಡಿದರೆ, ಆರನ್ ವರ್ಗೀಸ್ ಹಾಗೂ ವಿಹಾನ್ ಮಲ್ಹೋತ್ರಾ ತಲಾ 69 ರನ್‌ಗಳ ಇನ್ನಿಂಗ್ಸ್ ಆಡಿದರು.

ಟಾಸ್ ಸೋತು ಮೊದಲು ಬ್ಯಾಟಿಂಗ್ ಆರಂಭಿಸಿದ ಟೀಂ ಇಂಡಿಯಾ ಪರ ನಾಯಕ ಆಯುಷ್ ಮ್ಹಾತ್ರೆ ಹಾಗೂ ವೈಭವ್ ಸೂರ್ಯವಂಶಿ ಆರಂಭಿಕರಾಗಿ ಕಣಕ್ಕಿಳಿದರು. ಇಬ್ಬರಿಗೆ ಅನುಭವಿಗಳ ಜೊತೆ ಆಡಿದ ಅನುಭವವಿದ್ದ ಕಾರಣ ಒಂದೊಳ್ಳೆ ಆರಂಭದ ನಿರೀಕ್ಷೆ ಇತ್ತು. ಆದರೆ ನಾಯಕ ಆಯುಷ್ ಕೇವಲ 4 ರನ್ ಬಾರಿಸಿ ಔಟಾದರು. ಆ ಬಳಿಕ ಜೊತೆಯಾದ ವೈಭವ್ ಹಾಗೂ ಆರನ್ ವರ್ಗೀಸ್ ದಾಖಲೆಯ ದ್ವಿಶತಕದ ಜೊತೆಯಾಟ ಕಟ್ಟಿದರು. ಇದೇ ವೇಳೆ ವೈಭವ್ ಸೂರ್ಯವಂಶಿ ತಮ್ಮ ಶತಕವನ್ನು ಪೂರೈಸಿದರು. ಇತ್ತ ಆರನ್ ವರ್ಗೀಸ್ ಕೂಡ ಅರ್ಧಶತಕದ ಇನ್ನಿಂಗ್ಸ್ ಆಡಿದರು. ಆದರೆ ಅರ್ಧಶತಕ ಬಾರಿಸಿ ಶತಕದತ್ತ ಮುನ್ನುಗ್ಗುತ್ತಿದ್ದ ಆರನ್ ವರ್ಗೀಸ್ 73 ಎಸೆತಗಳಲ್ಲಿ 69 ರನ್‌ಗಳ ಇನ್ನಿಂಗ್ಸ್ ಆಡಿ ಪೆವಿಲಿಯನ್ ಸೇರಿಕೊಂಡರು. ಮತ್ತೊಂದೆಡೆ ಶತಕ ಬಾರಿಸಿದ ಬಳಿಕವೂ ತಮ್ಮ ಹೊಡಿಬಡಿ ಆಟವನ್ನು ಮುಂದುವರೆಸಿದ ವೈಭವ್‌ಗೆ ವಿಹಾನ್ ಮಲ್ಹೋತ್ರಾ ಅವರಿಂದ ಉತ್ತಮ ಸಾಥ್ ಸಿಕ್ಕಿತು. ಇವರಿಬ್ಬರ ನಡುವೆ ಮೂರನೇ ವಿಕೆಟ್ ಅರ್ಧಶತಕದ ಜೊತೆಯಾಟ ನಡೆಯಿತು.

Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966